ಚಿಂತನ ಬಯಲು

ತ್ರೈಮಾಸಿಕ ISSN 2278-2192

ಸಂಪುಟ : 12, ಸಂಚಿಕೆ : 1 ಜುಲೈ – ಸಪ್ಟೆಂಬರ್ 2023
Volume : 12, Issue : 1 July - September 2023

ಚಿಂತನ ಬಯಲು

ಸಂಪಾದಕಿ
ರೇಶ್ಮಾ ಜಿ. ಭಟ್

ಸಂಪಾದಕೀಯ ಸಲಹೆ
ಡಾ. ಅಜಕ್ಕಳ ಗಿರೀಶ ಭಟ್
ಡಾ. ಶ್ರೀಧರ್ ಎಚ್.ಜಿ.
ಡಾ. ವರದರಾಜ ಚಂದ್ರಗಿರಿ
ಡಾ. ಜಿ.ಬಿ. ಹರೀಶ್
ಶ್ರೀ ಎಂ.ಎ. ಸುಬ್ರಹ್ಮಣ್ಯ

ಚಿಂತನ ಬಯಲು
ನಂ. 15–109, ಮೊಡಂಕಾಪು ಅಂಚೆ
ಬಂಟ್ವಾಳ ತಾಲೂಕು, ದಕ್ಷಿಣ ಕನ್ನಡ – 574 219

CHINTHANA BAYALU
Kannada Quarterly; A Peer Reviewed Journal
Included in UGC - CARE List
Volume 12, Issue 1, July - September 2023

Edited, Published, Printed & Owned by
Reshma G. Bhat
Door No. 15-109, Modankapu Post
Bantwal Taluk, Dakshina Kannada - 574 219
Karnataka
Email : chinthanabayalu@gmail.com

© : Reserved

Size : Dy 1/8

Paper Used : 70 GSM

Pages : 64

Price : Rs. 50

ಮುಖಪುಟ ಛಾಯಚಿತ್ರಗ್ರಹಣ : **Atheetha Brahma**

Cover Design : **Kallur Nagesh**

Designed & Printed at :
Aakrithi Prints
Maximus Complex
Light House Hill Road
Mangaluru - 575 001
Tel. : 0824 2972002 / 7019225774

ಸೂಚನೆ: ಈ ಸಂಚಿಕೆಯಲ್ಲಿ ಪ್ರಕಟವಾದ ಲೇಖನಗಳ ಹಕ್ಕು ಆಯಾ ಲೇಖಕರದ್ದಾಗಿರುತ್ತದೆ. ಇಲ್ಲಿಯ ಲೇಖನಗಳಲ್ಲಿ ವ್ಯಕ್ತವಾಗುವ ಅಭಿಪ್ರಾಯಗಳು ಲೇಖಕರದ್ದೇ ಆಗಿರುತ್ತವೆ. ಅವುಗಳು ಪತ್ರಿಕೆಯ ಅಭಿಪ್ರಾಯಗಳಾಗಿರಬೇಕೆಂದೇನಿಲ್ಲ.

ಪುಟನೋಟ

1. ರಾಣಿ ಚನ್ನಮ್ಮನ ವಿಜಯೋತ್ಸವ ಮತ್ತು ಸೋಲು
❖ ಡಾ. ಶೋಭಾ ನಾಯಕ / 5

2. ಆಧುನಿಕ ಮಹಿಳಾ ಕಾವ್ಯಕ್ಕೆ ಬೆಳಗೆರೆ ಜಾನಕಮ್ಮನವರ ಕೊಡುಗೆ
❖ ಡಾ. ಸುಧಾ ಬಿ.ಎಸ್. / 10

3. ಸು.ರಂ. ಕಥನ ಕವನಗಳಲ್ಲಿ ಪುರಾಣದ ಹೆಣ್ಣುಗಳು
❖ ರೇಶ್ಮಾ ಭಟ್ / 17

4. ಆಖ್ಯಾನಗಳ ವ್ಯಾಖ್ಯಾನ – ಅನ್ವೀಕ್ಷಿಕೀ
❖ ಡಾ. ಅಜಕ್ಕಳ ಗಿರೀಶ ಭಟ್ / 24

5. ಅನುವಾದಿತ ಕಥೆಗಳ ಸಂಕಲನಗಳ ಆಶಯ, ಸ್ವರೂಪ:
1940ರ ದಶಕದ ಪ್ರಕ್ರಿಯೆಯ ಸಮೀಕ್ಷೆ
❖ ಡಾ. ಎಂ.ಎಸ್. ದುರ್ಗಾಪ್ರವೀಣ / 37

6. ಸಂಶೋಧನೆಗಳಲ್ಲಿ ಕುಮಾರವ್ಯಾಸನ ಕಾಲ
❖ ಓಬಳೇಶ ಎನ್./ ಡಾ. ಪಿ.ಎಂ. ಗಂಗಾಧರಯ್ಯ/ 45

7. ತುಳುನಾಡು–ವಾಸ್ತವ್ಯದ ವಾರಸುದಾರಿಕೆ
❖ ಡಾ. ನವೀನ್ / 51

8. ಯಾದವ ದೊರೆ 2ನೇ ಸಿಂಘಣದೇವನ ಅಪ್ರಕಟಿತ ಶಾಸನ
❖ ಡಾ. ಕೆ.ಎಸ್. ಪಾಟೀಲ / 58

9. ಸ್ವಾತಂತ್ರ್ಯ ಹೋರಾಟ– ಹಾಗೆಂದರೇನು?
❖ ಅಜಕ್ಕಳ ಗಿರೀಶ ಭಟ್ . 61

ಸಂಪಾದಕೀಯ

ಕನ್ನಡದ ವಿದ್ವತ್ ಪತ್ರಿಕೆಗಳ ಪೈಕಿ ಚಿಂತನ ಬಯಲು ತನ್ನದೇ ಛಾಪು ಮೂಡಿಸಿರುವುದು ಓದುಗರಿಗೆಲ್ಲ ಗೊತ್ತಿರುವ ಸಂಗತಿಯೇ. ಹಾಗೆಂದು ನಾಡಿನ ಜ್ಞಾನಧಿಕಾರ ಕೇಂದ್ರಗಳಾದ ವಿಶ್ವವಿದ್ಯಾನಿಲಯಗಳಲ್ಲಿ ಅದಕ್ಕೆ ಮನ್ನಣೆ ಸಿಕ್ಕೆದೆಯೆಂದು ಹೇಳಲಾಗದು. ಇದು ಕಥೆ ಇತ್ಯಾದಿ ಕಲ್ಪನಾಧಾರಿತ ಸಾಹಿತ್ಯವಿಲ್ಲದ, ಕೇವಲ ವಿಮರ್ಶೆ ಮತ್ತು ಸಂಶೋಧನ ಬರಹಗಳಿರುವ ಪತ್ರಿಕೆಯಾಗಿ ಯುಜಿಸಿ ಕೇರ್ ಲಿಸ್ಟಿನಲ್ಲಿ ಅರ್ಹವಾಗಿಯೇ ಸ್ಥಾನ ಪಡೆದಿದೆ. ಆದರೆ ಆ ಪಟ್ಟಿಯಲ್ಲಿರುವ ಕನ್ನಡದ ಬೆರಳೆಣಿಕೆಯ ಪತ್ರಿಕೆಗಳಲ್ಲಿ ಇದು ಒಂದಾಗಿದ್ದರೂ ಇದಕ್ಕೆ ನಿಯಮಿತವಾಗಿ ಚಂದಾ ಪಾವತಿಸುವ ಕರ್ನಾಟಕದ ವಿಶ್ವವಿದ್ಯಾನಿಲಯಗಳ ಸಂಖ್ಯೆ ಎಷ್ಟೆಂದರೆ ಒಂದು ವಿವಿಧ ವಿಶ್ವವಿದ್ಯಾನಿಲಯಗಳ ಪಿಎಚ್.ಡಿ. ಸಂಶೋಧಕರು ಮತ್ತು ಪ್ರಾಧ್ಯಾಪಕರು ತಮ್ಮ ಸಂಶೋಧನೆಯ ಪೂರೈಕೆಯ ತಾಂತ್ರಿಕ ಅಗತ್ಯಕ್ಕಾಗಿ ಲೇಖನಗಳನ್ನೇನೋ ಕಳುಹಿಸುತ್ತಾರೆ. ಆದರೆ ವಿಶ್ವವಿದ್ಯಾನಿಲಯಗಳ ಗ್ರಂಥಾಲಯಗಳಿಗೆ ಕಳುಹಿಸಿದ ಉಚಿತ ಸ್ಯಾಂಪಲ್ ಪ್ರತಿಗಳನ್ನೂ ಅವರು ನೋಡಿರುವುದಿಲ್ಲ. ಇನ್ನ, ಚಂದಾ? ಹಾಗೆಂದರೇನು? ಎಂದು ಕೇಳುವವರೇ ಅಧಿಕ. ನಮ್ಮ ಉನ್ನತ ಶಿಕ್ಷಣ ಕ್ಷೇತ್ರ, ಅದರಲ್ಲೂ ಮಾನವಿಕ ಮತ್ತು ಸಮಾಜವಿಜ್ಞಾನ ವಿಭಾಗಗಳು ಯಾಕೆ ಹೀಗಿವೆ ಎಂಬ ಕಲ್ಪನೆ ಓದುಗರಿಗೆ ಬರಲಿ ಎಂದಷ್ಟೇ ಇಷ್ಟನ್ನು ಹೇಳಬೇಕಾಯಿತು.

–ಸಂ.

ರಾಣಿ ಚನ್ನಮ್ಮನ ವಿಜಯೋತ್ಸವ ಮತ್ತು ಸೋಲು

ಡಾ. ಶೋಭಾ ನಾಯಕ
ಸಹಾಯಕ ಪ್ರಾಧ್ಯಾಪಕರು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ

ರಾಣಿ ಚನ್ನಮ್ಮನ ಚರಿತ್ರೆಯೂ ಕೂಡಾ ಒಂದು ರಾಜಕೀಯ ಚರಿತ್ರೆಯಾಗಿದೆ. ಸಾಮಾನ್ಯವಾಗಿ ರಾಜಕೀಯ ಚರಿತ್ರೆಯಲ್ಲಿ ಸಾಮ್ರಾಜ್ಯ ವಿಸ್ತರಿಸುವ ವಿದ್ಯಮಾನಗಳು ಮುಖ್ಯವಾಗಿರುತ್ತವೆ. ರಾಣಿ ಚನ್ನಮ್ಮನ ಚರಿತ್ರೆಯನ್ನು ಸ್ಥೂಲವಾಗಿ ಗಮನಿಸಿದಲ್ಲಿ ರಾಜ್ಯ ವಿಸ್ತರಣೆಯ ಪ್ರಶ್ನೆಯಾಗಲಿ, ಸಾಮ್ರಾಜ್ಯಶಾಹಿ ಧೋರಣೆಯಾಗಲಿ ಕಂಡು ಬರುವುದಿಲ್ಲ. ಚನ್ನಮ್ಮ ತನ್ನ ಹನ್ನೆರಡನೆಯ ವರ್ಷದಲ್ಲಿ ಮದುವೆಯಾಗಿ ಕಾಕತಿಯಿಂದ ಕಿತ್ತೂರಿಗೆ ಪಯಣಿಸಿದಳು. ಕಿತ್ತೂರಿನಲ್ಲಿ ಮಲ್ಲಸರ್ಜ ದೇಸಾಯಿಯ ರಾಜ್ಯ ಕಾರ್ಯಗಳಲ್ಲಿ ಅನವರತ ತೊಡಗಿಕೊಂಡಳು. ತನಗಿಂತ ಹಿರಿಯಳಾದ ಅಕ್ಕ ರುದ್ರಮ್ಮನ ಮಾರ್ಗದರ್ಶನವೂ ಇತ್ತು. ಮಲ್ಲಸರ್ಜ ದೇಸಾಯಿ ಕಾಲದಲ್ಲಿ ರಾಜಕೀಯ ವಿದ್ಯಮಾನಗಳು ಸರಳ ರೇಖಾತ್ಮಕವಾಗಿರಲಿಲ್ಲ. ಒಂದು ಕಡೆ ಪೇಶ್ವೆಗಳು ಮತ್ತೊಂದು ಕಡೆ ಹೈದರ ಮತ್ತು ಟಿಪ್ಪು ಇನ್ನೊಂದು ಕಡೆ ಬ್ರಿಟಿಷರು. ಹೀಗೆ ಸಂಘರ್ಷ ಸಹಜವಾಗಿಯೇ ಇತ್ತು. ಒಂದಲ್ಲ ಒಂದು ರೀತಿಯಲ್ಲಿ ಇಡಿ ಕಿತ್ತೂರು ಸಂಸ್ಥಾನ ಮಲ್ಲಸರ್ಜನ ಕಾಲದ ಅಧಿಕಾರಾವಧಿಯಲ್ಲಿಯೂ ತೊಂದರೆಯಲ್ಲಿದ್ದುದನ್ನೂ ಚರಿತ್ರೆಯ ಸ್ಥೂಲ ಓದಿನಿಂದ ತಿಳಿಯುತ್ತದೆ. ರಾಣಿ ಚನ್ನಮ್ಮನ ಆಡಳಿತ ಅವಧಿಯಲ್ಲಿ ಎರಡು ಯುದ್ಧಗಳು ಘಟಿಸಿದ್ದವು. ಅವುಗಳೆಂದರೆ ಒಂದು ಮೊದಲನೆಯ ಆಂಗ್ಲೋ ಕಿತ್ತೂರು ಯುದ್ಧ ಮತ್ತು ಎರಡನೆಯ ಆಂಗ್ಲೋ ಕಿತ್ತೂರು ಯುದ್ಧ. ರಾಣಿ ಚನ್ನಮ್ಮ ವಾಸ್ತವವಾಗಿ ಸಮರ ಪ್ರೇಮಿಯಲ್ಲ. ರಣ ಕಲಿಯಲ್ಲ. ಶಾಂತಿಯೇ ಅವಳ ಜೀವನದ ಭಾಗವಾಗಿತ್ತು. ನಿರಂತರ ಶಿವನ ಧ್ಯಾನದಲ್ಲಿರುತ್ತಿದ್ದ ಚನ್ನಮ್ಮಳು ಎಂದೂ ಯುದ್ಧಾಸಕ್ತಿಯನ್ನು ಬಯಸಿದವಳಲ್ಲ. ಪ್ರಜಾನುರಾಗಿಯೂ ಹಾಗೂ ಯೋಗ್ಯ ಆಡಳಿತವನ್ನು ನೀಡುವ ತನ್ನ ಸಂಸ್ಥಾನದ ಬಗೆಗೆ ಚನ್ನಮ್ಮಳಿಗೆ ಹೆಮ್ಮೆಯ ಭಾವವಿತ್ತು. ರಾಜಗುರು ಕಲ್ಮಠದ ಆಚಾರ್ಯರು ಸೂಕ್ತ ಸಂದರ್ಭದಲ್ಲಿ ಸೂಕ್ತ ಮಾರ್ಗದರ್ಶನಗಳನ್ನು ನೀಡುತ್ತಿದ್ದರು. ರಾಣಿ ಚನ್ನಮ್ಮನ ಕಾಲಘಟ್ಟದಲ್ಲಿ ನಡೆದ ಎರಡು ಯುದ್ಧಗಳ ಬಗೆಗೆ ಪರೀಶಿಲಿಸುತ್ತಾ ಈ ಕೆಳಗಿನ ಅಭಿಪ್ರಾಯಗಳನ್ನು ಕಂಡುಕೊಳ್ಳಬಹುದಾಗಿದೆ.

1. ಮೊದಲನೆಯ ಆಂಗ್ಲೋ ಕಿತ್ತೂರು ಯುದ್ಧ

ಮೊದಲನೆಯ ಆಂಗ್ಲೋ ಕಿತ್ತೂರು ಯುದ್ಧವು ಘಟಿಸಿದ್ದು 1824ರ ಅಕ್ಟೋಬರ 23 ರಂದು. ಕಿತ್ತೂರಿನ ಕೋಟೆಯನ್ನು ವಿನಾಕಾರಣ ಬ್ರಿಟಿಷರು ಮುತ್ತಿಗೆ ಹಾಕಿದ್ದರು. ಸಂಸ್ಥಾನದಲ್ಲಿರುವ ಆಂತರಿಕ ದ್ರೋಹಿ ಶಕ್ತಿಗಳು ಬ್ರೀಟಿಷರ ದಾಳಿಗೆ ಕಾರಣವಾಗಿವೆ ಎಂದು ಎಲ್ಲ ಇತಿಹಾಸಕಾರರು ಅಭಿಪ್ರಾಯಪಡುತ್ತಾರೆ. ಉತ್ತರ ಕರ್ನಾಟಕದ ಹತ್ತಾರು ಜಿಲ್ಲೆಗಳ ಪ್ರಾದೇಶಿಕ ಆಯುಕ್ತನಾಗಿದ್ದ ಥ್ಯಾಕರೆಯು ಮೇಲಿಂದ ಮೇಲೆ

ಕೊಡುತ್ತಿದ್ದ ತೊಂದರೆಯನ್ನು ಸಹಿಸಲಾರದೇ ಅನಿವಾರ್ಯವಾಗಿ ಕಿತ್ತೂರು ಸಂಸ್ಥಾನಿಕರು ಯುದ್ಧಕ್ಕೆ ನಿರತರಾಗಬೇಕಾಯಿತು. ತನ್ನ ಮಗ ಶಿವಲಿಂಗ ಸರ್ಜಾ ದೇಸಾಯಿಯ ನಿಧನದ ನಂತರ ದತ್ತಕ ಪುತ್ರನಾಗಿ ಶಿವಲಿಂಗಪ್ಪನನ್ನು ಸ್ವೀಕಾರ ಮಾಡಿದ ಹಿನ್ನೆಲೆಯಲ್ಲಿ ಸಂಘರ್ಷವು ತಲೆದೋರಿತು. ದತ್ತಕವು ಶಿವಲಿಂಗಸರ್ಜ ದೇಸಾಯಿಯ ಮತದಂತೆ ನಡೆದಿಲ್ಲ ಎನ್ನುವುದು ಥ್ಯಾಕರೆಯ ವಾದವಾಗಿತ್ತು. ಬದುಕಿರುವಾಗಲೇ ಶಿವಲಿಂಗಸರ್ಜ ದೇಸಾಯಿಯು ಶಿವಲಿಂಗನನ್ನು ದತ್ತಕ ಪುತ್ರನನ್ನಾಗಿ ಸ್ವೀಕರಿಸಲಾಗಿತ್ತು. ದತ್ತು ಕಾರ್ಯಕ್ರಮವು ಹಿಂದೂ ಉತ್ತರಾಧಿಕಾರಿ ಕಾಯ್ದೆಯಂತೆ ನಡೆದಿತ್ತು. ಆದರೆ ಅದೇ ಸಂಸ್ಥಾನದಲ್ಲಿದ್ದ ರಾಜದ್ರೋಹಿಗಳು ದತ್ತಕವು ವಿಧಿವತ್ತಾಗಿ ನಡೆದಿಲ್ಲ ಹಾಗೂ ಅದರ ವರದಿಯನ್ನು ನಿಗದಿತ ಸಮಯದೊಳಗೆ ಕಂಪನಿ ಸರಕಾರದ ಕಚೇರಿಗೆ ಸಲ್ಲಿಸಿಲ್ಲ ಎನ್ನುವುದು ಥ್ಯಾಕರೆಯ ನಿಲುವಾಗಿತ್ತು. ಹಿಂದೂ ಉತ್ತರಾಧಿಕಾರಿ ಕಾಯ್ದೆಯಡಿ ಶಿವಲಿಂಗಸರ್ಜ ದೇಸಾಯಿಯ ಮರಣದ ನಂತರ ದತ್ತಕವನ್ನು ಪಡೆದುಕೊಳ್ಳಲು ಬರುವುದಿಲ್ಲ ಆದರೆ ಶಿವಲಿಂಗಸರ್ಜ ದೇಸಾಯಿಯು ದತ್ತಕವನ್ನು ತಾನು ಬದುಕಿರುವಾಗಲೇ ತೆಗೆದುಕೊಂಡು ಕಾಗದ ಪತ್ರಗಳಿಗೆ ಸಹಿ ಮಾಡಿದ್ದನು. ಮರಣಾವಸ್ಥೆಯಲ್ಲಿದ್ದ ಶಿವಲಿಂಗಸರ್ಜ ದೇಸಾಯಿಯ ಹಸ್ತಾಕ್ಷರಗಳಲ್ಲಿ ತುಸು ವ್ಯತ್ಯಾಸಗಳಿರುವುದನ್ನು ಕಂಡು ಥ್ಯಾಕರೆ ಇದು ಶಿವಲಿಂಗಸರ್ಜ ದೇಸಾಯಿ ಮಡಿದ ನಂತರ ಮಾಡಿದ ದತ್ತಕವಾಗಿದೆ. ಆದ್ದರಿಂದ ಇಲ್ಲಿ ಯಾವುದೋ ಹುನ್ನಾರ ನಡೆದಿದೆ ಎಂದು ಭಾವಿಸಿದ್ದನು. ತರುಣ ವಿಧವೆಯಾಗಿದ್ದ ವೀರಮ್ಮಳು ಹಸ್ತಾಕ್ಷರವು ಸರಿಯಾಗಿಯೇ ಇದ್ದಿತ್ತು. ಸಂಸ್ಥಾನದ ಕೆಲವು ದ್ರೋಹಿಗಳು ವೀರಮ್ಮಳು ಚನ್ನಮ್ಮನ ಬೆಂಬಲದಿಂದ ದತ್ತಕವನ್ನು ಶಿವಲಿಂಗಸರ್ಜನು ಮರಣಿಸಿದ ನಂತರ ಪಡೆದುಕೊಂಡಿರುವಳು ಎಂದು ಸುಳ್ಳು ಆರೋಪಗಳನ್ನು ಸಂದೇಶವನ್ನು ಗುಪ್ತವಾಗಿ ಥ್ಯಾಕರೆಗೆ ನೀಡಿದ್ದರು.

ಇವರ ಪರಿಣಾಮವಾಗಿ ಥ್ಯಾಕರೆಯು ದತ್ತಕವು ವಿಧಿವತ್ತಾಗಿ ನಡೆದಿಲ್ಲ. ಆದುದರಿಂದ ಈಗ ತೆಗೆದುಕೊಂಡಿರುವ ದತ್ತಕವು ಸಿಂಧುವಾದುದಲ್ಲ ಎಂದು ತಿಳಿಸಿದರು. ಇಷ್ಟು ಮಾತ್ರವಲ್ಲದೇ ಅರಮನೆಯ ಮತ್ತು ಕಿತ್ತೂರಿನ ಸಂಸ್ಥಾನದ ಭಂಡಾರ ಆಡಳಿತ ಇತ್ಯಾದಿಗಳನ್ನು ನೋಡಿಕೊಳ್ಳಲು ಕನ್ನೂರು ಮಲ್ಲಪ್ಪ ಶೆಟ್ಟಿ ಮತ್ತು ವೆಂಕಟರಾವ್ ಅವರಿಗೆ ಜವಾಬ್ದಾರಿಯನ್ನು ನೀಡಿದನು. ಅರಮನೆಯ ಎಲ್ಲ ಉಸ್ತುವಾರಿಯನ್ನು ಅವರೇ ನೋಡಿಕೊಳ್ಳಬೇಕೆಂದು ಫರಮಾನು ಹೊರಡಿಸಿದನು. ಅರಮನೆಯಿಂದ ಯಾರೂ ಹೊರಗೆ ಹೋಗುವಂತಿಲ್ಲ. ಹೊರಗಿನಿಂದ ಯಾರೂ ಅರಮನೆಗೆ ಬರುವಂತಿಲ್ಲ ಎಂದು ಕಟ್ಟಪ್ಪಣೆ ವಿಧಿಸಿದನು. ಇದರಿಂದ ಕುಪಿತಗೊಂಡ ಚನ್ನಮ್ಮ ನನ್ನ ದೇಶದ ವ್ಯವಹಾರಗಳಿಗೆ ಕೈಹಾಕಲು ಇವರ್‍ಯಾರು ಎಂದು ಪ್ರಶ್ನಿಸಿ ಪ್ರತಿರೋಧ ಒಡ್ಡಿದಳು. ಕಾಲಕ್ರಮೇಣ ಕಲ್ಮಠದ ಶ್ರೀಗಳು ಸರ್ದಾರ ಗುರುಸಿದ್ಧಪ್ಪ ಹಾಗೂ ಸಂಸ್ಥಾನದ ಪ್ರಮುಖರೊಡನೆ ಚರ್ಚಿಸಿ ಸಮರ ಸನ್ನದ್ಧಳಾದಳು. ಕಿತ್ತೂರಿನ ಸ್ವಾಭಿಮಾನದ ಪ್ರಜೆಗಳಿಗೆ ಇದು ನುಂಗಲಾರದ ತುತ್ತಾಯಿತು. ಒಂದು ಕಡೆ ಕಾರಭಾರಿಗಳು. ಮತ್ತೊಂದಡೆ ರಾಜ ಮನೆತನದವರು. ಇವೆರಡರ ನಡುವೆ ಬಹುಜನರು ಚನ್ನಮ್ಮನಿಗೆ ಬೆಂಬಲ ನೀಡಿದರು. ಸರ್ದಾರ ಗುರುಸಿದ್ಧಪ್ಪ ನೇತ್ರತ್ವ ವಹಿಸಿ ಸಮರಕ್ಕೆ ಸನ್ನದ್ಧರಾದರು. ಬ್ರಿಟಿಷರು ಮುತ್ತಿದ್ದ ಕಿತ್ತೂರಿನ ಕೋಟೆಯ ಬಾಗಿಲು

ಮುಚ್ಚಲ್ಪಟ್ಟಿತ್ತು. ಹೊರಗಡೆಯಿಂದ ಬ್ರಿಟಿಷ ಸೈನಿಕರು ಕೋಟೆಯನ್ನು ನುಗ್ಗಲು ಸಕಲ ಸಿದ್ಧತೆಯನ್ನು ಮಾಡಿಕೊಂಡು ತುಫಾಕಿಗಳನ್ನು ಸಿದ್ಧಪಡಿಸಿ ಬಾಗಿಲನ್ನು ಸಿಡಿಮದ್ದಿನಿಂದ ಹೊಡೆದು ಹಾಕುವ ಬೆದೆರಿಕೆ ಹಾಕಿದರು. ಬ್ರಿಟಿಷ ಸೈನ್ಯ ಒಳನುಗ್ಗಲು ಇನ್ನಿಲ್ಲದ ಪ್ರಯತ್ನವನ್ನು ಮಾಡುತ್ತಿತ್ತು. ಇನ್ನೇನೂ ಬಾಗಿಲು ಸಿಡಿಯುವ ಮೊದಲು ಸರ್ದಾರ ಗುರುಸಿದ್ಧಪ್ಪ ಮತ್ತು ರಾಣಿ ಚನ್ನಮ್ಮರು ಕೋಟೆಯೊಳಗಿನಿಂದ ಬಾಗಿಲನ್ನು ತೆರೆದರು. ಸನ್ನದ್ಧರಾಗಿದ್ದ ಕಿತ್ತೂರು ಸೈನ್ಯ ಬ್ರಿಟಿಷ ಸೈನ್ಯದ ಮೇಲೆರಗಿತ್ತು. ಏನು ಮಾಡಬೇಕೆಂದು ಯೋಚಿಸುವುದರೊಳಗೆ ವೀರ ಕೇಸರಿ ಆಮಟೂರು ಬಾಳಪ್ಪ ಥ್ಯಾಕರೆ ಸಾಹೇಬನನ್ನು ಕೊಂದು ಹಾಕಿದನು. ಅಮಟೂರು ಬಾಳಪ್ಪ ಚನ್ನಮ್ಮನ ಅಂಗರಕ್ಷಕ ಪಡೆಯ ಯೋಧನಾಗಿದ್ದನು. ಹತ್ತಾರು ಗಂಟೆಗಳ ಯುದ್ಧವು ನಡೆದು ಎರಡು ಪಕ್ಷದ ಸಾವಿರಾರು ಸೈನಿಕರು ಅಮರರಾದರು. ಅಂತಿಮವಾಗಿ ಕಿತ್ತೂರಿಗೆ ಜಯ ಲಭಿಸಿತು. ಕಿತ್ತೂರಿನ ಈ ವಿಜಯವು ರಾಣಿ ಚನ್ನಮ್ಮನ ಜಯವೇ ಆಗಿತ್ತು.

ವಸಾಹಾತು ಚರಿತ್ರೆಯಲ್ಲಿ ಈ ತರಹದ ಮತ್ತೊಂದು ಉದಾಹರಣೆ ಕಂಡು ಬಂದಿಲ್ಲ. ಸೂರ್ಯ ಮುಳುಗದ ಸಾಮ್ರಾಜ್ಯ ಎಂದು ಕರೆಯಿಸಿಕೊಳ್ಳುತ್ತಿದ್ದ ಬ್ರಿಟಿಷ ಸೈನ್ಯ ದಿಕ್ಕೆಟ್ಟು ಓಡಿತು. ಸೈನ್ಯಾಧಿಪತಿಯಂತಿದ್ದ ಕಲೆಕ್ಟರ್ ಥ್ಯಾಕರೆಯು ಸತ್ತು ಬಿದ್ದಿದ್ದನು. ಸುದ್ದಿ ಈಸ್ಟ್ ಇಂಡಿಯಾ ಕಂಪನಿಗೆ ತಿಳಿಯುತ್ತಲೇ ಸಣ್ಣ ಸಂಸ್ಥಾನದ ಮೇಲೆ ಕಂಪನಿ ಸರಕಾರ ಸೇಡು ತಿರೀಸಿಕೊಳ್ಳಲು ತಂತ್ರಗಾರಿಕೆಯನ್ನು ಹೆಣೆಯಲಾರಂಭಿಸಿತು. ಕಿತ್ತೂರಿನ ವಿಜಯೋತ್ಸವ ಬಹಳ ಕಾಲ ಉಳಿಯಲಿಲ್ಲ. ಇದು ಕಿತ್ತೂರಿನ ಸೈನ್ಯಾಧಿಪತಿಯಾದ ಸರದಾರ ಗುರುಸಿದ್ಧಪ್ಪನಿಗೂ ಚನ್ನಾಗಿ ಗೊತ್ತಿತ್ತು. ಚನ್ನಮ್ಮಾಜಿ ಅರಮನೆಯಾದಿಯಾಗಿ ಎಲ್ಲರಿಗೂ ಗೊತ್ತಿತ್ತು. ನಮ್ಮ ಸಣ್ಣ ಸಂಸ್ಥಾನಕ್ಕೆ ಈಸ್ಟ್ ಇಂಡಿಯಾ ಕಂಪನಿ ಯಾವುದೇ ಸಂದರ್ಭದಲ್ಲಿ ತೊಂದರೆ ಕೊಡಬಹುದು, ಕೇಡನ್ನು, ದುರಂತವನ್ನು ತಂದೊಡ್ಡಬಹುದು ಎಂದು ನೀರಿಕ್ಷೆಯನ್ನಿಟ್ಟುಕೊಂಡಿದ್ದರು. ರಾಣಿ ಚನ್ನಮ್ಮ ನಡೆದುದ್ದು ನಡೆದು ಹೋಯಿತು. ಕಿತ್ತೂರು ಮತ್ತು ಈಸ್ಟ್ ಇಂಡಿಯಾ ಕಂಪನಿಗಳು ಪರಸ್ಪರ ಕಾದಾಡುವುದನ್ನು ಬಿಟ್ಟು ಸ್ನೇಹ ಸೌಹಾರ್ದತೆಗಳಿಂದ ಇರಬಹುದೆಂದು ಹತ್ತಾರು ಕಡೆಗಳಿಂದ ಪ್ರಯತ್ನ ನಡೆಸಿದ್ದಳು. ಸಣ್ಣ ಸಂಸ್ಥಾನವೊಂದು ಬ್ರಿಟಿಷ ಈಸ್ಟ್ ಇಂಡಿಯಾ ಕಂಪನಿಯನ್ನು ಸೋಲಿಸಿದ ನಿದರ್ಶನವೇ ಇಲ್ಲದ ಅಂದು ಅದೊಂದು ಪ್ರತಿಷ್ಠೆಯ ಪ್ರಶ್ನೆಯಾಗಿ ಕಂಪನಿ ಸರಕಾರದ ಮುಂದೆ ಬಹುದೊಡ್ಡ ವಿಷಯವಾಗಿ ತಲೆದೋರಿತು. ಹೇಗಾದರೂ ಮಾಡಿ ಕಿತ್ತೂರು ಸಂಸ್ಥಾನವನ್ನು ಅಳಿಸಿ ಹಾಕಬೇಕೆಂಬ ಸರ್ವಸಿದ್ಧತೆಯನ್ನು ಮಾಡಿಕೊಂಡರು. ಕಿತ್ತೂರಿಗಂತೂ ಅಕ್ಟೋಬರ 24,1824ರಿಂದಲೇ ಭಯ ಆವರಿಸತೊಡಗಿತ್ತು. ಯಾವುದೇ ಕ್ಷಣದಲ್ಲೂ ಬ್ರಿಟಿಷ ಪಡೆಗಳು ನಮ್ಮ ಮೇಲೆ ಎರಗಬಹುದೆಂಬ ಭಯ ಕಿತ್ತೂರು ನಾಗರಿಕರಲ್ಲಿ ಉಳಿದುಕೊಂಡವು. ಹಾಗಾಗಿ 23 ಅಕ್ಟೋಬರ 1824ರ ಜಯವು ಕೇವಲ ಚರಿತ್ರೆಯಲ್ಲಿ ದಾಖಲಾಯಿತೇ ಹೊರತು ಅದನ್ನು ಸಂಭ್ರಮಿಸುವ ಉತ್ಸಾಹದಲ್ಲಿ ಕಿತ್ತೂರು ಸಂಸ್ಥಾನ ಇರಲಿಲ್ಲ.

2 ಎರಡನೆಯ ಆಂಗ್ಲೋ ಕಿತ್ತೂರು ಯುದ್ಧ

ಎರಡನೆಯ ಆಂಗ್ಲೋ ಕಿತ್ತೂರು ಯುದ್ಧವು ಮೊದಲನೆಯ ಆಂಗ್ಲೋ ಕಿತ್ತೂರು ಯುದ್ಧದಷ್ಟು ಗಹನವಾಗಿರಲಿಲ್ಲ. ದೊಡ್ಡ ಸಾಮ್ರಾಜ್ಯ ವ್ಯವಸ್ಥೆಯೊಂದು

ಸಣ್ಣ ಸಂಸ್ಥಾನದ ಮೇಲೆ ನಡೆಸಿದ ದಾಳಿಯಂತೆ ಅದು ಕಂಡು ಬಂದಿತು. ರಾಣಿ ಚನ್ನಮ್ಮ ಹಾಗೂ ಸರದಾರ ಗುರುಸಿದ್ಧಪ್ಪ ಎಷ್ಟೇ ಪ್ರಯತ್ನಪಟ್ಟರೂ ರಾಜನೈತಿಕ ಸಂಬಂಧಗಳು ವಿಫಲಗೊಂಡವು. ಬ್ರಿಟಿಷ ಕಂಪನಿ ಸರಕಾರದ ಮುಂದೆ ಸೇಡು ಹಾಗೂ ದಮನಗೊಳಿಸುವ ಧೋರಣೆಯೂ ತಲೆದೋರಿತ್ತು. ಅನಿವಾರ್ಯತೆಗಳನ್ನು ಎಷ್ಟೇ ಮನವರಿಕೆ ಮಾಡಿಕೊಡುವ ಪ್ರಯತ್ನವನ್ನು ನಡೆಸಿದರೂ ಅವರಿಗೆ ಪರಿಸ್ಥಿತಿಯ ಮನವರಿಕೆ ಆಗಲಿಲ್ಲ. ಥ್ಯಾಕರೆಯ ನೀಚ ಪ್ರವೃತ್ತಿ ಹಾಗೂ ವೈಯಕ್ತಿಕ ದೌರ್ಬಲ್ಯಗಳಿಂದ ಹತ್ಯೆಯಾದುದನ್ನು ತಿಳಿಸಿದರೂ ಅವರು ಅದರ ಸತ್ಯಾಸತ್ಯತೆಯನ್ನು ಪರಾಂಬರಿಸಿ ನೋಡಲಿಲ್ಲ. ಕಂಪನಿ ಸರಕಾರದ ದೊಡ್ಡ ಅಧಿಕಾರಿಯೊಬ್ಬ ಹೀಗೆ ಶವವಾದದ್ದು ಹಿಂಸೆಯ ಭಾಗವೆಂದು ಭಾವಿಸಿದರು. ಹೀಗಾಗಿ ಪೂರ್ಣಪ್ರಮಾಣದಲ್ಲಿ ಕಂಪನಿ ಸರಕಾರವು ಯುದ್ಧಕ್ಕೆ ಎಲ್ಲಾ ರೀತಿಯಿಂದಲೂ ಸಿದ್ಧತೆ ಮಾಡಿಕೊಂಡಿತ್ತು. ಚಿತ್ರದುರ್ಗ, ಮೈಸೂರು, ಪುಣೆ ಎಲ್ಲ ಭಾಗಗಳಿಂದ ಸಂಯುಕ್ತ ಸೇನೆಯನ್ನು ಕರೆಯಿಸಿಕೊಳ್ಳಲಾಗಿತ್ತು. ಕಿತ್ತೂರಿನ ಅನತಿ ದೂರದಲ್ಲಿ ಮಲಪ್ರಭೆಯ ಎಡ ಬಲ ದಂಡೆಗಳಲ್ಲಿ ಸೇನೆಗಳು ಬೀಡುಬಿಟ್ಟವು. ಸ್ವತಃ ಚಾಪ್ಲಿನ ಯುದ್ಧ ಸನ್ನಹದಲ್ಲಿದ್ದನು. ಮುಂಬೈ ಪ್ರಾಂತಕ್ಕೆ ಕಿತ್ತೂರು ಸಂಸ್ಥಾನವನ್ನು ಬಗ್ಗು ಬಡಿದು ವರದಿ ಮಾಡುವ ಸಂಕಲ್ಪವನ್ನು ತೊಟ್ಟಿದ್ದನು. ಅಂದಿನ ಕಾಲಘಟ್ಟದಲ್ಲಿ ಕಿತ್ತೂರು ಸಂಸ್ಥಾನವನ್ನು ದಕ್ಷಿಣ ಮಹಾರಾಷ್ಟ್ರದ ಪ್ರಾಂತವೆಂದು ಗುರುತಿಸಿದ್ದರು. ಯುದ್ಧವು ಡಿಸೆಂಬರ ನಾಲ್ಕನೆಯ ತಾರೀಕಿನಂದು ಆರಂಭವಾಯಿತು. ಹೀಗೆ ಆರಂಭವಾದ ಯುದ್ಧದಲ್ಲಿ ಅಪ್ರತಿಮ ವೀರ ಆಮಟೂರು ಬಾಳಪ್ಪನನ್ನು ಸ್ವತಃ ಚಾಪ್ಲಿನ್ ಗುಂಡು ಹೊಡೆಯುವುದರ ಮೂಲಕ ಕೊಂದುಹಾಕಿದನು. ಹಲವಾರು ಯೋಧರು ಎರಡನೆಯ ಆಂಗ್ಲೋ ಕಿತ್ತೂರು ಯುದ್ಧದಲ್ಲಿ ಮಡಿದರು. ಕಿತ್ತೂರು ಸಂಸ್ಥಾನವನ್ನು ಬ್ರಿಟಿಷರು ವಶಪಡಿಸಿಕೊಂಡರು. ಭಂಡಾರದಲ್ಲಿದ್ದ ಸಂಪತ್ತನ್ನೆಲ್ಲ ಈಸ್ಟ್ ಇಂಡಿಯಾ ಕಂಪನಿಯ ಪಟ್ಟಿಗೆ ಸೇರಿಸಿದರು. ರಾಣಿ ಚನ್ನಮ್ಮಳ ಸೈನ್ಯದ ತೋಪುಗಳು ಒಳದ್ರೋಹಿಗಳ ಸಂಚಿನಿಂದ ಸಿಡಿಯಲಿಲ್ಲ. ಕೊಲ್ಹಾಪುರ ಅರಸರು ನೀಡಿದ ಸಹಾಯವನ್ನು ಪಡೆಯಲು ಬ್ರೀಟಿಷರು ಬಿಡಲಿಲ್ಲ. ಪರಿಣಾಮವಾಗಿ ಕಿತ್ತೂರು ಸೋತು ಪೂರ್ಣಪ್ರಮಾಣದಲ್ಲಿ ಈಸ್ಟ್ ಇಂಡಿಯಾ ಕಂಪನಿಯ ವಶವಾಯಿತು. ಮುಂದುವರಿದು ಚನ್ನಮ್ಮ, ರುದ್ರಮ್ಮ, ವೀರಮ್ಮ ಅವರನ್ನು ಬಂಧಿಸಿ ಬೈಲಹೊಂಗಲದ ಜೈಲಿನಲ್ಲಿ ಇಡಲಾಯಿತು. ಹೀಗೆ ಚನ್ನಮ್ಮಳು ನಡೆಸಿದ ಎರಡನೆಯ ಆಂಗ್ಲೋ ಕಿತ್ತೂರು ಯುದ್ಧವಾಗುವುದರ ಮೂಲಕ ಕಿತ್ತೂರು ಹಾಗೂ ಕಿತ್ತೂರಿನ ಜನತೆ ಸ್ವಾವಲಂಬನೆಯನ್ನು ಕಳೆದುಕೊಂಡು ಪರಾವಲಾಂಬಿಗಳಾದರು. ಅಲ್ಲಿಂದ ಮುಂದೆ ಬ್ರಿಟಿಷರು ಕಿತ್ತೂರು ಕೋಟೆಯನ್ನು ನಾಶ ಮಾಡುತ್ತಾ ಬಂದರು. ಕಿತ್ತೂರು ಕೋಟೆಯನ್ನು ಸುಸ್ಥಿತಿಯಲ್ಲಿಟ್ಟರೆ ಮತ್ತೆ ಅಲ್ಲಿನ ಯೋಧರಿಗೆ ಸ್ವಾವಲಂಬನೆ ಮತ್ತು ದೇಶಪ್ರೇಮದ ಕನಸು ಹುರಿಗಟ್ಟಬಹುದು ಎಂಬುದು ಅವರ ಧೋರಣೆಯಾಗಿತ್ತು.

ತನ್ನ ಸರ್ವಸ್ವವನ್ನು ಕಳೆದುಕೊಂಡ ಚನ್ನಮ್ಮ ಅವರು ಬಂಧಿಸಿಟ್ಟ ಜೈಲಿನಲ್ಲಿ ಮೃತಳಾದದ್ದು ಒಂದು ತರಹದ ಅಪಜಯವೇ ಆಗಿತ್ತು. ಒಂದು ಕಾಲದಲ್ಲಿ ಕೊಡುಗೈದಾನಿಯಾಗಿ, ಅಪ್ರತಿಮ ವೀರಳಾಗಿ, ಕೆಚ್ಚದೆಯ ಸ್ವಾಭಿಮಾನದ ಸಂಕೇತವಾಗಿದ್ದ ಚನ್ನಮ್ಮ ಪಂಜರದೊಳಗಿನ ಸಿಂಹದಂತೆ ಇರಬೇಕಾಯಿತು. ಗತವೈಭವವನ್ನು ನೆನೆದು ಸೆರೆಮನೆಯಲ್ಲಿ ದುಃಖಿಸುತ್ತ ಕೊನೆಯ ದಿನಗಳನ್ನು ದೂಡಿದಳು. ಹೀಗೆಯೇ ಅಲ್ಲಿ

ಶಿವಾಧೀನಳಾಗಿದ್ದು ಚರಿತ್ರೆ ಹೇಳುವ ಸತ್ಯ. ಅದೇನೇ ಇದ್ದರೂ ಚನ್ನಮ್ಮನ ಜಯ ಅಪಜಯಗಳು ಎಲ್ಲರ ಬದುಕಿನಲ್ಲೂ ಬಂದು ಹೋಗುವಂತೆ ಬಂದು ಹೋದವು. ಆದರೆ ರಾಣಿಯಾಗಿ ಉತ್ತುಂಗ ಶಿಖರದಲ್ಲಿದ್ದ ಹೆಣ್ಣುಮಗಳೊಬ್ಬಳು ಸಮುದಾಯದ ನಾಯಕಿಯಾಗಿ, ಸಂಘಟನಾ ಚತುರಳಾಗಿ ತನ್ನ ವಿರೋಚಿತ ನಿಲವುಗಳಿಂದ ಸೋತು ಗೆದ್ದಳು, ಗೆದ್ದು ಭಾರತದ ಚರಿತ್ರೆಯಲ್ಲಿ ಅಮರಳಾದಳು. ಚನ್ನಮ್ಮಾಜಿಯ ವಿಜಯೋತ್ಸವದ ದಿನವೆಂದು ಇಂದಿಗೂ ಕಿತ್ತೂರು ಉತ್ಸವವೆಂದು ಅಕ್ಟೋಬರ 23ರಂದು ಆಚರಿಸಲಾಗುತ್ತದೆ. ಚನ್ನಮ್ಮನ ಶೌರ್ಯಕ್ಕೆ ಈ ನೆಲವು ಸಾಕ್ಷಿಯಾಗಿದೆ. ಸ್ವಾತಂತ್ರ್ಯದ 75ನೇ ಅಮೃತ ಮಹೋತ್ಸವದ ಸಂದರ್ಭದಲ್ಲಿ ಬ್ರಿಟೀಷರ ವಿರುದ್ಧ ಹೋರಾಡಿದ ಪ್ರಪ್ರಥಮ ಸ್ವಾತಂತ್ರ್ಯ ರಣರಾಗಿಣಿಯಾಗಿರುವ ಚನ್ನಮ್ಮ ಸ್ವಾತಂತ್ರ್ಯದ ಆಕಾಶದಲ್ಲಿ ಮಿನುಗುವ ಬೆಳ್ಳಿಚುಕ್ಕಿಯಾಗಿದ್ದಾರೆ.

ಪರಾಮಾರ್ಶನ ಗ್ರಂಥಗಳು

ಬೆಳಗಾವಿ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ – ಸಂ. ಡಾ. ಆರ್. ಗೋಪಾಲ್

ಬೆಳಗಾವಿ ಬೆಳಕು – ಸಂ. ಡಾ. ಎಸ್.ಆರ್. ಗುಂಜಾಳ

ಬೆಳ್ಳಿ ಚುಕ್ಕಿಯ ಬಂಗಾರದ ಕನಸು – ಯ.ರು. ಪಾಟೀಲ

ಕಿತ್ತೂರು ರಾಣಿ ಚನ್ನಮ್ಮ – ಡಾ. ಚನ್ನಕ್ಕ ಪಾವಟೆ

ಕಿತ್ತೂರು ಸಂಸ್ಥಾನ ದಾಖಲೆಗಳು ಸಂಪುಟ 1 – ಸಂ. ಡಾ. ಎ.ಬಿ. ವಗ್ಗರ

ವೀರ ರಾಣಿ ಚನ್ನಮ್ಮ – ಡಾ. ಅರ್ಕಸಾಲಿ ವೃಷಭೇಂದ್ರಾಚಾರ್ಯ

ವೀರ ರಾಣಿ ಕಿತ್ತೂರು ಚನ್ನಮ್ಮ – ಕೃಷ್ಣಮೂರ್ತಿ ಪುರಾಣಿಕ

ಬ್ರೀಟಿಷರ ಆಡಳಿತ ಮತ್ತು ರಾಣಿ ಕಿತ್ತೂರ ಚನ್ನಮ್ಮ – ಡಾ. ಮಲ್ಲಿಕಾರ್ಜುನ ಆಯ್ ಮಿಂಚ್

ಕಿತ್ತೂರು ಸಂಸ್ಥಾನ ಮತ್ತು ಸ್ವಾತಂತ್ರ್ಯ ಸಂಗ್ರಾಮ – ಸ.ರಾ. ಸುಳಕೂಡೆ

ಕಿತ್ತೂರು ಸಂಸ್ಥಾನದ ಇತಿಹಾಸ ಮತ್ತು ಸಂಸ್ಕೃತಿ – ಸಂ. ಡಾ. ಆರ್. ಗೋಪಾಲ್, ಡಾ. ಆರ್.ಎಂ. ಷಡಕ್ಷರಯ್ಯ

❖❖❖

ಅಲೆಯ ವಿಸ್ತರವೆಷ್ಟು?
ನೆಲದವರೆಗೆ
ನೆಲದ ವಿಸ್ತರವೆಷ್ಟು?
ಅಲೆಯವರೆಗೆ.

ಆಧುನಿಕ ಮಹಿಳಾ ಕಾವ್ಯಕ್ಕೆ ಬೆಳಗೆರೆ ಜಾನಕಮ್ಮನವರ ಕೊಡುಗೆ

(ಅರಿವೆಂಬ ಕಾವ್ಯ ಸೋಪಾನವನೇರಿ)

ಡಾ. ಸುಧಾ ಬಿ.ಎಸ್.
ಕನ್ನಡ ಸಹಾಯಕ ಪ್ರಾಧ್ಯಾಪಕರು
ಸರ್.ಎಂ.ವಿ. ಸರ್ಕಾರಿ ಕಲಾ ಮತ್ತು ವಾಣಿಜ್ಯ ಕಾಲೇಜು, ನ್ಯೂ ಟೌನ್, ಭದ್ರಾವತಿ

ಕನ್ನಡದ ಆಧುನಿಕ ಮಹಿಳಾ ಕಾವ್ಯ ವಸ್ತು, ವಿಷಯ, ಅಭಿವ್ಯಕ್ತಿ ಕ್ರಮ, ಭಾಷೆಯ ಬಳಕೆಯಲ್ಲಿ ವೈವಿಧ್ಯತೆಯಿಂದ ಕೂಡಿದ್ದು ಸಾಹಿತ್ಯ ಕ್ಷೇತ್ರಕ್ಕೆ ನೀಡಿರುವ, ನೀಡುತ್ತಿರುವ ಕೊಡುಗೆ ಅನನ್ಯವಾದದ್ದು. ಹೆಣ್ಣು ತನ್ನೆಲ್ಲಾ ಸಂದಿಗ್ಧತೆಗಳ ನಡುವೆಯೂ ತನ್ನ ಅಸ್ಮಿತೆಯನ್ನು ಕಂಡುಕೊಳ್ಳುವ, ತನ್ನ ವ್ಯಕ್ತಿತ್ವದ ಅನನ್ಯತೆಯನ್ನು ದಾಖಲಿಸುವ ನಿಟ್ಟಿನಲ್ಲಿ ಕಾವ್ಯವನ್ನು ಸಾಧನವನ್ನಾಗಿಸಿಕೊಂಡಿದ್ದಾಳೆ. ಪುರುಷಪ್ರಧಾನ ವ್ಯವಸ್ಥೆ ಹೆಣ್ಣನ್ನು ನಿಯಂತ್ರಿಸಲು ಹತ್ತು ಹಲವು ತಂತ್ರಗಾರಿಕೆಗಳನ್ನು ಬಳಸುತ್ತಾ ಬಂದಿದೆ. ಅವುಗಳಲ್ಲಿ ಹೆಣ್ಣನ್ನು ಹೆಣ್ಣಾಗಿ ನೋಡದೆ ಎರಡು ವಿರುದ್ಧ ಎನ್ನಬಹುದಾದ ಪಾತ್ರಮಾದರಿಗಳಲ್ಲಿ ಗುರುತಿಸುವ ಕ್ರಮ ಪ್ರಮುಖವಾದದ್ದು. ಒಂದು ಇತ್ಯಾತ್ಮಕ ಮಾದರಿಯದ್ದಾದರೆ ಮತ್ತೊಂದು ನೇತ್ಯಾತ್ಮಕ ಮಾದರಿಯದ್ದು. ಈ ಎರಡೂ ಮಾದರಿಗಳಲ್ಲಿ ಸಹಜ ಹೆಣ್ಣಿನ ಅಸ್ತಿತ್ವವೇ ಅಂಚಿಗೆ ಸರಿಯಲ್ಪಟ್ಟಿದೆ. ನವೋದಯ ಕಾಲದ ಬಹುತೇಕ ಬರಹಗಾರರು ಆದರ್ಶೀಕೃತ ಪಾತ್ರವೈಭವಗಳಿಗೆ ಮರುಳಾಗಿ ಹೆಣ್ಣಿನ ಸ್ವ ವ್ಯಕ್ತಿತ್ವವನ್ನು ಗುರುತಿಸುವಲ್ಲಿ ವಿಫಲರಾದರು. ಆದರೆ ಅದೇ ಕಾಲಘಟ್ಟದಲ್ಲಿ ಬರೆದ ಬೆಳಗೆರೆ ಜಾನಕಮ್ಮ ಹೆಣ್ಣಿನ ವ್ಯಕ್ತಿತ್ವವನ್ನು ಅವಳೆಲ್ಲಾ ಶಕ್ತಿ ಮತ್ತು ಮಿತಿಗಳಲ್ಲಿಯೇ ಹಿಡಿದಿಡಲು ಪ್ರಯತ್ನಿಸುತ್ತಾರೆ. ಈ ಮಿತಿಗಳೂ ಕೂಡ ವ್ಯವಸ್ಥೆಯಿಂದ ಹೆಣೆಯಲ್ಪಟ್ಟವು ಎಂಬ ಸ್ಪಷ್ಟವಾದ ಅರಿವು ಲೇಖಕಿಗಿದೆ. ಆದುದರಿಂದಲೇ ತಾನು ತಾನಾಗುವ ಹಾಗೂ ತನ್ನ ಸಹಜತೆಯೊಂದಿಗೆ ಗುರುತಿಸಿಕೊಳ್ಳುವ ಹಂಬಲ ಇವರ ಬದುಕು ಹಾಗೂ ಬರವಣಿಗೆಯ ಕೇಂದ್ರವಾಗಿರುವುದು ಕವನಗಳಿಂದ ಕಂಡುಬರುತ್ತದೆ.

ಬೆಳಗೆರೆ ಜಾನಕಮ್ಮ ತಮ್ಮ ಕಾಲಘಟ್ಟದ ಇತರೆ ಲೇಖಕಿಯರಿಗಿಂತ ಭಿನ್ನವಾಗುವುದು ಅವರ ಕಾವ್ಯದಲ್ಲಿ ವ್ಯಕ್ತವಾಗುವ ಸ್ವಘನತೆ ಮತ್ತು ಆತ್ಮವಿಶ್ವಾಸದ ನೆಲೆಯಲ್ಲಿ. ಮತ್ತು ಅದಕ್ಕಿಂತ ಮುಖ್ಯವಾಗಿ ಹೆಣ್ಣಿನ ವ್ಯಕ್ತಿತ್ವವನ್ನು ಹಿಡಿದಿಡುವ ವಿಧಾನದಲ್ಲಿ. 19ನೇ ಶತಮಾನದ ಸುಧಾರಣಾವಾದದ ಪ್ರೇರಣೆ ಇದ್ದಾಗ್ಯೂ ಅದನ್ನು ಮೀರಿದ ಆಲೋಚನಾ ವಿಧಾನ ಇವರದ್ದು. ಹೆಣ್ಣಿನ ವ್ಯಕ್ತಿತ್ವವನ್ನು ಕಟ್ಟಿಕೊಡುವಲ್ಲಿ ಇವರು ತೋರುವ ದಿಟ್ಟತನ, ವ್ಯವಸ್ಥೆಗೆ ಮುಖಾಮುಖಿಯಾಗುವ ವಿಧಾನ ಇಂದಿಗೂ ಪ್ರಸ್ತುತ. ವಸ್ತುವಿನ ಆಯ್ಕೆ ಮತ್ತು ತಂತ್ರಗಾರಿಕೆಯಲ್ಲಿ ನಾವಿನ್ಯತೆಯನ್ನು ಮೆರೆಯುವ ಜಾನಕಮ್ಮ ಭಾಷೆ ಬಳಕೆಯ ಸಂದರ್ಭದಲ್ಲಿ ತನ್ನೆಲ್ಲಾ ಮಿತಿಗಳ ನಡುವೆಯೂ ಎಚ್ಚರಿಕೆಯಿಂದ ಭಾಷೆಯನ್ನು ದುಡಿಸಿಕೊಂಡಿದ್ದಾರೆ.

ಜಾನಕಮ್ಮನವರ ಅಭಿವ್ಯಕ್ತಿ ಮಾದರಿಯನ್ನು ಎರಡು ರೀತಿಯಲ್ಲಿ

ಗುರುತಿಸಬಹುದು. ಮೊದಲನೆಯದು ಅನುಭವಗಳನ್ನು ನೇರವಾಗಿ, ದಿಟ್ಟವಾಗಿ ಅಭಿವ್ಯಕ್ತಪಡಿಸುವ ವಿಧಾನ. ಇಲ್ಲಿ ಸ್ವಗತದ ಮೂಲಕ ಆತ್ಮಸ್ಥೈರ್ಯವನ್ನು ಪಡೆಯುವ, ವ್ಯವಸ್ಥೆ ಹೆಣ್ಣನ್ನು ನಡೆಸಿಕೊಳ್ಳುತ್ತಿರುವುದರ ಬಗೆಗೆ ಮರುಕ ತೋರುವ, ಹೆಣ್ಣಿನ ಸ್ಥಿತಿಯ ಬಗೆಗೆ ಅನುಕಂಪ ವ್ಯಕ್ತಪಡಿಸುವುದಾದರೆ, ಎರಡನೆಯ ಮಾದರಿ ವ್ಯವಸ್ಥೆ ಹೆಣ್ಣನ್ನು ನಿಯಂತ್ರಿಸುತ್ತಿರುವ ಬಗೆಯನ್ನು ನಾಟಕೀಯವಾಗಿ ಕಟ್ಟಿಕೊಡುವ ವಿಧಾನದ್ದು. ಇಲ್ಲಿ ವ್ಯವಸ್ಥೆಯ ಹುನ್ನಾರಗಳನ್ನು ಬಯಲಿಗೆಳೆಯುವ, ಅದರ ಲೋಪದೋಷಗಳನ್ನು ಎತ್ತಿ ತೋರಿಸುವ, ಅದರ ವಿರುದ್ಧ ಸಿಡಿದೇಳುವ ಮಾದರಿಗಳು ಕಂಡುಬರುತ್ತದೆ. ದಟ್ಟಿ, ಮೂರ್ಖರಾಯ, ಎಚ್ಚರಿಕೆ, ಜಂಬದಕೋಳಿ ಮುಂತಾದ ಕವನಗಳು ಗಂಡಿನ ಭಾಷೆ, ದರ್ಪ, ಸ್ವಯಂ ಪ್ರತಿಷ್ಠೆ ಹೆಣ್ಣನ್ನು ನಿಯಂತ್ರಿಸಲು ಏನೆಲ್ಲಾ ಹುನ್ನಾರಗಳ ಮೂಲಕ ಕಾರ್ಯನಿರ್ವಹಿಸುತ್ತಿವೆ ಎಂಬುದನ್ನು ಯಶಸ್ವಿಯಾಗಿ ಹಿಡಿದಿಡುತ್ತವೆ. ಗಂಡ, ಚಂಡಶಾಸನ, ಎಚ್ಚರಿಕೆ, ಮೌನ, ಪರಮಸುಖ, ಕಲ್ಯಾಣ, ಜಂಬದ ಕೋಳಿ, ಹೆಣ್ಣಾಟ, ತಾಟಾಪೋಟಿ, ಯಜಮಾನ ಮುಂತಾದ ಕವನಗಳು ಹೆಣ್ಣು, ಹೆಣ್ತನ, ಹೆಣ್ಣಿನ ಸಮಸ್ಯೆಗಳನ್ನು ಕೇಂದ್ರೀಕರಿಸಿ ರಚನೆಗೊಂಡ ಕವನಗಳಾಗಿವೆ. ಜಾನಕಮ್ಮನವರ ಎಲ್ಲಾ ಕವನಗಳೂ ವೈಯಕ್ತಿಯತೆಯನ್ನು ಮೀರಿ ಹೆಣ್ಣು ಮತ್ತು ಹೆಣ್ಣಿನ ಸವಾಲುಗಳನ್ನು ಸಾರ್ವತ್ರಿಕ ಹಾಗೂ ಸಾರ್ವಕಾಲಿಕ ನೆಲೆಗಟ್ಟಿನಲ್ಲಿ ಹಿಡಿದಿಡಲು ಪ್ರಯತ್ನಿಸುತ್ತವೆ.

ಜಾನಕಮ್ಮನವರ ಪೀಠಿಕೆ ಕವನ ಮಹಿಳಾ ಕಾವ್ಯಮೀಮಾಂಸೆಯನ್ನು ಕಟ್ಟಿಕೊಡುವ ಆಶಯದ ದೃಷ್ಟಿಯಿಂದ ಬಹು ಮುಖ್ಯವಾದದ್ದು. ಈ ಕವನ ವ್ಯವಸ್ಥೆ ಹೆಣ್ಣನ್ನು ಗ್ರಹಿಸುತ್ತಿರುವ ಕ್ರಮವನ್ನು, ಜೊತೆಗೆ ತನ್ನ ಕಾವ್ಯ ಗ್ರಹಿಕೆಯ ಕ್ರಮವನ್ನೂ ಕುರಿತಂತೆ ಇರುವ ನಂಬಿಕೆಗಳನ್ನು ಒಡೆಯಲು ಪ್ರಯತ್ನಿಸುತ್ತಿದೆ.

ಹೊಗಳುವುದು ಬೇಡೆನಗೆ ತೆಗಳುವುದು ಬೇಡೆನಗೆ
ನನ್ನೊಳಗೆ ಬಂದುದೇ ಸಾಕು ಸಾಕು!
ಬಯಸುವುದು ಬೇಡೆನಗೆ ಫಲಿಸುವುದು ಬೇಡೆನಗೆ
ಒಳೊಳಗಿನೆನ್ನೊಲವೆ ಸಾಕು ಸಾಕು!
ಏರುವುದು ಬೇಡೆನಗೆ ಹಾರುವುದು ಬೇಡೆನೆಗೆ
ಊರುಗೋಲಿನ ಪಯಣ ಸಾಕು ಸಾಕು!
ಅವನೆಲ್ಲ ತುಂಬಿಡಲು ತಾನಿಲ್ಲಿ ಬಂದಿರಲು
ಇದಕಿಂತ ಜನಕಜೆಗೆ ಏನು ಬೇಕು?

ಈ ಕವನದಲ್ಲಿ ಹೆಣ್ಣಿನ ವ್ಯಕ್ತಿತ್ವ ಮತ್ತು ಅಭಿವ್ಯಕ್ತಿಯನ್ನು ಕುರಿತಂತೆ ವ್ಯವಸ್ಥೆ ತೋರುವ ಹೊಗಳಿಕೆ ಮತ್ತು ತೆಗಳಿಕೆಗಳ 'ಋಣಭಾರ'ದಿಂದ ಬಿಡುಗಡೆಗೊಳ್ಳುವ ಬಯಕೆ ಇದೆ. ಏಕೆಂದರೆ ಇವುಗಳ 'ಅಸಹಜ' ನಡೆಯ ಅರಿವು ಲೇಖಕಿಗೆ ಇರುವುದರಿಂದಲೇ ತನ್ನ ಶಕ್ತಿ ಸಾಮರ್ಥ್ಯಕ್ಕೆ ತಕ್ಕ ಮನ್ನಣೆಯ ಅಪೇಕ್ಷೆ ವ್ಯಕ್ತವಾಗುತ್ತದೆ. 'ನನ್ನೊಳಗೆ ಬಂದುದೇ ಸಾಕು ಸಾಕು' 'ಒಳ ಒಳಗಿನೆನ್ನೊಲವೆ ಸಾಕು ಸಾಕು' 'ಊರುಗೋಲಿನ ಪಯಣ ಸಾಕು ಸಾಕು' ಎಂಬ ವಾಕ್ಯಗಳು ಹಂತ ಹಂತವಾಗಿ ಸಾಗುತ್ತಿರುವ ಆತ್ಮವಿಶ್ವಾಸದ ನೆಲೆಗಳನ್ನು ತಿಳಿಸುತ್ತದೆ. 'ಸಾಕು ಸಾಕು' ಎನ್ನುವ ಪುನರುಕ್ತಿ ಆದಷ್ಟು ಬೇಗ ವ್ಯವಸ್ಥೆಯ ಹೊರೆಗಳಿಂದ ಬಿಡುಗಡೆ ಪಡೆಯುವ ಹಂಬಲವಾಗಿ ಮೂಡಿಬಂದಿದೆ. ಆರಂಭದ ಸಾಲು ತನ್ನೊಳಗಿನ ಶಕ್ತಿಯ ಇರುವಿಕೆಯನ್ನು ತಿಳಿಸಿದರೆ ನಂತರದ ಸಾಲು ತನ್ನ ಆಂತರ್ಯದ

ಶಕ್ತಿ ಸಾಮರ್ಥ್ಯವಾಗಿ ಹೊರಹೊಮ್ಮುವ, ಆ ಮೂಲಕವೇ ತನ್ನ ಸ್ವಂತಿಕೆಯನ್ನು, ಇರುವಿಕೆಯನ್ನು ಕಂಡುಕೊಳ್ಳುವ ಆತ್ಮವಿಶ್ವಾಸವಾಗಿ ಮೂಡಿಬಂದಿದೆ. ಮುಂದುವರಿದು 'ಏರುವುದು ಬೇಡೆನಗೆ, ಹಾರುವುದು ಬೇಡೆನೆಗೆ ಊರುಗೋಲಿನ ಪಯಣ ಸಾಕು ಸಾಕು ಎನ್ನುವಲ್ಲಿ 'ಏರುವುದು' 'ಹಾರುವುದು' ಮತ್ತು 'ಊರುಗೋಲಿನ ಪಯಣ' ಮೂರನ್ನೂ ಸಮಾನಪಾತಳಿಯಲ್ಲಿಟ್ಟು ನೋಡಲಾಗಿದೆ. 'ಏರುವುದು' 'ಹಾರುವುದು' ವ್ಯವಸ್ಥೆಯಿಂದ 'ನೀಡಲ್ಪಡುವವು' ಎಂಬ ಅರಿವೇ ಅದನ್ನು 'ಊರುಗೋಲಿನ ಪಯಣ'ಕ್ಕೆ ಹೋಲಿಸಲು ಕಾರಣವಾಗಿದೆ. ಇಲ್ಲಿ 'ಊರುಗೋಲಿನ ಪಯಣ' ಧ್ವನಿಪೂರ್ಣವಾಗಿ ವ್ಯವಸ್ಥೆಯ ಅಪೇಕ್ಷೆಯ, ಹೆಣ್ಣಿನ ಇದುವರೆಗಿನ ಸ್ಥಿತಿಯ ಪ್ರತಿಬಿಂಬವಾಗಿ ಮೂಡಿಬಂದಿದೆ. 'ಪಯಣ' ಎನ್ನುವುದು ಸಾಗುವಿಕೆಯ ನಿರಂತರತೆಯನ್ನೂ, ಅದರ ಏಕತಾನತೆಯನ್ನು ನಿರಾಕರಿಸುತ್ತಲೇ ಹೊಸ ಹಾದಿಯಲ್ಲಿ ತಾನು ಸಾಧಿಸಿರುವ ಯಶಸ್ಸನ್ನು ತಿಳಿಸುತ್ತದೆ. ಈಗಾಗಲೇ ತನ್ನಲ್ಲಡಕವಾಗಿರುವ ಶಕ್ತಿ ಸಾಮರ್ಥ್ಯವನ್ನು ಒಂದೆಡೆ ಸಂಗ್ರಹಿಸುವುದಷ್ಟೇ ತನ್ನ ಪಾಲಿಗುಳಿದಿರುವುದು ಎನ್ನುವ ಕವಯಿತ್ರಿಯ ಆಶಯ 'ಅವನೆಲ್ಲ ತುಂಬಿಡಲು ತಾನಿಲ್ಲಿ ಬಂದಿರುವುದು' ಎನ್ನುವ ಮೂಲಕ ತನ್ನ, ತನ್ನ ತನದ ಬಗೆಗಿನ ಆತ್ಮವಿಶ್ವಾಸವಾಗಿ ಮೂಡಿಬಂದಿದೆ. 'ಅವನೆಲ್ಲ' ಎನ್ನುವುದು ನಾಮವಾಚಕದಂತೆ ಕೇಳುತ್ತಿದ್ದರೂ ಅದು ಕ್ರಿಯಾವಾಚಕವಾಗಿ ಕಾರ್ಯನಿರ್ವಹಿಸುತ್ತಿರುವುದು ವಿಶೇಷ. 'ಇದಕಿಂತ ಜನಕಜೆಗೆ ಏನು ಬೇಕು'? ಎನ್ನುವುದು ತಾನು ಪಡೆದಿರುವುದರ ಬಗೆಗಿನ ಸಾರ್ಥಕ್ಯ, ಹೆಮ್ಮೆ ಮತ್ತು ಆತ್ಮತೃಪ್ತಿಯ ದ್ಯೋತಕವಾಗಿದೆ. ಈ ಬಗೆಯ ಆತ್ಮವಿಶ್ವಾಸ ಇವರ 'ಮೂಲಾತ್ಮ', 'ಸುಮ್ಮನಿರು ಸಾಕು' ಮುಂತಾದ ಕವನಗಳಲ್ಲಿ ಇನ್ನೂ ಹೆಚ್ಚು ಶಕ್ತಿಯುತವಾಗಿ ಮೂಡಿಬಂದಿವೆ.

ಮೂಲಾತ್ಮ ಕವನ ಸೃಷ್ಟಿ ಹಾಗೂ ಸೃಷ್ಟಿಕರ್ತನ ನಿಯಮಗಳನ್ನು ಒಡೆಯುವ, ತನ್ನ ಆಂತರ್ಯದ ಶಕ್ತಿಯನ್ನು ಕಂಡುಕೊಳ್ಳುವ ಪ್ರಯತ್ನದ್ದಾಗಿದೆ. ಹೆಣ್ಣಿನ ಅಸಮಾನತೆಯ ನೆಲೆಗಳ ಹುಡುಕಾಟವೇ ಜಾನಕಮ್ಮನವರ ಕಾವ್ಯದ ಕೇಂದ್ರ ಕಾಳಜಿಯಾಗಿರುವುದರಿಂದ ಸಹಜವಾಗಿಯೇ ಸೃಷ್ಟಿರಹಸ್ಯವನ್ನು ಹೆಣ್ಣಿನ ಬಿಡುಗಡೆಯ ನೆಲೆಯಲ್ಲಿ ಗ್ರಹಿಸಲು ಪ್ರಯತ್ನಿಸಿದ್ದಾರೆ. ಸೃಷ್ಟಿನಿಯಮದ ಹೆಸರಿನಲ್ಲಿ ಹಲವು ರೀತಿಯ ಬಂಧನಗಳನ್ನೆದುರಿಸುತ್ತಿರುವ ಹೆಣ್ಣು ಆ ರಹಸ್ಯಗಳನ್ನು ಅರಿಯುವುದರ ಮೂಲಕ ಅದರಿಂದ ಬಿಡುಗಡೆ ಪಡೆಯಲು ಸಾಧ್ಯ ಎಂಬ ಅರಿವು ಈ ಕವನದ ಆರಂಭದಲ್ಲಿಯೇ ವ್ಯಕ್ತವಾಗುತ್ತದೆ. 'ಬಯಲಾಯ್ತು ಬಯಲಾಯ್ತು ಬಟ್ಟ ಬಯಲಾಯ್ತು। ಸೃಷ್ಟಿ ಕರ್ತನ ಗುಟ್ಟು ತಿಳಿಯಲನುವಾಯ್ತು' ಎನ್ನುವುದು ಹೊಸ ಜ್ಞಾನ, ಅರಿವಿನ ಸಾಕ್ಷಾತ್ಕಾರ, ವಾಸ್ತವವನ್ನು ಅರಿಯಲು ಅನುವು ಮಾಡಿಕೊಡುತ್ತಿದೆ. ಇದನ್ನು ಉದಾರವಾದಿ ಧೋರಣೆಯಿಂದ ದತ್ತವಾದ ಶಿಕ್ಷಣದ ಅರಿವು ಎಂದರೂ ತಪ್ಪಾಗಲಾರದು. ಜಾನಕಮ್ಮ ಶಿಕ್ಷಣವನ್ನು ಪಡೆಯದಿದ್ದರೂ ಕೂಡ ಶಿಕ್ಷಣದಿಂದ ದೊರೆಯಬಹುದಾದ ಅರಿವಿನ ಹೊಳಹುಗಳು ಅವರ ಕಾವ್ಯದಲ್ಲಿ ಮತ್ತೆ ಮತ್ತೆ ಚರ್ಚೆಗೆ ಒಳಪಡುತ್ತವೆ. ಎಚ್ಚರಿಕೆ ಕವನದ ನಾಯಕಿ ಕೂಡ ಈ ಬಗೆಯ ಶಿಕ್ಷಣದ ಅಪೇಕ್ಷೆಯನ್ನಿಟ್ಟುಕೊಂಡವಳೇ. ಅದರಿಂದಾಗಿ ವಿಶ್ವವನ್ನು ಹೊಸ ಅರಿವಿನಿಂದ ನೋಡಿದಾಗ 'ಅಣು' ಮತ್ತು 'ಮಹತ್ತು'ಗಳೆರಡನ್ನೂ ತಿಳಿಯಲು ಸಾಧ್ಯ ಎಂಬ ಆತ್ಮವಿಶ್ವಾಸ ಲೇಖಕಿಗೆ ಇದೆ. ಮುಂದುವರಿದು 'ಸಾಗುವೆನು ಸಾಗುವೆನು ತೆಪ್ಪದೊಳು ತೇಲಿ। ದಾಟುವೆನು ಕುಪ್ಪಳಿಸಿ ಬಂಧನದ ಬೇಲಿ' ಇಲ್ಲಿ ತೆಪ್ಪದೊಳು ತೇಲಿ, ಬಂಧನದ ಬೇಲಿ ಎರಡೂ ಕೂಡ ಪ್ರಯಾಸದ ಸಾಗುವಿಕೆಯನ್ನು

ತಿಳಿಸುತ್ತಿದ್ದರೂ ಕಾವ್ಯದ ಓಟ ಅವೆಲ್ಲವನ್ನೂ ಮೀರುವ ಉತ್ಸಾಹದ ಹಾದಿಯಲ್ಲಿದೆ. ಬಂಧನದ ಬೇಲಿಗಳಿರುವ ವಾಸ್ತವದ ಅರಿವಿನೊಂದಿಗೆ ಕವನ ಮುಂದುವರೆದು ತಾನು ಸಾಧಿಸಬಹುದಾದ ಗುರಿಯ ಕಡೆಗೆ ಗಮನಸೆಳೆಯುತ್ತದೆ. 'ಮೇರು ಗಿರಿಯುತ್ತುಂಗ ಶಿಖರವನು ಏರಿ। ಬಾಂದಳಕೆ ಮುಟ್ಟಿಸುವೆನೆನ್ನ ಜಯಭೇರಿ' ಎನ್ನುವುದು ತನಗೆ ಎದುರಾಗಬಹುದಾದ ಎಲ್ಲಾ ಬಗೆಯ ಅಡ್ಡಿ ಆತಂಕಗಳನ್ನೂ ಮೀರಬಲ್ಲೆ ಎಂಬ ಆತ್ಮವಿಶ್ವಾಸದೊಂದಿಗೆ ಸಾಗುತ್ತದೆ. ಯಾವ ಯಾವ ರೀತಿಯಲ್ಲಿ ಅಡ್ಡಿ ಆತಂಕಗಳು ಎದುರಾಗಬಹುದು, ಅವುಗಳನ್ನು ಎದುರುಗೊಳ್ಳಬೇಕಾದ ಬಗೆ ಹೇಗೆ ಎಂಬುದರ ಅರಿವೂ ಕೂಡ ಲೇಖಕಿಗೆ ಇದೆ. ಅದನ್ನು ಮಾರ್ಮಿಕವಾಗಿ ಈ ರೀತಿ ಹಿಡಿದಿಡುತ್ತಾರೆ

ಬಿದಿಯಾಗಿ ನೀನೆನ್ನ ಬೆದರಿಸಲು ಬಂದು।
ಅದನೊಂದು ಲೆಕ್ಕಿಸದೆ ಸಾಗುವೆನು ಮುಂದು।
ಹಾರುವೆನು ಹಕ್ಕಿಗಳ ಗುಂಪಿನೊಳು ಸೇರಿ।
ವಾಯುವಗ್ನಿಯು ಸುಳಿವ ತಾಣದೊಳು ತೂರಿ'.

ಎನ್ನುವ ಪ್ರತಿಮೆಗಳು ಆ ಚಲನೆ ಯಾರ ನಿಯಂತ್ರಣಕ್ಕೂ ಸುಲಭವಾಗಿ ದೊರಕಲಾರದ್ದು ಎಂಬುದನ್ನು ತೆರೆದಿಡುತ್ತವೆ. ವ್ಯವಸ್ಥೆಯನ್ನು ಎದುರಿಸಲು ಬೇಕಾದ ತಂತ್ರಗಾರಿಕೆ, ತಿಳುವಳಿಕೆ ಇವರ ಕಾವ್ಯದಲ್ಲಿ ಸಮರ್ಥವಾಗಿ ಮೂಡಿಬಂದಿದೆ. 'ಹಕ್ಕಿಗಳು' ಕವನದಲ್ಲಿ ಲೇಖಕಿಗೆ ಮೆಚ್ಚುಗೆಯಾಗುವ ಹಕ್ಕಿಗಳ ಜೀವನ ಶೈಲಿ, ನಿರ್ಭಿಡತೆ, ಸ್ವಚ್ಛಂದ ಹಾರಾಟ ಇಲ್ಲಿ ಲೇಖಕಿಗೂ ಸಿದ್ಧಿಸಿದೆ. ಕಾರಣ ಹೆಣ್ಣು ಗಂಡಿನ ಸಂಬಂಧದ ನಿಜದ ತಿಳುವಳಿಕೆ ಅವಳಲ್ಲಿ ಆತ್ಮವಿಶ್ವಾಸವನ್ನೂ, ಜೀವನ ಪ್ರೀತಿಯನ್ನೂ, ಎಲ್ಲವನ್ನೂ ಎದುರಿಸುವ ಧೈರ್ಯ, ಸಾಮರ್ಥ್ಯವನ್ನೂ ಮೂಡಿಸಿದೆ. ಇದು ಕಾವ್ಯದಲ್ಲಿ 'ಹೆಣ್ಣೇನು ಗಂಡೇನು ಬಹುಮುಖಗಳೇನು। ನಿನ್ನ ಸೋಗುಗಳೇನು ಸಮರಿಲ್ಲವೇನು?' ಎಂಬ ಸ್ವಪ್ರಜ್ಞೆಯಾಗಿ ಮೂಡಿಬಂದಿದೆ. 'ಸೋಗು' ಎನ್ನುವ ಪದ ಮುಖವಾಡದ, ಹಿರಿಮೆಯನ್ನು ಸಾಧಿಸಿರುವೆ ಎಂಬ ನಟನೆಯ ಬದುಕಿನ ದ್ಯೋತಕವಾಗಿ ಚಿತ್ರಿತವಾಗಿದೆ. ಈ ಸೋಗಿನ ಮುಖವಾಡವನ್ನು ಕಳಚಿದಾಗ ಹಿರಿದು, ಕಿರಿದು, ಮೇಲು, ಕೀಳು ಎಂಬ ಅಸಮಾನತೆಗಳು ಅಳಿಯಲು ಸಾಧ್ಯ ಎಂಬ ಅರಿವು ಲೇಖಕಿಗೆ ಇರುವುದರಿಂದಲೇ ಇಷ್ಟು ದಿಟ್ಟವಾಗಿ, ಕಟುವಾಗಿ ವ್ಯವಸ್ಥೆಯನ್ನು ಎದುರಿಸಲು ಸಾಧ್ಯವಾಗಿದೆ.

ಜಾನಕಮ್ಮನವರ 'ಸುಮ್ಮನಿರು ಸಾಕು' ಕವನ ಮತ್ತೊಂದು ಬಗೆಯಲ್ಲಿ ಹೆಣ್ಣಿನ ಶಕ್ತಿ, ಸಾಮರ್ಥ್ಯದ ಪರಿಚಯ ಮಾಡಿಕೊಡುತ್ತದೆ. ಸ್ವಗತದ ಮಾದರಿಯಲ್ಲಿರುವ ಈ ಕವನ ತನ್ನಂತರಂಗಕ್ಕೆ ಧೈರ್ಯ ತುಂಬುವ, ವ್ಯವಸ್ಥೆಯ ನಿರ್ಭಂಧಗಳನ್ನು ದಿಟ್ಟವಾಗಿ ಎದುರಿಸುವ ಬಗೆಗಳನ್ನು ತರೆದಿಡುತ್ತದೆ. ಈ ಕವನದ ಸ್ವಗತದ ಮಾದರಿ ಕೊಂಚ ಭಿನ್ನವಾಗಿದ್ದು, ವಿಷಯದ ಆಯ್ಕೆ, ತಂತ್ರಗಾರಿಕೆ ಕೂಡ ವಿಶಿಷ್ಟವಾಗಿದೆ. ಮಹಿಳಾ ಕಾವ್ಯದಲ್ಲಿ ಸ್ವಗತವೆನ್ನುವುದು ಹಲವು ಮಾದರಿಗಳಲ್ಲಿ ವ್ಯಕ್ತವಾಗಿದೆ. ಸ್ವಗತವೆನ್ನುವುದು ಹೆಣ್ಣಿನ ಅಭಿವ್ಯಕ್ತಿಯ ಮಟ್ಟಿಗೆ ಕೇವಲ ತನ್ನೊಂದಿಗಿನ ಸಂವಾದದ ನೆಲೆಯಲ್ಲಿ ಮಾತ್ರ ನಿಲ್ಲದೆ ವ್ಯವಸ್ಥೆಯೊಂದಿಗೆ ನಡೆಸಬಹುದಾದ ಹಲವು ರೀತಿಯ ಮುಖಾಮುಖಿಯ ಮಾದರಿಗಳನ್ನು ಒಳಗೊಂಡಿದೆ. ತನಗೆ ತಾನೇ ಹೇಳಿಕೊಳ್ಳುತ್ತಿರುವ ಸಂದರ್ಭದಲ್ಲಿಯೂ ಕೂಡ ಅದು ವ್ಯವಸ್ಥೆಯನ್ನು ಕೇಂದ್ರವಾಗಿಟ್ಟುಕೊಂಡೇ ಮುಂದುವರಿಯುತ್ತದೆ.

ಲೇಖಕಿಯರ ಬಹುಪಾಲು ಕವನಗಳು ತನ್ನ ಮನದಾಳದ ಇಂಗಿತವನ್ನು ಇತರೆ

ಪಾತ್ರಗಳ ಮೂಲಕ ವ್ಯಕ್ತಪಡಿಸಲು ಸ್ವಗತದ ಮಾದರಿಯನ್ನು ಆಯ್ಕೆ ಮಾಡಿಕೊಂಡರೆ, ಜಾನಕಮ್ಮ ತಾನು ಹಾಗೂ ತನ್ನೊಳಗಿನ ಶಕ್ತಿ ಇವೆರಡರ ನಡುವಿನ ಸಂವಾದಕ್ಕೆ ಸ್ವಗತವನ್ನು ಆಯ್ಕೆ ಮಾಡಿಕೊಂಡಿದ್ದಾರೆ.

'ಹೆದರದಿರು ಕುದಿಯದಿರು ಹೇಡಿ ನೀನಾಗದಿರು।

ಬಡಿಯುತಿಹ ಅಲೆಗಾಳಿಗೆ ಕಣ್ಮುಚ್ಚಿ ಸಿರಬಾಗು।

ಕಡಲಿನಲೆಗಳು ನಿನ್ನ ನೆಲ್ಲಿಗೊಯ್ದರು ಸರಿಯೆ।

ದೃಢವಾದ ಚಿತ್ತವನು ಬಿಡದೆ ಪಾಲಿಸು ನಿರುತ।'

ಎಂದು ತನ್ನೆಲ್ಲಾ ದುಃಖ ದುಮ್ಮಾನಗಳನ್ನು ನಿಯಂತ್ರಿಸಲು ಪ್ರಯತ್ನಿಸುತ್ತಾರೆ. ತನ್ನೆಲ್ಲಾ ಕಿಚ್ಚನ್ನು ಒಡಲೊಳಗಿಟ್ಟುಕೊಂಡಿರುವ ಪ್ರಕೃತಿಯ ರೂಪಕವನ್ನು ಕೊಡುವುದರ ಮೂಲಕ ಸಮಾದಾನಪಡಲು ಪ್ರಯತ್ನಿಸುತ್ತಾರೆ. ಅದು ಸಾಧ್ಯವಾಗದಿದ್ದಾಗ ಬೆದರಿಕೆ, ಗದರಿಕೆಯ ಮೂಲಕ ಮನಸ್ಸಿಗೆ ಶಾಂತಿಯನ್ನು ತಂದುಕೊಳ್ಳಲೆತ್ನಿಸಿದ್ದಾರೆ. 'ದಟ್ಟಿ' ಕವನ ಕೂಡ ಇದೇ ವಿಧಾನದ್ದು. ತಂತ್ರಗಾರಿಕೆಯ ದೃಷ್ಟಿಯಿಂದ ವಿಶಿಷ್ಟವಾದ ಈ ಕವನಗಳು ತನ್ನಂತರಂಗವನ್ನು ತಾನೆ ಹೆದರಿಸಿ ಬೆದರಿಸಿಯಾದರೂ ಸರಿ, ಇತರರಿಗೆ ತಲೆಬಾಗದಂತೆ, ಎದೆಗುಂದದಂತೆ ತನ್ನ ಮನಸ್ಸನ್ನು ಸಮಸ್ಥಿತಿಯಲ್ಲಿಟ್ಟುಕೊಳ್ಳುವ ದಾಟಿಯಲ್ಲಿವೆ. 'ಸುಮ್ಮನಿರು ಸಾಕು' ಎನ್ನುವ ಮಾತಿನ ಶೈಲಿಯೇ ತುಂಬಾ ನಿತ್ರಾಣಗೊಂಡ, ಅಂಜುಬುರುಕ ಮನಸ್ಸಿಗೆ ಮಕ್ಕಳನ್ನು ಹೆದರಿಸುವ ರೀತಿಯಲ್ಲಿ ಧೈರ್ಯ ತುಂಬುವಂತದ್ದು. 'ನೀನೆಷ್ಟು ಜನಕಜೇ।ಸುಮ್ಮನಿರು, ಸಾಕು ಸಾಕು!' ಎನ್ನುವ ಕಡೆಯ ಸಾಲು ಲೇಖಕಿಯ ಗೊಂದಲ ತಳಮಳಗಳು ಅವಳಿಗಷ್ಟೇ ಸೀಮಿತವಲ್ಲ. ಅವಳಿಗಿಂತ ಹೆಚ್ಚು ಸಂಕಷ್ಟದಲ್ಲಿ ಸಿಲುಕಿರುವವರು ಹಲವರಿದ್ದಾರೆ ಅವರುಗಳ ಮಧ್ಯೆ ನಿನ್ನದೇನೂ ಅಲ್ಲ ಎಂದು ಸಮಾಧಾನಪಡಿಸುವ ದಾಟಿಯೂ ಇಲ್ಲಿದೆ. ಅಕ್ಕ ಹೇಳುವಂತೆ 'ಲೋಕದೊಳಗೆ ಹುಟ್ಟಿರ್ದ ಬಳಿಕ ಸ್ತುತಿನಿಂದೆಗಳು ಬಂದರೆ ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು' ಎಂಬ ತಾತ್ವಿಕ ನಿಲುವು ಕೂಡ ಸೇರಿದೆ.

ಜಾನಕಮ್ಮನವರ ಮತ್ತೊಂದು ಪ್ರಮುಖವಾದ 'ಹೆಣ್ಣಾಟ' ಕವನ ಹೆಣ್ಣಾಗಿ ಹುಟ್ಟಿರುವುದರಿಂದ ಎದುರಿಸಬೇಕಾದ ಸವಾಲುಗಳನ್ನು ಕುರಿತು ಮಾತನಾಡುತ್ತಲೇ ಗಂಡು ಹೆಣ್ಣಿನ ವ್ಯಕ್ತಿತ್ವ ನಿರ್ಮಿತಿಯ ಹಿಂದಿನ ವ್ಯವಸ್ಥೆಯ ಕೈವಾಡಗಳನ್ನು ತೆರೆದಿಡುತ್ತದೆ. ಜಾನಕಮ್ಮನವರ ಸಮಕಾಲೀನ ಲೇಖಕಿಯರಲ್ಲಿದ್ದ ಹೆಣ್ಣಿನ ಜೈವಿಕ ಮಿತಿಯ ಅರಿವನ್ನು ಮೀರಿದ, ವ್ಯಕ್ತಿತ್ವ ನಿರ್ಮಿತಿಯ ಕಡೆಗೆ ಲೇಖಕಿಯ ಗಮನವಿರುವುದು ಈ ಕವನದಲ್ಲಿ ಸ್ಪಷ್ಟವಾಗುತ್ತದೆ. ಗಂಡು ಹೆಣ್ಣಿನ ವ್ಯಕ್ತಿತ್ವವನ್ನು ಕುರಿತಂತೆ ಇರುವ ಸಾಮಾಜಿಕ ಪೂರ್ವಾಗ್ರಹವನ್ನು ಒಡೆಯುತ್ತಲೇ ಆರಂಭವಾಗುವ ಕವನ ಜೀವನದ ಅನಿಶ್ಚಿತತೆ ಹಾಗೂ ಅಲ್ಪಾವಧಿಯಲ್ಲಿಯೂ ಕೂಡ ಸಹಬಾಳ್ವೆಗೆ ಅವಕಾಶವಿಲ್ಲದಿರುವುದನ್ನು ಎತ್ತಿಹಿಡಿಯುತ್ತಿದೆ.

ಹೆಣ್ಣುಗಂಡೆಂಬೆರಡು

ಗೊಂಬೆಗಳ ಆಟದೊಳು

ಎನ್ನೊಡಲು ಕುದಿಯುತಿದೆ

ಹೆಣ್ಣಾಟವ ಕಂಡು

ಇಲ್ಲಿ 'ಎನ್ನೊಡಲು ಕುದಿಯುತ್ತಿದೆ' ಎನ್ನುವಲ್ಲಿ ವ್ಯವಸ್ಥೆಯ ಅಸಮಾನತೆಯ ನೆಲೆಗಳ ಬಗೆಗಿನ ವಿರೋಧ ಸ್ಪಷ್ಟವಾಗಿ ವ್ಯಕ್ತವಾಗಿದೆ. 'ಕುದಿಯುವಿಕೆ' ಸಿಡಿಯುವುದರ

ಮುನ್ಸೂಚನೆಯಾಗಿದೆ. ಅದನ್ನು 'ಮೌನ' ಕವನದಲ್ಲಿ ಗುರುತಿಸಬಹುದು. ಇಲ್ಲಿನ ಆಕ್ರೋಶ ಅಲ್ಲಿ ಸ್ಪಷ್ಟ ಪ್ರತಿಭಟನೆಯಾಗಿ ರೂಪ ಪಡೆದಿದೆ. ಈ ಕವನ ಕನ್ನಡ ಕಾವ್ಯದ ಬಹುಮುಖ್ಯ ಕವನಗಳಲ್ಲೊಂದು. ಏಕೆಂದರೆ ಇಲ್ಲಿನ ಭಾಷೆ, ಭಾವ, ಬಂಧ ಎಲ್ಲವೂ ಇಡೀ ಹೆಣ್ಣಿನ ಸಮುದಾಯದ ಸಮಸ್ಯೆಯನ್ನು ಹಿಡಿದಿಡುವಲ್ಲಿ ಯಶಸ್ವಿಯಾಗಿದೆ. 'ಹೆಣ್ಣಾಟ' ಎಂಬ ಪದ ಒಂದೆಡೆ ಹೆಣ್ಣಿನ ಬದುಕಿನ ಸ್ಥಿತ್ಯಂತರಗಳನ್ನು ತಿಳಿಸುತ್ತಿದ್ದರೆ ಮತ್ತೊಂದೆಡೆ ಪುರುಷ ಪ್ರಧಾನ ವ್ಯವಸ್ಥೆಗೆ ತಕ್ಕಂತೆ ರೂಪುಗೊಳ್ಳುತ್ತಿರುವ ಹೆಣ್ಣಿನ ವ್ಯಕ್ತಿತ್ವವನ್ನು ಧ್ವನಿಸುತ್ತದೆ. ಅಂತಿಮವಾಗಿ 'ಮನಸ್ಸಿದ್ದು ಮತಿಯಿಲ್ಲ । ಕಣ್ಣಿದ್ದು ಕುರುಡೆಲ್ಲ। ಹೆಣ್ಣಾಟ ಜನಕಜೆಗೆ ।ಏನು ಚೆನ್ನಿಲ್ಲ'. ಎಂಬ ವಾಕ್ಯ ವ್ಯವಸ್ಥೆಯ ಕಠೋರತೆಯ ಅರಿವು, ಅದರ ಬಗೆಗಿನ ವಿರೋಧ, ಸಿಡಿದೇಳುವ ಮನಸ್ಥಿತಿ ಇದ್ದಾಗ್ಯೂ ಅದು ಈಡೇರಲಾರದ ಪುರುಷ ಪ್ರಭುತ್ವದ ಹಿಡಿತವನ್ನೂ, ಹೆಣ್ಣಿನ ಅಸಹಾಯಕತೆಯನ್ನು ತಿಳಿಸುತ್ತದೆ.

ಇವರ ಮತ್ತೊಂದು ಪ್ರಮುಖ ಕವನ ಮೌನ. ಈ ಕವನದ ಮೂಲಕವೇ ಇದುವರೆಗಿನ ಹೆಣ್ಣಿನ ಮೌನವನ್ನು ಒಡೆಯುವ ಪ್ರಯತ್ನವನ್ನು ಕಾಣಬಹುದು. ಅಲ್ಲದೆ ಇಲ್ಲಿಯವರೆಗಿನ ಮೌನಕ್ಕೆ 'ಸುಳಿವೇ ಕಾಣದೆ ನಿಂತಿಹೆನು, ತೋರದೆ ಮೌನವ ಧರಿಸಿಹೆನು' ಎನ್ನುವ ವಾಕ್ಯ ಮಹಿಳಾ ಸಂಕಥನದ ಸುಳಿವುಗಳನ್ನು ತೆರೆದಿಡುತ್ತದೆ. ಒಂದು ಕಡೆ ಆಯ್ಕೆಯ ಬಗೆಗಿನ ಗೊಂದಲ ಕಾರಣವಾದರೆ ಮತ್ತೊಂದೆಡೆ ಏನು ಮಾಡಲು ದಿಕ್ಕುತೋಚದ ಸ್ಥಿತಿಗೆ ಒಳಪಟ್ಟಿರುವುದು ಕಾರಣವಾಗಿದೆ. ಇದರಿಂದಾಗಿ ಇದುವರೆಗೆ ಮೌನದಿಂದಿರಬೇಕಾಗಿದೆ. ಆದರೆ ಮುಂದೆ ಕೂಡ ಅದೇ ರೀತಿ ಇರಲು ಸಾಧ್ಯವಿಲ್ಲ ಎನ್ನುವ ಆಶಯ ಕವನದ ಮುಂದಿನ ಭಾಗದಲ್ಲಿ ಕಂಡುಬರುತ್ತದೆ. ಇವರ 'ಎಚ್ಚರಿಕೆ' ಕವನ ಮತ್ತೊಂದು ರೀತಿಯಲ್ಲಿ ವ್ಯವಸ್ಥೆಯೊಂದಿಗೆ ಮುಖಾಮುಖಿಯಾಗುತ್ತದೆ. ತನ್ನ ಹಾಗೂ ಸಮಕಾಲೀನ ಹೆಣ್ಣಿನ ಸ್ಥಿತಿಗತಿಗತಿಗಳನ್ನು 'ಬಂಧನವರಿಯದೆ ಸುಖವನು ಬಯಸದೆ ಬೆಳೆಯುತ ಬರುತಹಳೀ ಸೀತೆ' ಎನ್ನುವ ಮೂಲಕ ಆಧುನಿಕ ಸಂದರ್ಭಕ್ಕೆ ತಕ್ಕಂತೆ ಹೆಣ್ಣು ಬದಲಾಗಬೇಕಾದ, ಬದಲಾಗುತ್ತಿರುವ ಕಡೆಗೆ ಗಮನ ಸೆಳೆಯುತ್ತದೆ. ಹಿಂದಿನಿಂದಲೂ ತನ್ನ ಅಧೀನ ಸ್ಥಿತಿಯನ್ನು ಒಪ್ಪಿ ಬಂದ ಹೆಣ್ಣಿಗೆ ತಾನು ಬಂಧನದಲ್ಲಿರುವೆ ಎಂಬ ಅರಿವು ಮೂಡಿದ್ದೇ ಬಹಳಷ್ಟು ತಡವಾಗಿ. ಇಂತ ಸಂದರ್ಭದಲ್ಲಿ ಹೆಣ್ಣು ತನ್ನ ಸ್ಥಿತಿ ಇದೇ, ತಾನು ಇರಬೇಕಾದದ್ದು ಹೀಗೆಯೇ ಎಂಬ ನಿರಾಶಾಭಾವಕ್ಕೆ ಒಳಗಾದದ್ದು ಸಹಜವೆ, ಆದರೆ ಸದಾ ಅದನ್ನು ಮೀರುವ, ತನ್ನ ಆಸೆ ಬಯಕೆಗಳನ್ನು ಗುರುತಿಸಿಕೊಳ್ಳುವ, ಪೂರೈಸಿಕೊಳ್ಳುವ ಹಂಬಲ ಭಿನ್ನ ಭಿನ್ನ ಮಾದರಿಗಳಲ್ಲಿ ಮಹಿಳಾಕಾವ್ಯದಲ್ಲಿ ಅಭಿವ್ಯಕ್ತಗೊಂಡಿದೆ. ಜಾನಕಮ್ಮ ಶಿಕ್ಷಣದ ಮೂಲಕ ಈ ಬಯಕೆಗಳನ್ನು ಪೂರೈಸಿಕೊಳ್ಳುವ ಹಂಬಲ ಹೊಂದಿದ್ದಾರೆ. ಆದರೆ ಅದಕ್ಕೆ ಎದುರಾಗುವ ಸವಾಲು, ಹಾಗೂ ಅಡೆತಡೆಗಳ ಬಗೆಗೆ ಲೇಖಕಿಗೆ ಸಂಪೂರ್ಣ ಅರಿವಿದೆ. ಈ ಅರಿವು ಅವರ ಎಚ್ಚರಿಕೆ ಕವನದಲ್ಲಿ ಸ್ಪಷ್ಟವಾಗಿ ಕಂಡುಬರುವುದಲ್ಲದೆ ಗಂಡು ಈ ರೀತಿ ಹೆಣ್ಣನ್ನು ನಿಯಂತ್ರಿಸುವ ಕೆಲಸಗಳಿಂದ ಹೊರಬರಬೇಕು ಎಂಬ ಆಶಯವೂ ಇದೆ.

ವಿಶ್ವದ ರಂಗದಿ ನಾನಾ ಬಗೆಗಳ ಯಂತ್ರಗಳಿರುವುದು ಎಚ್ಚರಿಕೆ
ಕಣ್ಣಿಗೆ ಕಾಣದ ಸ್ಥಳದೊಳು ಕೆಲವೆಡೆ ಮಣ್ಣೊಳು ಹುದುಗಿವೆ ವಜ್ರಗಳು
ಹೊನ್ನಿನ ರಾಶಿಯ ಮಧ್ಯದಿ ಕೆಲವೆಡೆ ಸರ್ಪಗಳಿರುವುವು ಎಚ್ಚರಿಕೆ
ಕಲ್ಮಷವಿಲ್ಲದ ನನ್ನೀ ಹೃದಯದಿ ಮುಳ್ಳಿನ ಕಂಪೆಯ ಹರಡದಿರು
ಕಷ್ಟದಿ ನರಳುವ ಜನರಿಗೆ ಮರುಗುತ ಸಾಯವ ಮಾಳ್ಪುದ ಮರೆಯದಿರು

ಇಲ್ಲಿನ ಆಶಯ ಎಲ್ಲರನ್ನೂ ಸಮಾನವಾಗಿ ಕಾಣಬೇಕೆಂಬುದೇ ಆಗಿದೆ. ಇದು ಜಾನಕಮ್ಮನವರ ಎಲ್ಲಾ ಕವನಗಳ ಕೇಂದ್ರ ಕಾಳಜಿ ಕೂಡ ಹೌದು. ಹಾಗಾಗಿಯೇ ಬೆಳಗೆರೆ ಜಾನಕಮ್ಮ ಹೆಣ್ತನದ ಅರಿವಿನ ಎಚ್ಚರಿಕೆಯೊಂದಿಗೆ ಕಾವ್ಯ ಕೌದಿಯನ್ನು ಹೆಣೆದಿದ್ದಾರೆ. ಇದರೊಳಗೆ ಎಲ್ಲವೂ, ಎಲ್ಲರೂ ಸಮಾನ ಪಾತ್ರಚಿತ್ರಗಳೇ ಆಗಿರುವುದು ವಿಶೇಷ.

ಪರಾಮರ್ಶನ ಗ್ರಂಥಗಳು

1. ನೇಮಿಚಂದ್ರ ಬೆಳಗೆರೆ ಜಾನಕಮ್ಮ ಬದುಕು – ಬರಹ,
2. ವಿಜಯಾದಬ್ಬೆ ; 1997, ನಾರಿ: ದಾರಿ– ದಿಗಂತ, ರಚನಾ ಪ್ರಕಾಶನ, ಮೈಸೂರು.
3. ಆಶಾದೇವಿ ಎಂ.ಎಸ್. ; 2006, ಸ್ತ್ರೀಮತವನುತ್ತರಿಸಲಾಗದೆ? ಅಕ್ಷರ ಪ್ರಕಾಶನ, ಹಗ್ಗೋಡು.
4. ಆಶಾದೇವಿ ಎಂ.ಎಸ್. ; 2011, ನಡುವೆ ಸುಳಿವ ಆತ್ಮ, ಅರ್ಹನಿಶಿ ಪ್ರಕಾಶನ, ಶಿವಮೊಗ್ಗ.

❖❖❖

Form IV

Statement about ownership and other particulars about
CHINTHANA BAYALU (Quarterly)

1.	Place of Publication	:	Bantwal, Dakshina Kannada
2.	Periodicity of its publication	:	Quarterly
3.	Printers Name	:	Reshma G. Bhat
	Nationality	:	Indian
	Address	:	No. 15-109, Modankapu Bantwal Taluk, D.K. - 574 219
4.	Publishers Name	:	Reshma G. Bhat
	Nationality	:	Indian
	Address	:	No. 15-109, Modankapu Bantwal Taluk, D.K. - 574 219
5.	Editors Name	:	Reshma G. Bhat
	Nationality	:	Indian
	Address	:	No. 15-109, Modankapu Bantwal Taluk, D.K. - 574 219
6.	Names and address of individuals who own the newspaper and partners or sharesholders holding more than one percent of the total capital		

I, Reshma G. Bhat, hereby declare that the particulars given above are true to the best of my knowledge and belief.

Date: 1 July 2023

Reshma G. Bhat
(Publisher)

ಸು.ರಂ. ಕಥನ ಕವನಗಳಲ್ಲಿ ಪುರಾಣದ ಹೆಣ್ಣುಗಳು

ರೇಶ್ಮಾ ಭಟ್
ಕನ್ನಡ ಉಪನ್ಯಾಸಕಿ
ಸರಕಾರಿ ಪ್ರಥಮ ದರ್ಜೆ ಕಾಲೇಜು, ವಾಮದಪದವು- 574324 ದ.ಕ.

ಸೀತೆ ಜನಕನ ಮಾನಸ ಪುತ್ರಿ ಆದರೂ ಆಕೆಗೆ ಜಾನಕಿ ಎಂಬ ಅಭಿಧಾನ ಒದಗಿ ಬಂದದ್ದು ಹೇಗೆ? ಊರ್ಮಿಳೆ ಜನಕರಾಜನ ಔರಸ ಪುತ್ರಿ ಆದರೂ ಆಕೆ ಮೈಥಿಲಿಯಲ್ಲ ಬರಿಯ ಊರ್ಮಿಳೆ ಮಾತ್ರ. ಇದು ಯಾಕೆ ಹೀಗೆ? ವಾಲ್ಮೀಕಿ ಮಹರ್ಷಿಗಳ ಮನಸ್ಸಿನಲ್ಲಿಯೇ ಈ ತಾರತಮ್ಯ ಇತ್ತೇ? ಸೀತೆ ಕಾವ್ಯದ ನಾಯಕಿ, ಕಾವ್ಯದ ಉದ್ದಕ್ಕೂ ಅವಳ ಸಂಚಾರವಿರುತ್ತದೆ... ಅಲ್ಲೆಲ್ಲ ನಾವು ಅವಳನ್ನು ಬೇರೆ ಬೇರೆ ನಾಮಾಂಕಿತಗಳಿಂದ ಉಲ್ಲೇಖಿಸಬೇಕಾಗುತ್ತದೆ... ಒಂದೇ ಹೆಸರು ಓದುಗರಲ್ಲಿ ಏಕತಾನತೆಯನ್ನು ಮೂಡಿಸಬಹುದಾದ್ದರಿಂದ ಅದನ್ನೂ ನೀಗಿಸಿಕೊಳ್ಳಬೇಕಾಗುತ್ತದೆ... ಛಂದಸ್ಸಿನ ನಿರ್ವಹಣೆಗೂ ಬೇಕಾಗುತ್ತದೆ... ಎಲ್ಲಾ ಪಾತ್ರಗಳಿಗೂ ಕಾವ್ಯಗಳಲ್ಲಿ ಸಮಾನ ಮಹತ್ವ ಒದಗಿಸಲು ಸಾಧ್ಯವಿಲ್ಲ ಕೆಲವು ಪಾತ್ರಗಳನ್ನು ವೈಭವೀಕರಿಸಲು ಇದು ಅಗತ್ಯ... ಎಂದೆಲ್ಲ ನಮಗೆ ನಾವೇ ಉತ್ತರಿಸಿಕೊಂಡರೂ ಇವೆಲ್ಲ ಸಮಂಜಸ ಉತ್ತರವಾಗಲಾರದು. ಆದರೆ 'ಮಿಥಿಲೆ' ಎಂಬ ಕಥನ ಕವನವೊಂದು ಕಾವ್ಯದಲ್ಲಿ ಸಿಕ್ಕದ ಉತ್ತರವನ್ನು ನಮ್ಮೆದುರಿಗಿರಿಸುತ್ತದೆ.

'ಎಂದಾದರೊಂದು ದಿನ ನಾನು ಮಿಥಿಲೆಗೆ ಹೋಗಿ
ಬೀದಿ ಬೀದಿಯನಲೆದು ನೋಡಿ ಬರುವೆ'

ಎಂದು ಪ್ರಾರಂಭವಾಗುವ ಕವನ ರಾಮಭದ್ರ ಸೀತಾ ಸ್ವಯಂವರಕ್ಕಾಗಿ ವಿಶ್ವಾಮಿತ್ರರೊಡನೆ ಮಿಥಿಲೆಗೆ ತೆರಳುವುದು, ದಾರಿಯಲ್ಲಿ ಅವನು ನೆರಳಿಗಾಗಿ ನಿಂತ ಮರ, ವಿಶ್ರಾಂತಿಗಾಗಿ ಕುಳಿತಂತಹ ಕಲ್ಲು ಇತ್ಯಾದಿಗಳನ್ನು ವರ್ಣಿಸುತ್ತಾ ಸಾಗುತ್ತದೆ. ಮಿಥಿಲೆಯಲ್ಲಿ ರಾಮನು ಶಿವಧನುವನ್ನು ಎತ್ತಿ ಸೀತೆಯನ್ನು ವರಿಸುತ್ತಾನೆ. 'ಮಗಳೆ ಮಂಗಳವಿರಲಿ' ಎಂದು ಬಾಯಿತುಂಬ ಹಾರೈಸುತ್ತಾ, ಬೆಲೆಯನ್ನೇ ಕಟ್ಟಲಾರದಂತಹ ಉಡುಗೊರೆಯೊಂದನ್ನು ಜನಕರಾಜ ಮಗಳಿಗೀಯುತ್ತಾನೆ. ತನ್ನ ಹೊಲದ ಮಣ್ಣನ್ನು ಬಂಗಾರದ ಕರಡಿಗೆಯ ತುಂಬ ತುಂಬಿ ಮಗಳಿಗೆ ಕೊಡುತ್ತಾನೆ. ಇದಕ್ಕಿಂತ ಉತ್ತಮ ಉಡುಗೊರೆ ಮಣ್ಣಿನ ಹುಡುಗಿಗೆ ಯಾರಾದರು ಕೊಡಲು ಸಾಧ್ಯವೇ? ನೇಗಿಲ ಗೆರೆ ಭೂಮಿಯ ಎದೆಯನ್ನು ಸೀಳುತ್ತಾ ನಡೆವಾಗ ಸಿಕ್ಕಿದವಳು ಅವಳು.

'ಎಲ್ಲಿ ಹೊಲ ಉತ್ತರೂ ದೊರೆಯುವುದು ಹೆಣ್ಣು ಮಗು
ಜನಕರಾಜನ ಭಾಗ್ಯನಿಧಿಯ ತೆರೆದು'

ಮಣ್ಣಿನೊಳಗಣ ನಿಧಿ ಅವಳು ಎಂದು ಹೇಳುವ ಕವಿ ಸೀತೆ ಜನಕನಿಗೊಲಿದ ಭಾಗ್ಯನಿಧಿ ಎನ್ನುತ್ತಾರೆ. ಮೈಥಿಲಿ, ಜಾನಕಿ ಎಂಬ ಅಭಿಧಾನಗಳು ಆಕೆಗೆ ಸಲ್ಲಕೇಬೇಕಾದವುಗಳು. ಏಕೆಂದರೆ ಆಕೆ ಮಿಥಿಲೆಯ ಮಣ್ಣು.

"ಅಲ್ಲಿ ಮಣ್ಣೇ ಹಾಗೆ ಎಲ್ಲೆತ್ತಿಕೊಂಡರೂ
ರಾಮಭದ್ರನ ಕರುಣೆ ಸ್ಪಂದಿಸುವುದು"

ಸೀತೆ ರಾಮನನ್ನು ವರಿಸುವುದರ ಮೂಲಕ ಮಿಥಿಲೆಯ ಮಣ್ಣು ಇನ್ನಷ್ಟು ದೈವೀಕವಾಗುತ್ತದೆ. ಸ್ಪಂದನಶೀಲವಾಗುತ್ತದೆ. ವೈದೇಹಿ, ಮೈಥಿಲೆ, ಜಾನಕಿ ಎಲ್ಲವೂ ಆಗುತ್ತಾಳೆ ಸೀತೆ. ಜನಕರಾಜನ ಹೊಲದ ಮಣ್ಣನ್ನು ಇಷ್ಟು ಔನತ್ಯಕ್ಕೇರಿಸಿದ ಕವಿ ಬೇರಾರೂ ಅಲ್ಲ ಕನ್ನಡದ ಕಥನ ಗೀತೆಗಳ ಸರದಾರನಂದೇ ಕರೆಯಬಹುದಾದ ಸುಬ್ಬಣ್ಣ ರಂಗನಾಥ ಎಕ್ಕುಂಡಿ. ಸು. ರಂ. ಎಕ್ಕುಂಡಿ.

"ಎಂದಾದರೊಂದು ದಿನ ನಾನು ಮಿಥಿಲೆಗೆ ಹೋಗಿ
ಬೀದಿ ಬೀದಿಯನಲೆದು ನೋಡಿ ಬರುವೆ
ರಾಮಭದ್ರನ ಕಥೆಯ ಹಾಡಿ ಕರಡಿಗೆಯಲ್ಲಿ
ಜನಕರಾಜನ ಹೊಲದ ಮಣ್ಣು ತರುವೆ"

ಎಂದು ಕವನವನ್ನು ಮುಗಿಸುವ ಕವಿ ಸೀತೆ ದಕ್ಕಿದ್ದರಿಂದಲೇ ಜನಕರಾಜನ ಹೊಲಕ್ಕೆ ಆ ಮಹತ್ತು ಬಂತು, ಜನಕನ ಹೆಸರು ಸ್ಥಾಯಿಯಾಗಿ ಉಳಿಯಲು ಕಾರಣವೂ ಆಯಿತು ಎಂಬುದನ್ನು ಮತ್ತೊಮ್ಮೆ ಓದುಗರ ಮುಂದೆ ಇಡುತ್ತಾರೆ. ವಾಲ್ಮೀಕಿ ದರುಶನವನ್ನು ಇನ್ನಷ್ಟು ಪುಷ್ಟೀಕರಿಸುತ್ತಾರೆ.

ಪುರಾಣದ ಸ್ತ್ರೀ ಪಾತ್ರಗಳನ್ನು ಈ ರೀತಿ ಔನ್ನತ್ಯಕ್ಕೇರಿಸುವುದು ಎಕ್ಕುಂಡಿಯವರಿಗೆ ತುಂಬ ಸಲೀಸು. ದೇವೇಂದ್ರನ ಮಗಳು ಮಿಸುನಿ ಜಿಂಕೆಯನ್ನು ಬಯಸುವ ಒಂದು ಕಥನಗೀತೆಯನ್ನು ನೋಡಬಹುದು.

"ತಾತ ಕೇಳು ಕಂಡವರ ಪುಣ್ಯವಿಂದು
ನನ್ನ ಜೀವ ಹಾರೈಸುತಿಹುದಾ ಮಿಸುನಿ ಜಿಂಕೆಗೆಂದು"

ಎಂದು ಮಗಳು ಜಯಂತಿ ತನ್ನ ಬಯಕೆಯನ್ನು ತಿಳಿಸಿದ ಕೂಡಲೆ ದೇವೇಂದ್ರ, "ಯಾವ ಮಿಸುನಿಯದು? ಯಾವ ಜಿಂಕೆ ಬಯಸಿರುವೆ ಮುದ್ದು ಕುವರಿ?" ಎಂದು ಹರಿಪೀಠವನು ಬಿಟ್ಟು ಕೆಳಗಿಳಿದು ಬಂದು ಮಗಳ ಮುಡಿಸವರುತ ಕೇಳುವುದು ಒಂದು ಆತ್ಮೀಯ ಸನ್ನಿವೇಶವನ್ನೇ ನಿರ್ಮಾಣ ಮಾಡಿಕೊಡುತ್ತದೆ. ಇಲ್ಲಿ ಕುಮಾರವ್ಯಾಸ ನಮ್ಮ ನೆನಪಿನೊಳಗೆ ಬರುತ್ತಾನೆ. ಸೌಗಂಧಿಕಾಪುಷ್ಪವನ್ನು ಬಯಸಿದ ದ್ರೌಪದಿಯನ್ನು ಕುಮಾರವ್ಯಾಸನ ಭೀಮ ಇದೇ ರೀತಿ ಸಂತೈಸುತ್ತಾನೆ. ಈ ಪದ್ಯವನ್ನು ನೋಡಿ,

ಹಿರಿದು ಸೊಗಸಾಯ್ತೆನಗೆ ಪೂರ್ವದ
ಪರಿಮಳದ ಕೇಳಿಯಲಿ ನೀನಾ
ಸರಸಿಜವ ತಂದಿತ್ತು ತನ್ನ ಮನೋರಥ ವ್ಯಥೆಯ
ಪರಿಹರಿಪುದೆನಲಬುಜವದನೆಯ
ಕುರುಳನುಗುರಲಿ ತಿದ್ದಿದನು ತ
ತ್ಸರಸಿಜವ ತಹೆನೆನುತ ಕೊಂಡನು ನಿಜ ಗದಾಯುಧವ॥

ಭೀಮನಂತಹ ಒರಟನಲ್ಲೂ ಈ ಬಗೆಯ ಸಂಸ್ಕಾರವನ್ನು ತುಂಬುವುದಕ್ಕೆ ಸಾಧ್ಯವಾಗುವುದು ಸಾಂಸಾರಿಕ ಬದುಕನ್ನು ಅರ್ಥ ಮಾಡಿಕೊಂಡ ಕವಿಗೆ ಮಾತ್ರ.

ಇದೇ ರೀತಿಯ ಇನ್ನೊಂದು ಚಿತ್ರಣವನ್ನು ನೋಡೋಣ.

ನಮ್ಮ ಆರ್ಷೇಯ ಕಾವ್ಯಗಳು ನಿರ್ಮಿಸಿದ ಅನೇಕ ಹೆಣ್ಣು ಪಾತ್ರಗಳಲ್ಲಿ ಯೋಜನಗಂಧಿ ಸತ್ಯವತಿ ಪಾತ್ರವು ಅತ್ಯಂತ ವಿಶಿಷ್ಟವಾದುದು. ಮತ್ಸ್ಯಗಂಧಿ ಆಗಿದ್ದವಳು ಯೋಜನಗಂಧಿಯಾದುದೇ ಮಹಾಭಾರತವೆಂಬ ಕಾವ್ಯಸೌಧ ಕಟ್ಟಲು ವ್ಯಾಸರು ಇಟ್ಟ

ಮೊದಲ ಇಟ್ಟಿಗೆ ಎಂದು ಹೇಳಬಹುದು. ಇಂಥಾ ಪಾತ್ರವು ಎಕ್ಕುಂಡಿಯವರ 'ಮತ್ಸ್ಯಗಂಧಿ ಸತ್ಯವತಿ' ಕಥನ ಕವನದಲ್ಲಿ ಇನ್ನಷ್ಟು ಪುಟಗಟ್ಟಿದೆ. ಧವಲಜಾಹ್ನವಿಯ ದಂಡೆಯಲ್ಲಿ ನಿಂತ ಪರಾಶರರನ್ನು 'ನಾವೆಗೆ ಬನ್ನಿ ಭಗವನ್' ಎಂದು ಆಕೆ ಕರೆಯುವುದೇ ಒಂದು ಸೊಗಸು. ಸಹಜ ವಿಧೇಯತೆ ತುಂಬಿಕೊಂಡಿದೆ ಆ ಮಾತಿನಲ್ಲಿ. ಮುಂದುವರಿದು ಆಕೆ,

'ಭಗವನ್ ಹುಟ್ಟನ್ನು ಬಲ್ಲೆವು

ಗಂಗಾಮಾತೆಯ ಗುಟ್ಟನ್ನು ಬಲ್ಲೆವು'

ಎನ್ನುತ್ತಾ ನಾವೆಯನ್ನು ನಡೆಸುತ್ತಾಳೆ. ಅವಳಲ್ಲಿ ಕಾಣಿಸುವ ಈ ಜೀವನ ಸಂಸ್ಕಾರ ನಮ್ಮ ನೆಲದ ಹೆಣ್ಣುಗಳ ಬಗೆಗೆ ಅಭಿಮಾನ ತಾಳುವಂತೆ ಮಾಡುತ್ತದೆ. ಆಕೆಯನ್ನು ಜಲದೇವತೆ ಮೀನಾಕ್ಷಿ ಎಂದು ಕವಿ ಕರೆಯುತ್ತಾರೆ. ಈ ಜಲದೇವತೆಯನ್ನು ನೋಡಿ ಪರವಶಗೊಂಡ ಪರಾಶರರು 'ಕೊಡಬಲ್ಲೆಯ ನಿನ್ನಯ ಭೋಗ' ಎಂದು ಕೇಳಿದ್ದರಲ್ಲಿ ಆಶ್ಚರ್ಯವೇನಿಲ್ಲ. ಈ ಪ್ರಶ್ನೆಯನ್ನು ಕೇಳಿದ ಕೂಡಲೆ ಆಕೆಯ ಮನಸ್ಸು ಗಂಗಾಲಹರಿಯಂತೆ ಹೊಯ್ದಾಡುತ್ತದೆ. ಇವೆಲ್ಲ ಬದುಕಿನ ಸಹಜ ವ್ಯಾಪಾರಗಳು. ಒಂದು ಸಂಸ್ಕೃತಿಯ ಆದಿಕಾವ್ಯಗಳು ಇಂಥವನ್ನು ಹೇರಳವಾಗಿ ಕಟ್ಟಿಕೊಟ್ಟಿವೆಯೆಂದರೆ ಮನುಷ್ಯನ ಮನೋವ್ಯವಹಾರಗಳು ಎಲ್ಲ ಕಾಲಕ್ಕೂ ಒಂದೇ ಎನಿಸುತ್ತವೆ.

'ಕನ್ನಿಕೆ ಕೌಮಾರಿಕೆ ಕಳಕೊಂಡರೆ

ವಧುವಾಗದೆ ತಾಯ್ತನ ಸುಖವುಂಡರೆ ಗತಿ ದುರ್ಗತಿ'

ಎಂಬ ಮುಂದಾಲೋಚನೆಯ ನುಡಿಗಳನ್ನು ಆಡುತ್ತಾಳೆ. ಭಾರತ ಮಹಾಕಾವ್ಯದಲ್ಲಿ ಮುಂದೆ ಶಂತನುವಿನ ಭೇಟಿಯ ಸಂದರ್ಭದಲ್ಲೂ ಅವಳ ಮಾತುಗಳು ಇದೇ ರೀತಿಯಲ್ಲಿರುವುದು ಗಮನಾರ್ಹ ಅಂಶ.

'ಹೇ ಮತ್ಸ್ಯಗಂಧಿಯೇ ನಿಮಿತ್ತಮಾತ್ರಳಾಗು

ಹೆತ್ತು ಮತ್ತೆ ಕೌಮಾರಪ್ರಾಪ್ತಳಾಗು'

ಯಾವುದೋ ಸಂದರ್ಭಕ್ಕೊಂದು ತಂತುವಾಗಬೇಕಾದರೂ ಅದನ್ನು ಲೆಕ್ಕಿಸದೆ, 'ಭಗವತ್ಪ್ರಸಾದ' ಎಂದು ಸ್ವೀಕರಿಸುತ್ತಾಳೆ. ಕಾನೀನ ಪುತ್ರ ಕೃಷ್ಣದ್ವೈಪಾಯನನನ್ನು ಪಡೆದು ದಾಶಕನ್ಯೆಯಾಗಿಯೇ ದಂಡೆಗೆ ಮರಳುತ್ತಾಳೆ. ಹೀಗೆ ಮರಳಿದ ಮಗಳನ್ನು ಕಂಡು

'ಇದೇನಾಟವಿದು ಮತ್ಸ್ಯಗಂಧ ಹೋಗಿ

ಮರಳಿಬಂದೆ ಯೋಜನಸುಗಂಧಿಯಾಗಿ'

ಎನ್ನುವ ತಂದೆ ದಾಶರಾಜನ ಮಾತುಗಳು ಓದುಗರ ಮನದಲ್ಲುಳಿಯುತ್ತವೆ. ವ್ಯಾಸದರ್ಶನದ ಸ್ತ್ರೀಚಿತ್ರ ಇನ್ನಷ್ಟು ಎತ್ತರಕ್ಕೇರುತ್ತದೆ.

ಅಪ್ಸರ ಸ್ತ್ರೀ ಊರ್ವಶಿಯ ಹುಟ್ಟನ್ನು ಕುರಿತು ಬರೆದಿರುವ 'ಊರ್ವಶಿ' ಕಥನ ಕವನದಲ್ಲೂ ಇದೇ ರೀತಿಯ ಕೆಲವು ಸಾಲುಗಳು ನಮ್ಮನ್ನು ಹಿಡಿದು ನಿಲ್ಲಿಸುತ್ತವೆ. ನರನಾರಾಯಣ ಋಷಿಗಳ ತಪಸ್ಸನ್ನು ಕೆಡಿಸಲು ಇಂದ್ರನು ಅಟ್ಟಿದ ಸ್ತ್ರೀಯರಲ್ಲಿ ಯಾವ ಸ್ವಾರಸ್ಯವನ್ನೂ ಕಾಣದ ಆ ಯಮಳ ತವಸಿಗಳು 'ನಂದನವನದೀ ಚೆಲುವಿನ ಮೊಗ್ಗೆಗಳೇತಕೆ ಬಂದಿಹವನುಕರಿಸಿ'? ಎಂಬ ಮರುಕವನ್ನು ವ್ಯಕ್ತಪಡಿಸುತ್ತಾರೆ.

'ಅಮರಾವತಿಯೊಳಪ್ಸರ ಚೆಲುವಿನ ಮೊಗ್ಗೆಗಳಿನ್ನೂ ಅರಳಿಲ್ಲ

ತಪಸೌಂದರ್ಯದ ಹೂವಿನ ರಾಯಸ ನಂದವನದೆಡೆ ತೆರಳಿಲ್ಲ'

ಎನ್ನುತ್ತಾ ಊರ್ವಶಿಯ ಹುಟ್ಟಿಗೆ ಒಂದು ಸುಂದರವಾದ ಪೀಠಿಕೆಯನ್ನು

ಬರೆಯುತ್ತಾರೆ. ನಂತರ ನಾರಾಯಣ ಋಷಿ ತೊಡೆ ಹೂವನ್ನು ಮಂತ್ರಿಸಿ ಹಾರಿಸಲು ನವಯೌವ್ವನೆ ರತ್ನಪ್ರಭೆ ತಲೆಬಾಗಿ ನಿಲ್ಲುತ್ತಾಳೆ. ಋಷಿಯ ತೊಡೆಯಿಂದ ಹುಟ್ಟಿದ ಅವಳನ್ನು ಸುರಪತಿ ದೇವೇಂದ್ರನಿಗೆ ಉಡುಗೊರೆಯಾಗಿ ನೀಡುವ ಸಂದರ್ಭದಲ್ಲಿ ಕವಿ ಹೇಳುವ ಮಾತು ಸ್ವಾರಸ್ಯಕಾರಿಯಾಗಿದೆ.

'ಮತ್ಯ್ಸಸೃಷ್ಟಿಯ ತಪಸೌಂದರ್ಯವ ದೇವಸೃಷ್ಟಿಗೆ ನೀಡಿದರು'

ಈ ಮಾತಿನ ಮೂಲಕ ಕವನವನ್ನು ಮುಗಿಸುವ ಕವಿ ಸುರಶಕ್ತಿಯ ಎದುರು ಮನುಜ ಶಕ್ತಿಯನ್ನು ಗೆಲ್ಲಿಸುತ್ತಾರೆ. ದೇವಲೋಕದ ಸೌಂದರ್ಯವನ್ನು ಇನ್ನೂ ಅರಳದ ಮೊಗ್ಗೆಗಳು ಎಂದು ಕನಿಕರಿಸಿ, ತಪಸೌಂದರ್ಯದ ರಾಯಭಾರಿಯನ್ನು ಸುರಲೋಕಕ್ಕೆ ನೀಡಿ, ತಮ್ಮನ್ನು ಲಘುವಾಗಿ ಪರಿಗಣಿಸಿದ ಇಂದ್ರನ ಅಹಂಕಾರವನ್ನು ಮುರಿಯುತ್ತಾರೆ.

ನಾಗವರ್ಮ ತನ್ನ 'ಕಾದಂಬರಿ' ಕಾವ್ಯದಲ್ಲಿ ಚಿತ್ರಿಸಿದ ಅಪ್ರತಿಮ ಚೆಲುವಿನ ಸ್ತ್ರೀಪಾತ್ರ ಮಹಾಶ್ವೇತೆ. ಮಹಾಶ್ವೇತೆ ಎನ್ನುವ ಹೆಸರೇ ಮೋಡಿ ಮಾಡುವಂಥದ್ದು. ಅದು ಎಕ್ಕುಂಡಿಯವರ ಕೈಕುಸುರಿಯಲ್ಲಿ ಇನ್ನಷ್ಟು ಚೆಲುವಾಗಿ ಕಂಗೊಳಿಸಿದೆ.

'ಇದೇ ಚೈತ್ರವನದಿದೇ ಕೊಳದ ನೀರ ಮೀಯಲೆಂದು
ಗೆಳತಿಯೊಡನೆ ಗಂಧರ್ವಕನ್ನೆ ಬನಬನವ ಬಳಸಿ ಬಂದು'

ಅಚ್ಛೋದ ಸರಸಿಗೆ ಮೀಯಲೆಂದು ಬಂದ ಮಹಾಶ್ವೇತೆಯನ್ನು ಕವಿ ಗಂಧರ್ವ ಕನ್ಯೆಯೆಂದೇ ಸಂಬೋಧಿಸುತ್ತಾರೆ.

'ಮಂಜುಮೇಖಲೆಯ ಕಟ್ಟಿ ಬೆರಳ ರುದ್ರಾಕ್ಷಿಮಾಲೆ ಹಿಡಿದು
ಕಪಿಂಜಲನ ಜತೆಯಲ್ಲಿ ಬಂದ ಮುನಿ ಪುಂಡರೀಕ ನಡೆದು'

ಅದೇ ಸರಸಿಯ ಬಳಿಗೆ ಮುನಿಕುಮಾರ ಪುಂಡರೀಕನೂ ಕಪಿಂಜಲನ ಜೊತೆ ಬರುತ್ತಾನೆ. ಹೀಗೆ ಇವರಿಬ್ಬರ ಭೇಟಿಗೆ ಅಚ್ಛೋದ ಸರೋವರದ ಅಚ್ಛತಿಳಿಜಲ ಸಾಕ್ಷಿಯಾಗುತ್ತದೆ. ಇಬ್ಬರ ಮನದಲ್ಲೂ ಕಾಮನ ಇಂದ್ರಛಾಪ ಮೂಡುತ್ತದೆ. ಪಂಚವರ್ಣದ ಗಿಳಿಯನ್ನು ತನ್ನ ಮುಂಗೈಯಲ್ಲಿರಿಸಿಕೊಂಡ ಮಹಾಶ್ವೇತೆಯನ್ನು ನೋಡಿ,

'ದೇವಿ ಬರಲಿ ಗಿಳಿಜನ್ಮ ಇರಲಿ ಸಾನಿಧ್ಯ ನಿನ್ನದೊಂದು'

ಎಂದು ಅವಳ ಸಾನಿಧ್ಯಕ್ಕಾಗಿ ಹಂಬಲಿಸಿ ಪುಂಡರೀಕ ನುಡಿಯುವ ಮಾತು ಮುಂದೆ ಕಾವ್ಯದಲ್ಲಿ ಸತ್ಯವಾಗಿ ಪರಿಣಮಿಸುತ್ತದೆ. ಕೆಳಗೆ ಬಿದ್ದ ಪುಂಡರೀಕನ ಕೈಯ ರುದ್ರಾಕ್ಷಿ ಮಾಲೆಯನ್ನು ಎತ್ತಿಕೊಳುವ ಮಹಾಶ್ವೇತೆ,

'ರುದ್ರಾಕ್ಷಿಮಾಲೆ ನನಗಿರಲಿ ಬರಲಿ ವಲ್ಕಲಾವಿಲಾಸ'

ಎಂದು ಆಡುವ ಮಾತೂ ಮುಂದಕ್ಕೆ ನಿಜವಾಗಿ ಪರಿಣಮಿಸುತ್ತದೆ. ಹೀಗೆ ಸಾಗುವ ಈ ಪ್ರಾಚೀನ ಕಥೆ ಸಂಸ್ಕೃತ ಕವಿ ಬಾಣಭಟ್ಟನ ಕಲ್ಪನೆಯ ಕೂಸಾದರೂ ಅದು ಕನ್ನಡದ ನಾಗವರ್ಮನಲ್ಲಿ ಅರಳಿದಂತೆ ಆಧುನಿಕ ಕವಿ ಎಕ್ಕುಂಡಿಯವರಲ್ಲಿ ಇನ್ನಷ್ಟು ಸುಂದರವಾಗಿ ಪುಷ್ಟಿಗೊಂಡಿದೆ. ಪ್ರಕೃತಿ ವರ್ಣನೆ, ಅರಳುವ ಯೌವ್ವನ, ಚಿಗುರುವ ಪ್ರೇಮ, ಬಳಲಿಸುವ ವಿರಹ, ಕೊನೆಯ ದುಃಖಾಂತ ಇವೆಲ್ಲವು ಕವಿ ಕಲ್ಪನೆಯ ಸಾಣೆಗೆ ಸಿಕ್ಕಿ ಪ್ರಕಾಶಮಾನವಾಗಿವೆ. ಹಾಡಲು ಅನುಕೂಲವಾಗುವಂತೆ ಪದಗಳ ಜೋಡಣೆಯಾಗಿ ಇದು ನಿಜಾರ್ಥದಲ್ಲಿ 'ಕನ್ನಡ ಕಾದಂಬರಿ'ಯಾಗಿದೆ.

ಶ್ರೀಕೃಷ್ಣನ ಜೀವನದೊಂದಿಗೆ ಬೆಸೆದುಕೊಂಡ ಅನೇಕ ಪವಾಡ ಕಥೆಗಳಲ್ಲಿ ಇದೂ ಒಂದು. ಮಥುರೆಯ ಬೀದಿಯಲ್ಲಿ ಇವಳ ಭೇಟಿಯಾಗುತ್ತದೆ. ಬೆನ್ನಿನ ಗೂನು ಕಳೆದು

ಅವಳೊಬ್ಬ ಸುಂದರ ಸ್ತ್ರೀಯಾಗುವ ಈ ಪ್ರಸಂಗ ಎಕ್ಕುಂಡಿಯವರ 'ಕುಬ್ಜಾಂಗನಾ' ಕಥನ ಕಾವ್ಯದಲ್ಲಿ ಮತ್ತೊಮ್ಮೆ ನಮಗೆ ಕಾಣಲು ಸಿಗುತ್ತದೆ. ಕೃಷ್ಣ ಬಲರಾಮರು ಮಥುರೆಯ ಬೀದಿಯಲ್ಲಿ ನಡೆದುಕೊಂಡು ಹೋಗುತ್ತಿರುವಾಗ ಈಕೆ ಕೈಯಲ್ಲಿ ಶ್ರೀಗಂಧದ ಬಟ್ಟಲು ಹಿಡಿದುಕೊಂಡು ಬರುತ್ತಿರುತ್ತಾಳೆ. ವಿಕಾರ, ಬಾಗಿದ ಬೆನ್ನು, ತ್ರಿವಕ್ರಿಯ ರೂಪದ ಇವಳು ಕೃಷ್ಣನನ್ನು ಕಾಣುತ್ತಲೇ ದಳದಳನೆ ಕಣ್ಣೀರು ಸುರಿಸಿ ಆತನ ಪಾದವನ್ನು ತೊಳೆಯುತ್ತಾಳೆ. ಅದು ಬರಿಯ ಕಣ್ಣೀರು ಅಲ್ಲ ಭಕ್ತಿಬಾಷ್ಪವಾರಿ. ಕಂಸನ ಚಂದನದೂಳಿಗದೊಳಿದ್ದ ಇವಳು ಕೃಷ್ಣನ ಬಳಿ ಸಾರುತ 'ಪರಿಗ್ರಹಿಸಿರೀ ಶ್ರೀಗಂಧ' ಎಂದು ಕೈಯಲ್ಲಿದ್ದ ಹೊಂಬಟ್ಟಲನ್ನು ಭಗವಂತನ ಅಂಜಲಿಯಲ್ಲಿರಿಸುತ್ತಾಳೆ.

'ವಿಷವಡವಾಗ್ನಿಯ ದೈತ್ಯಶರೀರಕೆ' ಲೇಪನವಾಗಬೇಕಿದ್ದ ಆ ಚಂದನ ಲೇಪವು ಕೃಷ್ಣಾರ್ಪಿತವಾಗುತ್ತದೆ. ಭಗವಂತನಿಗೆ ಸುಗಂಧ ಲೇಪನವಾಗುತ್ತದೆ. ಭಕ್ತಿಗಂಧಕ್ಕೆ ಮನಸೋತ ಕೃಷ್ಣನು ಕುಬ್ಜೆಯನ್ನು ಪ್ರೀತಿಯಿಂದ ಆಲಂಗಿಸಿಕೊಳ್ಳುತ್ತಾನೆ.

'ತ್ರಿವಿಕ್ರಮನ ಕಾರುಣ್ಯದ ಸೋಂಕಿಗೆ
ಕುಬ್ಜೆಯ ತ್ರಿವಕ್ರತೆಯಡಗಿತ್ತು'
ಕೊನೆಗೆ,
'ಗೋಪಿಯಾಗಿ ಶ್ರೀಗಂಧವನಿತ್ತನು
ರಾಸಕ್ರೀಡೆಯು ನಮಗೆಂದು?' ಎಂದು ಸುಂದರ ಸ್ತ್ರೀಯಾಗಿ ಪರಿವರ್ತಿತಳಾದ ಕುಬ್ಜೆಯು ಕೇಳುವ ಪ್ರಶ್ನೆ ಮಾರ್ಮಿಕವಾಗಿದೆ.

ಹಳೆಯ ಒಂದು ಕಥೆಯನ್ನು ಕಾವ್ಯರೂಪಕ್ಕೆ ತಂದು ಅದರೊಳಗಿನ ಪಾತ್ರಕ್ಕೆ ಕಿಂಚಿದೂನ ಬರದಂತೆ ಚಿತ್ರಿಸುವುದು ಕವಿಪ್ರತಿಭೆಗೆ ಮಾತ್ರ ಸಾಧ್ಯ. ಅಂಥದೊಂದು ಪಾತ್ರ ಉಭಯಭಾರತಿಯದು. ಶಂಕರಾಚಾರ್ಯರಿಗೂ ಮಂಡನಮಿಶ್ರರಿಗೂ ನಡೆದ ವಾಗ್ವಾದದ ಪ್ರಸಿದ್ಧ ಕಥೆ ಇದು. ಅಲ್ಲಿ ಇಬ್ಬರ ವಾದದ ಸಮನ್ವಯಕಾರ್ತಿಯಾಗಿ ಮಂಡನಮಿಶ್ರರ ಭಾರ್ಯೆ ಉಭಯಭಾರತಿ ಕಾಣಿಸಿಕೊಳ್ಳುತ್ತಾಳೆ. ಶಂಕರಾಚಾರ್ಯರ ಜೀವನದೊಂದಿಗೆ ಸೇರಿಕೊಂಡಿರುವ ಈ ಕಥೆಯನ್ನು 'ಉಭಯ ಸರಸ್ವತಿ' ಎಂಬ ಶೀರ್ಷಿಕೆಯಡಿ ಎಕ್ಕುಂಡಿಯವರು ಕಾವ್ಯಕ್ಕೆ ತಂದಿದ್ದಾರೆ. ಮಾಹಿಷ್ಮತಿ ನಗರದಲ್ಲಿ ನಡೆಯುವ ಈ ವಾಗ್ವಾದ ಚರ್ಚೆ ಕೆಲವು ಪವಾಡಗಳನ್ನೂ ಸೇರಿಸಿಕೊಂಡು ಸಾಕಷ್ಟು ಪ್ರಸಿದ್ಧವಾಗಿದೆ. ಚರ್ಚೆಗೂ ಮುನ್ನ ಎರಡು ಹೂಹಾರಗಳನ್ನು ತಂದು ಉಭಯಸರಸ್ವತಿ ಇಬ್ಬರ ಕೊರಳಿಗೂ ಹಾಕಿ ಯಾರ ಕೊರಳಿನ ಹಾರವು ಬೇಗ ಬಾಡುತ್ತದೋ ಅವರು ಚರ್ಚೆಯಲ್ಲಿ ಸೋತಂತೆ ಎಂದು ಹೇಳುತ್ತಾಳೆ.

'ಮೊದಲಿಗೆ ಬಾಡುವ ಮಾಲೆಯ ಕೊರಳಿನ
ನುಡಿಯೇ ಸೋಲಿನ ಸಂಕೇತ'

ವಾಗ್ವಿವಾದಗಳು ನಡೆಯುತ್ತಿರುವಾಗ ಮಂಡನಮಿಶ್ರರ ಕೊರಳಿನ ಹೂಹಾರ ಅರ್ಧ ಬಾಡುತ್ತದೆ.

'ಮಂಡನ ಮಿಶ್ರರ ಸೋಲಾದರು
ಅವರರ್ಧಾಂಗಿಗೆ ಸೋಲ್ಬರಲಿಲ್ಲ'

ಎಂದು ಅರ್ಧಬಾಡಿದ ಹೂಮಾಲೆಯನ್ನು ತೋರಿಸುತ್ತಾ ವಿಪ್ರಸಭೆಗೆ ಆಕೆ ಹೇಳುವುದು ಅರ್ಥಪೂರ್ಣವಾಗಿದೆ. ವಿದ್ವಜ್ಜನರ ಸಭೆಯಲ್ಲಿ ಸಮನ್ವಯಕಾರ್ತಿಯಾಗಿ

ಕುಳಿತುಕೊಳ್ಳಲು ಅರ್ಹತೆಯಿರುವ ಉಭಯಸರಸ್ವತಿಯ ಘನತೆಗೆ ತಕ್ಕುದಾಗಿಯೇ ಕವಿಯ ಈ ಮಾತು ಬಂದಿದೆ.

ಕಾವ್ಯವನ್ನು ಮಾಧ್ಯಮವನ್ನಾಗಿಸಿಕೊಂಡು ಕಥೆಯನ್ನು ಹೇಳುವುದು ನಮ್ಮ ವಾಙ್ಮಯ ಪರಂಪರೆಯಲ್ಲಿ ನಿರಂತರವಾಗಿ ಹರಿದು ಬಂದ ಒಂದು ಸ್ರೋತವಾಗಿದೆ. ಆದಿಕಾವ್ಯ ರಾಮಾಯಣದಲ್ಲೇ ಮುಖ್ಯ ಕಥೆಯ ಜೊತೆ ಇನ್ನೆಷ್ಟೋ ಉಪಾಖ್ಯಾನಗಳಾಗಿ ಸೇರಿಕೊಳ್ಳುತ್ತವೆ. ಉಪಕಥೆಗಳನ್ನು ಬದಿಗಿರಿಸಿ ಬರಿಯ ಮುಖ್ಯಕಥೆಯ ಜಾಡನ್ನು ಮಾತ್ರ ಹಿಡಿದು ಸಾಗಿದ್ದರೂ ಮಹಾಕಾವ್ಯದ ಗಾಂಭೀರ್ಯಕ್ಕೇನು ಚ್ಯುತಿ ಬರುತ್ತಿರಲಿಲ್ಲ. ಮುಖ್ಯನದಿಗೆ ಸೇರುವ ಹಲವು ಉಪನದಿಗಳಂತೆ ಈ ಕಥೆಗಳು ತಮ್ಮ ಕಿಂಚಿತ್ ಕೊಡುಗೆಯನ್ನು ಮುಖ್ಯವಾಹಿನಿಗೂ ಕೊಟ್ಟಿವೆ. ಬೇಡರ ಕುಲದ ಶಬರಿಯ ಕಥೆ ರಾಮಾಯಣ ಮಹಾಕಾವ್ಯದಲ್ಲಿ ಬರುವ ಇಂಥಾ ಒಂದು ಉಪಾಖ್ಯಾನ. ಈಕೆ ಕಾಯುವಿಕೆ ಎಂಬ ತಪಸ್ಸಿನ ಮೂಲಕ ದೇವರನ್ನು ಕಂಡವಳು. ಇಲ್ಲಿಯೂ ವಾಲ್ಮೀಕಿ ದರ್ಶನಕ್ಕೆ ಕುಂದು ಬರದಂತೆ ಎಕ್ಕುಂಡಿಯವರು ನಿರ್ವಹಿಸಿದ್ದಾರೆ.

'ಚಿನ್ನದ ಬಿಂದಿಗೆ ಬೆಳಕನು ಸುರಿಯಿತು ಮೂಡಲ ದೆಸೆಯಿಂದ
ಮಂಜಿನ ಹನಿಗಳನೆಸೆಯುತ ಬಂದಿತು ಗಾಳಿ ಬೊಗಸೆಯಿಂದ
ಮೊಗ್ಗೆಯ ಬಾಯನು ಬಿಡಿಸುತ ಬಂದವು ದುಂಬಿಯ ಪರಿವಾರ
ಸೇರಲು ಮೋಡವು ತೊಡಿಸುತ ಇಳಿದವು ಕಣಿವೆಗೆ ಹೂಹಾರ'

ಸಾಮಾನ್ಯವಾಗಿ ಯಾವುದೇ ಕಥೆಯನ್ನು ಪ್ರಾರಂಭಿಸುವ ಮೊದಲು ಎಕ್ಕುಂಡಿಯವರು ಈ ರೀತಿಯ ದೀರ್ಘ ಪೀಠಿಕೆಯನ್ನು ನೀಡುತ್ತಾರೆ, ಅದೂ ಪ್ರಕೃತಿ ವರ್ಣನೆಯ ಮೂಲಕ ಕಥನಕ್ಕೆ ಒಂದು ವೇದಿಕೆ ನಿರ್ಮಾಣ ಮಾಡುವುದು ಅವರ ಶೈಲಿ.

'ಮೆಲ್ಲಗೆ ಶಬರಿಯ ಕಾಡಿಗೆ ನಡೆದವು ಕುಂಕುಮ ಮೋಡಗಳು
ಗಿಳಿಗಳ ಬಳಗವು ರಾಮನ ಹುಡುಕುತ ಮುಗಿಲೊಳಗೋಡಿದವು'

ಪ್ರಕೃತಿ ವರ್ಣನೆಯ ಮೂಲಕವೇ ಕಥಾ ಪ್ರವೇಶಕ್ಕಾಗಿ ಕೊಂಡಿಯೊಂದನ್ನು ಕೊಟ್ಟು ಓದುಗರನ್ನು ಅದರೊಳಗೆ ಆಹ್ವಾನಿಸುತ್ತಾರೆ. ಅಹಲ್ಯೆ ಹಾಗೂ ಶಬರಿಯರು ರಾಮಾಯಣದೊಳಗೆ ಬರುವ ಎರಡು ಕಥೆಗಳ ನಾಯಿಕೆಯರು. ಇಬ್ಬರೂ ಕಾಯುವಿಕೆಗೆ ಪ್ರತಿಮೆಯಾಗಿ ನಿಂತವರು. ಅವರ ಕಾಯುವಿಕೆಯು ಅಂತ್ಯಗೊಳ್ಳುವುದು ಮುಖ್ಯ ಕಥಾನಾಯಕನ ಆಗಮನದಿಂದ.

'ಹಣ್ಣು ಕೂದಲಿನ ಹಣ್ಣು ಜೀವ ನೀಡಿರುವ ಹಣ್ಣು ತಿಂದು
ಮರಳಿ ನಡೆದ ಲಕ್ಷ್ಮಣನ ಕೂಡ ಶ್ರೀರಾಮ ದೀನಬಂಧು
ಉಗಿದ ಬೀಜಗಳನೆತ್ತಿಕೊಂಡವು ಹಕ್ಕಿ ಹಾರಿ ಬಂದು
ಧನ್ಯ ಧನ್ಯ ಶ್ರೀರಾಮ ಪ್ರಸಾದವು ನಮಗೆ ದೊರಕಿತೆಂದು'

ಹೀಗೆ ಇಡೀ ವನವೇ ರಾಮನ ಆಗಮನದಿಂದ ಪುಳಕಿತಗೊಳ್ಳುತ್ತದೆ.

'ಒಲಿದು ಬಂದನಿವ ತಿಂದನೆಂಜಲವ ಒಲುಮೆಗೆಂಜಲಿಲ್ಲ
ಕರುಣೆದೋರಿ ಕಾಡಿಗೂ ಬಂದನಿವ ಕರುಣೆಗಂಜಲಿಲ್ಲ
ಕಾಡುದೂರದಲಿ ಹಾಡುತ್ತಿತ್ತು ಶ್ರೀರಾಮ ರಾಮ ಎಂದು
ಎಲ್ಲ ಜೀವಗಳ ಕಾಯಬಲ್ಲುದೊ ರಾಮ ನಾಮವೊಂದು'

ಮಹರ್ಷಿ ಚಿತ್ರಿಸಿದ ವ್ಯಕ್ತಿತ್ವವೊಂದು ಮತ್ತಷ್ಟು ದಷ್ಟಪುಷ್ಟವಾಗಿ ಮೈತುಂಬಿ

ಕೊಳ್ಳುವುದು ಇಂಥಾ ಅನುಭಾವಿ ಮನಸ್ಸುಗಳಿಂದಲೇ. ನಮ್ಮ ಆರ್ಷೇಯ ಕಾವ್ಯಗಳು ಇಂತಹ ಕಥೆಗಳ ಕಣಜ ಎಂದು ಆಗಲೇ ಹೇಳಿದೆನಷ್ಟೇ. ಆ ವಾಙ್ಮಯದ ಸವಿಯನುಂಡ ಕವಿ ಹೃದಯಗಳಿಗೆ ಹಾಡುಕಟ್ಟಿ ಹಾಡಲು ಅದು ಪ್ರೇರಣೆಯನ್ನು ನೀಡಿಯೇ ನೀಡುತ್ತದೆ. ಈ ಪ್ರೇರಣೆ ಯುಗಯುಗಾಂತರಗಳವರೆಗೂ ನಮ್ಮ ನೆಲದಲ್ಲಿ ಚಾಲ್ತಿಯಲ್ಲಿರುತ್ತದೆ. ಮನುಷ್ಯನ ಕ್ರಿಯಾಶೀಲತೆಯನ್ನು ಉದ್ಧೀಪಿಸುವ ಕೆಲಸವನ್ನು ಇವು ಮಾಡುತ್ತಲೇ ಇರುತ್ತವೆ.

ಕಥನ ಕವನಗಳಿಂದಲೇ ಒಂದು ವಿಶೇಷತೆಯನ್ನು ಗಳಿಸಿಕೊಂಡಿರುವ ಕವಿಗಳು ಹಲವರು. ಶ್ರೀನಿವಾಸ ಎಂದು ಗುರುತಿಸಿಕೊಂಡಿರುವ ಮಾಸ್ತಿಯವರು, ಕಡೆಂಗೊಡ್ಲು ಶಂಕರ ಭಟ್ಟರು, ಪಂಜೆ, ಗೋವಿಂದ ಪೈ, ಪು.ತಿ.ನ, ಕುವೆಂಪು, ಬೇಂದ್ರೆ ಮುಂತಾದವರು. ಮಾಸ್ತಿಯವರು ಕಥೆಗಾರರಾದರೂ ಅವರ ಕಥನ ಕವನಗಳು ಓದುಗರಿಗೆ ಪ್ರಿಯವಾಗುತ್ತವೆ. ಕ್ಯಾಂಪ್ ಬೆಲ್‌ನ 'ಲಾರ್ಡ್ ಆ್ಯಲಿನ್ಸ್ ಡಾಟರ್' ಎಂಬ ಕವನವನ್ನು 'ಕಾರಿಹೆಗ್ಗಡೆಯ ಮಗಳು' ಎಂದು ಅವರು ಮಾಡಿದ ಅನುವಾದದಿಂದ ಇದು ತಿಳಿಯುತ್ತದೆ. ಕಡೆಂಗೊಡ್ಲು ಅವರು 'ಮಾದ್ರಿಯ ಚಿತೆ' 'ಹೊನ್ನಿಯ ಮದುವೆ' 'ಮುರಲೀನಾದ' ಎಂಬ ಪರಿಣಾಮಕಾರಿ ಕಥನ ಕವನಗಳನ್ನು ಕೊಟ್ಟವರು. ಕುವೆಂಪು ಅವರ 'ಬೊಮ್ಮನಹಳ್ಳಿಯ ಕಿಂದರಿಜೋಗಿ' ಸುಪ್ರಸಿದ್ಧ ಕಥನ ಕವನ. ಬೇಂದ್ರೆಯವರ 'ಕಾಮೋದೆ' ಹಾಗೂ ಕಡೆಂಗೊಡ್ಲು ಅವರ 'ಮಾದ್ರಿಯ ಚಿತೆ' ಸು. ರಂ ಅವರಂತೆ ಪುರಾಣದ ಮಹಿಳಾ ಪಾತ್ರಗಳನ್ನು ಎತ್ತಿಕೊಂಡು ರಚಿಸಿದ ಕಥನಕವನಗಳು.

ಒಂದು ವಸ್ತುವನ್ನು ತೆಗೆದುಕೊಂಡು ಅದನ್ನು ಕಾವ್ಯಾತ್ಮಕವಾಗಿ ಮೂಡಿಸುವುದೇ ಕಥನ ಕವನ. 'ಗೋವಿನ ಹಾಡು' ಕನ್ನಡಿಗರ ನಾಲಿಗೆಯಲ್ಲಿ ಇಂದಿಗೂ ಹರಿದಾಡುತ್ತಿರುವ ಒಂದು ಹಾಡುಗಬ್ಬ. ಇದಲ್ಲದೆ ವೀರರ ಶೂರರ ಕಥೆಗಳನ್ನು ಹೇಳುವ ಲಾವಣಿ ಪ್ರಕಾರವೂ ನಮ್ಮಲ್ಲಿದೆ. ಇಂಗ್ಲಿಶ್ ಸಾಹಿತ್ಯದಲ್ಲಿ 'ಬ್ಯಾಲೆಡ್ಸ್' ಎಂದು ಹೆಸರಿರುವ ಇಂಥಾ ಕಾವ್ಯ ಪ್ರಕಾರವೊಂದಿದೆ. ಇವೆಲ್ಲ ಹಾಡಲು ಸಾಧ್ಯವಾಗುವಂತೆ ಇರುವುದರಿಂದ ಬಾಯಿಯಿಂದ ಬಾಯಿಗೆ ರವಾನೆಗೊಂಡು ಎಷ್ಟೋ ಸಂದರ್ಭಗಳಲ್ಲಿ ಮೂಲ ಕವಿಯ ಹೆಸರೇ ಮರೆಯಾಗಿಹೋದದ್ದೂ ಉಂಟು.

ಕಾವ್ಯ ಬರೆಯುವುದಕ್ಕೆ ಹೇಗೋ ಹಾಗೇ ಕಾವ್ಯ ಓದುವುದಕ್ಕೂ ಒಂದು ಬೆದೆ ಬೇಕು ಎನ್ನುತ್ತಾರೆ ಖ್ಯಾತ ಕವಿ ಪು.ತಿ.ನ ಅವರು. ಎಕ್ಕುಂಡಿಯವರ ಕಾವ್ಯವೂ ಇಂಥಾ ಬೆದೆಯೊಂದನ್ನು ಬೇಡುತ್ತದೆ. ಮೊದಲು ನಮ್ಮ ನೆಲದ ಮಹಾಕಾವ್ಯಗಳನ್ನು ಓದಿಕೊಂಡು, ಆಮೇಲೆ ಅದರ ಪ್ರೇರಣೆಯಿಂದ ರಚನೆಗೊಂಡ ಇಂಥಾ ಕಾವ್ಯಗಳನ್ನು ಓದಿದಾಗ ಮನಸ್ಸು ಹೆಚ್ಚು ಸೂಕ್ಷ್ಮಗ್ರಾಹಿಯಾಗುತ್ತದೆ. ಎಕ್ಕುಂಡಿಯವರ ಜನ್ಮಶತಮಾನೋತ್ಸವ ವರ್ಷವಿದು. ಒಬ್ಬ ಕವಿ ಹುಟ್ಟಿ ಒಂದು ಶತಮಾನವಾದ ಸಂದರ್ಭದಲ್ಲಿ ಅವರನ್ನು ನೆನಪಿಸಿಕೊಳ್ಳುವುದು ನಮ್ಮೆಲ್ಲರ ಕರ್ತವ್ಯವಾಗಬೇಕು. ಅವರ ಕವಿತೆಗಳನ್ನು ಮೆಲುಕು ಹಾಕಲು ಕನ್ನಡಿಗರಿಗೆ ಇದೊಂದು ನೆಪವಾಗಬೇಕು.

❖❖❖

ಆಖ್ಯಾನಗಳ ವ್ಯಾಖ್ಯಾನ – ಅನ್ವೀಕ್ಷಿಕೀ

ಡಾ. ಅಜಕ್ಕಳ ಗಿರೀಶ ಭಟ್
ಪ್ರೊಫೆಸರ್
ಸರಕಾರಿ ಪ್ರಥಮ ದರ್ಜೆ ಕಾಲೇಜು, ಸಿದ್ಧಕಟ್ಟೆ–574237, ದ.ಕ.

ಈಚಿನ ವರ್ಷಗಳಲ್ಲಿ ನಾವು ಸಾಹಿತ್ಯ ಎಂದು ಏನನ್ನು ಕರೆಯುತ್ತೇವೋ ಅದನ್ನು ಸ್ಥೂಲವಾಗಿ ಎರಡು ವಿಭಾಗಗಳಲ್ಲಿ ಗುರುತಿಸಬಹುದು. ಕಾದಂಬರಿ, ನಾಟಕ, ಕಥೆ, ಕವಿತೆ ಇತ್ಯಾದಿ ಪ್ರಕಾರಗಳನ್ನು ಕಲ್ಪನಾಧಾರಿತ ಸಾಹಿತ್ಯ ಎಂದು ಕರೆದರೆ ವಿಮರ್ಶೆ, ಗಂಭೀರ ಪ್ರಬಂಧ, ವೈಚಾರಿಕ ಲೇಖನ, ಅಂಕಣ ಮುಂತಾದವುಗಳನ್ನು ವಿಚಾರ, ಮಾಹಿತಿ, ಅಭಿಪ್ರಾಯಗಳನ್ನು ಆಧರಿಸಿದ ಸಾಹಿತ್ಯ ಎಂದು ಕರೆಯಬಹುದು. ಇತ್ತೀಚಿನ ವರ್ಷಗಳಲ್ಲಿ ಪುಸ್ತಕ ಪ್ರಕಾಶನ ಮತ್ತು ಮಾರಾಟವನ್ನು ನೋಡಿದರೆ, ಈ ಎರಡನೆಯ ರೀತಿಯ ಬರಹಳಿಗೂ ಕಲ್ಪನಾಧಾರಿತ ಸಾಹಿತ್ಯದಷ್ಟೇ ಅಥವಾ ಅದಕ್ಕಿಂತಲೂ ಹೆಚ್ಚಿನ ಓದುಗರು ಇದ್ದಾರೆ ಎಂಬ ಸಂಗತಿ ಗೊತ್ತಾಗುತ್ತದೆ. ಹೀಗಾಗಿ ಸಂಸ್ಕೃತಿ, ಇತಿಹಾಸ ಮತ್ತು ಐತಿಹಾಸಿಕ ವ್ಯಕ್ತಿಗಳ ಕುರಿತಾದ ಪುಸ್ತಕಗಳು, ಅಂಕಣಗಳ ಸಂಕಲನ ಮುಂತಾದ ಪುಸ್ತಕಗಳು ಹೆಚ್ಚು ಹೆಚ್ಚು ಮುದ್ರಣವಾಗುತ್ತಿವೆ ಮತ್ತು ಮಾರಾಟವಾಗುತ್ತಿವೆ. ಒಟ್ಟಿನಲ್ಲಿ ಚಿಂತನೆ ಅಥವಾ ವಿಚಾರಪ್ರಧಾನವಾದ ಪುಸ್ತಕಗಳಿಗೆ ಸಾಕಷ್ಟು ಬೇಡಿಕೆಯಿರುವುದು ಸತ್ಯ.

ಆದರೆ, ಸಾಕಷ್ಟು ಗಂಭೀರವಾದ, ಆಳವಾದ ತಾತ್ತ್ವಿಕ ಅಥವಾ ಗಹನವಾದ ವಿಚಾರಗಳನ್ನು ಒಳಗೊಂಡ ಪುಸ್ತಕಗಳ ಬಗ್ಗೆ ಅನೇಕ ಸುಶಿಕ್ಷಿತರು ಕೂಡ ಒಂದು ಅಭಿಪ್ರಾಯವನ್ನು ವ್ಯಕ್ತಪಡಿಸುವುದು ಕಾಣುತ್ತದೆ. ಆ ಅಭಿಪ್ರಾಯವೇನೆಂದರೆ "ಇದು ನಮಗೆಲ್ಲ ಅರ್ಥವಾಗುವುದಿಲ್ಲ." ಎಂಬುದಾಗಿದೆ. ಹೀಗೆ ಹೇಳುವವರಲ್ಲಿ ಸ್ನಾತಕೋತ್ತರ ಪದವಿ ಪಡೆದು ಶಾಲಾಕಾಲೇಜುಗಳಲ್ಲಿ ಸುದೀರ್ಘ ಕಾಲ ಬೋಧಿಸಿದವರೂ ಇದ್ದಾರೆ. ಸರಳವಾಗಿ ಇರುವ ಬರಹಗಳಾದರೆ ಅರ್ಥವಾಗುತ್ತದೆ ಎನ್ನುತ್ತಾರೆ. ಆದರೆ ಸರಳವೆಂಬುದು ಅಷ್ಟು ಸರಳವಲ್ಲ! ಸರಳ ಎನ್ನುವುದು ಬಹಳ ಸಲ ಕೇವಲ ಸೂಪರ್‌ಫಿಶಿಯಲ್ ಆದುದಾಗಿರುತ್ತದೆ. ಮೇಲುಮೇಲಿಂದ ಕಾಣುವುದು ಮಾತ್ರ ಆಗಿರುತ್ತದೆ. ಆ 'ಸರಳ' ದೃಷ್ಟಿಗೆ ಕಲಕಿದ ನೀರಿನ ಅಡಿಯಲ್ಲಿ ಏನಿದೆ ಎಂದು ಕಾಣದೇ ಇರಬಹುದು. ಅಂತಹ ಬರಹಗಳೂ ಅಷ್ಟೇ; ಅಡಿಯಲ್ಲಿ ಇದ್ದುದನ್ನು ಕಾಣಿಸಲಾರವು. ಇದನ್ನು ಸ್ಪಷ್ಟಪಡಿಸಲು ಒಂದು ಉದಾಹರಣೆಯನ್ನು ನೋಡಬಹುದು.

ಪುನಃ 'ಸರಳವಾಗಿ' ಅರ್ಥವಾಗಲು ಟಿಪ್ಪುವಿನ ಬಗೆಗೆ ಬರೆಯಬಹುದಾದುದನ್ನೇ ತೆಗೆದುಕೊಳ್ಳೋಣ. ಟಿಪ್ಪು ಒಬ್ಬ ಅಪ್ರತಿಮ ಸ್ವಾತಂತ್ರ್ಯ ಹೋರಾಟಗಾರ; ಅತ್ಯುತ್ತಮ ಆಡಳಿತಗಾರ; ಎಲ್ಲ ಸಮುದಾಯಗಳನ್ನೂ ಸಮನವಾಗಿ ಕಂಡು ಜನಾನುರಾಗಿಯಾಗಿದ್ದ ಎಂದು ಬರೆದರೆ, ಲೇಖಕ ಏನು ಹೇಳುತ್ತಿದ್ದಾನೆ ಎಂಬುದು ಸುಲಭವಾಗಿ ಅರ್ಥವಾಗುತ್ತದೆ. ಅದೇ ರೀತಿ ಟಿಪ್ಪು ಒಬ್ಬ ಮತಾಂಧ; ಹಿಂದುಗಳಿಗೆ ಹಿಂಸೆ ಕೊಟ್ಟಿದ್ದ; ಅವನ ಆಡಳಿತವೂ ಸರಿಯಿರಲಿಲ್ಲ ಎಂದು ಮುಂತಾಗಿ ಬರೆದರೂ ಸುಲಭವಾಗಿ

ಎಲ್ಲರಿಗೂ ಅರ್ಥವಾಗುತ್ತದೆ. ಲೇಖಕ ಬರೆದುದನ್ನು ಒಪ್ಪುವುದು ಅಥವಾ ಬಿಡುವುದು ಬೇರೆ ಮಾತು. ಹೀಗೆ ಬರೆಯುವ ಬದಲಿಗೆ, ಟಿಪ್ಪು ಹೇಗೆ ಒಬ್ಬ ಶ್ರದ್ಧಾವಂತ ಮುಸ್ಲಿಮನಾಗಿದ್ದ; ಅದು ಹೇಗೆ ಅವನ ವಿಚಾರಗಳನ್ನು ಮತ್ತು ಆಚಾರಗಳನ್ನು ಪ್ರಭಾವಿಸಿತ್ತು; ಅವನು ನಂಬಿದ ಇಸ್ಲಾಮಿನ ಮೂಲಾಂಶಗಳೇನು ಎನ್ನುವುದನ್ನೆಲ್ಲ ವಿಶ್ಲೇಷಿಸಿದರೆ ಅರ್ಥವಾಗುವುದು ಕಡಿಮೆಯಾಗುತ್ತಾ ಹೋಗುತ್ತದೆ. ಇನ್ನು ಅವನ ಹೋರಾಟ, ಆಡಳಿತ, ವ್ಯಕ್ತಿ ಮತ್ತು ಸಮುದಾಯಗಳನ್ನು ಅವನು ನೋಡುತ್ತಿದ್ದ ಬಗೆ– ಇವಕ್ಕೂ ಅವನ ನಂಬಿಕೆಗಳಿಗೂ ಇದ್ದ ಸಂಬಂಧವೇನು; ಮುಂತಾದ ಸಂಗತಿಗಳನ್ನು ವಿಶ್ಲೇಷಿಸುವ ಬರಹವಾದರೆ 'ಅರ್ಥವಾಗುವುದಿಲ್ಲ' ಎನ್ನುವ ದೂರು ಬಂದೇ ಬರುತ್ತದೆ. ಹೀಗೆ ಸಾಕಷ್ಟು ದೀರ್ಘ ಕಾಲದ ಔಪಚಾರಿಕ ಶಿಕ್ಷಣ ಪಡೆದವರಿಗೆ ಮತ್ತು ಎಷ್ಟೋ ಶಿಕ್ಷಕರಿಗೆ ಕೂಡ ಕೆಲವೊಂದು ಸಂಗತಿಗಳ ಆಳ ಅಗಲಗಳು 'ಅರ್ಥವಾಗದೆ' ಇರಲು ಕಾರಣವೇನು?

ಈ ಪ್ರಶ್ನೆಗೆ ಉತ್ತರ ಕಂಡುಕೊಳ್ಳಬೇಕಾದರೆ ನಮ್ಮ ಬೌದ್ಧಿಕ ಜಗತ್ತನ್ನು ನರೆಟಿವ್‌ಗಳು ಹೇಗೆ ಆಳುತ್ತವೆ ಎನ್ನುವುದನ್ನು ನಾವು ಮೊದಲು ಅರ್ಥ ಮಾಡಿಕೊಳ್ಳಬೇಕು. ಸಿದ್ಧಮಾದರಿಯ ನರೆಟಿವ್‌ಗಳೇ ನಾವು ಎಷ್ಟೋ ವಿಷಯಗಳ ಆಳಕ್ಕೆ ಇಳಿಯದಂತೆ ನಮ್ಮನ್ನು ತಡೆಯುತ್ತವೆ. ಉದಾಹರಣೆಗೆ "ಜಗತ್ತಿನ ಎಲ್ಲ ಧರ್ಮಗಳೂ ಒಳ್ಳೆಯದನ್ನೇ ಹೇಳಿವೆ." "ಈಶ್ವರ ಅಲ್ಲಾ ತೇರೇ ನಾಮ್" ಮುಂತಾದ ಹೇಳಿಕೆಗಳು ಜನಪ್ರಿಯಗೊಂಡು ಕಾಲಾಂತರದಲ್ಲಿ ನರೆಟಿವ್‌ಗಳೇ ಆಗಿವೆ. ಮುಖ್ಯವಾದ ಸಂಗತಿಯೇನೆಂದರೆ, ಅಂತಹ ಮೇಲ್ಪದರದ ಹೇಳಿಕೆಯ ಅಡಿಯಲ್ಲಿ ಏನಿದೆ ಎಂದು ಆ ಪದರವನ್ನು ಬಗೆದು ನೋಡದಂತೆ ಅವುಗಳ ಜನಪ್ರಿಯತೆ ಅಥವಾ ಸರ್ವವ್ಯಾಪಕತೆಯು ನಮ್ಮನ್ನು ತಡೆಯುತ್ತದೆ.

ನಮ್ಮ ಶೈಕ್ಷಣಿಕ ವ್ಯವಸ್ಥೆಯು ನಮಗೆ ಕೆಲವು ನರೆಟಿವ್‌ಗಳನ್ನು, ಆಖ್ಯಾನಗಳನ್ನು ಅಥವಾ ಕಥನಗಳನ್ನು ಕಟ್ಟಿ ಕೊಡುತ್ತವೆ. ಇಲ್ಲಿ ಶೈಕ್ಷಣಿಕ ವ್ಯವಸ್ಥೆ ಎಂದರೆ ಅದು ಕೇವಲ ಶಾಲಾಶಿಕ್ಷಣ ಎಂಬರ್ಥದಲ್ಲಿ ಬಳಸಿಲ್ಲ. ಇನ್ನಷ್ಟು ಸ್ಪಷ್ಟಪಡಿಸುವುದಾದರೆ ವಿಶ್ವವಿದ್ಯಾಲಯಗಳು, ಅಕಾಡೆಮಿಗಳು, ಸೆಮಿನಾರುಹಾಲುಗಳು, ಮುಂಚೂಣಿ ಪತ್ರಿಕೆಗಳು ಇವೆಲ್ಲ ಸೇರಿದ ಜ್ಞಾನಾಧಿಕಾರ ಕೇಂದ್ರಗಳು ನರೆಟಿವ್‌ಗಳನ್ನು (ಆಖ್ಯಾನಗಳನ್ನು/ ಕಥನಗಳನ್ನು) ಕಟ್ಟಿಕೊಡುತ್ತವೆ. ಆ ಕಥನಗಳು ನಿರ್ದಿಷ್ಟ ಬೌದ್ಧಿಕ ಮಟ್ಟದ್ದಾಗಿ ಮಾತ್ರ ಉಳಿದಿರುತ್ತವೆ. ಹೆಚ್ಚಿನ ಸಲ ನಿರ್ದಿಷ್ಟ ಮತ್ತು ಸಿದ್ಧ ಮಾದರಿಯಲ್ಲಿಯೇ ಇರುತ್ತವೆ. ಅವು ಸಾಮಾನ್ಯವಾಗಿ ತತ್ತ್ವಜಿಜ್ಞಾಸೆಯ ಆಳಕ್ಕೆ ನಾವು ಇಳಿಯುವುದನ್ನು ಉತ್ತೇಜಿಸುವುದಿಲ್ಲ. ಹೌದು ಅಥವಾ ಇಲ್ಲ ಎಂಬ ಹಾಗೆ ನೇರ ಪ್ರಶ್ನೆಗೆ ನೇರ ಉತ್ತರದಂತಹ ಚಿಂತನೆಯನ್ನು ಬೆಳೆಸುವುದಕ್ಕಷ್ಟೇ ಇಂತಹ ನರೆಟಿವ್‌ಗಳು ಸೀಮಿತವಾದಂತೆ ತೋರುತ್ತದೆ. ವಿಪರ್ಯಾಸವೆಂದರೆ, ಹೀಗೆ ಸರಳವಾಗಿದ್ದರೆ ಮಾತ್ರ ಒಂದು ಆಖ್ಯಾನವು ಜ್ಞಾನಾಧಿಕಾರ ಕೇಂದ್ರದಿಂದ ಇಳಿದು ಜನಜನಿತವಾಗುತ್ತದೆ. ಹೀಗೆ ಸಾಮಾನ್ಯ ಜನರ ಮಟ್ಟದಲ್ಲಿ ಅದು ಅಷ್ಟಕ್ಕೇ ಸೀಮಿತವಾಗಿದ್ದರೆ ಆಶ್ಚರ್ಯ ಪಡಬೇಕಿಲ್ಲ; ಆತಂಕವೂ ಇಲ್ಲ. ಆದರೆ ಸುಶಿಕ್ಷಿತರು ಮತ್ತು ಜನಾಭಿಪ್ರಾಯ ರೂಪಿಸುವ ಸ್ಥಾನಮಾನವನ್ನು ಹೊಂದಿದವರು ಕೂಡ ಅಷ್ಟಕ್ಕೇ ಸೀಮಿತವಾಗಿ ತಮ್ಮ ಚಿಂತನೆಯ ಮಟ್ಟವನ್ನು ಹೊಂದಿದ್ದರೆ ಅದು ಸಮಾಜದ ಏಳಿಗೆಗೆ ಪೂರಕವಲ್ಲ.

ಸಹಜವಾಗಿಯೇ ಜಗತ್ತಿನಲ್ಲಿ ವಿವಿಧ ವಿಚಾರಧಾರೆಗಳು ಹಿಂದೆಯೂ ಇದ್ದವು; ಈಗಲೂ ಇವೆ. ಈ ವಿಚಾರಧಾರೆಗಳು ಬೌದ್ಧಿಕವಾಗಿ ಮೇಲುಗೈ ಪಡೆಯಲು ಹಾಗೂ ನೀತಿನಿರೂಪಣೆಯ ಮೇಲೆ ಪ್ರಭಾವ ಬೀರಲು ಆಖ್ಯಾನಗಳು (ನರೆಟಿವ್‌ಗಳು/ ಕಥನಗಳು) ಸಹಾಯ ಮಾಡುತ್ತವೆ. ಏನನ್ನು ಹೇಳುತ್ತೇವೆ ಎನ್ನುವಷ್ಟೇ ಹೇಗೆ ಹೇಳುತ್ತೇವೆ ಎನ್ನುವುದು ಕೂಡ ಬೌದ್ಧಿಕ ಚರ್ಚೆಗಳಲ್ಲಿ ಮುಖ್ಯವಾಗುತ್ತದೆ. ಹಾಗೆ ನೋಡಿದರೆ ಹೇಗೆ ಹೇಳುತ್ತೇವೆ ಎನ್ನುವುದೇ ಹೆಚ್ಚಿನ ಸಲ ನಮ್ಮ ಆಖ್ಯಾನಗಳ ಪ್ರಭಾವವನ್ನು ನಿರ್ಣಯಿಸುತ್ತದೆ. ಆಖ್ಯಾನಗಳು ಸರಕಾರಗಳ ನೀತಿನಿರೂಪಣೆಗಳನ್ನು ಪ್ರಭಾವಿಸುತ್ತವೆ ಅಷ್ಟೇ ಅಲ್ಲ; ನಿರ್ದಿಷ್ಟ ವಿಷಯಗಳ ಬಗೆಗಿನ ಜನಾಭಿಪ್ರಾಯವನ್ನು ಕೂಡ ನಿರ್ದಿಷ್ಟ ದಿಕ್ಕಿನಲ್ಲಿ ಒಯ್ಯುವ ಸಾಮರ್ಥ್ಯವನ್ನು ಹೊಂದಿರುತ್ತವೆ. ಅಥವಾ ಹೀಗೂ ಹೇಳಬಹುದು; ಆಖ್ಯಾನಗಳು ಜನಾಭಿಪ್ರಾಯವನ್ನು ರೂಪಿಸಿ ಅದಕ್ಕೆ ತಕ್ಕಂತಹ ನೀತಿನಿರೂಪಣೆಗಳಿಗೂ ಕಾರಣವಾಗುತ್ತವೆ.

ಆಖ್ಯಾನಗಳ ವ್ಯಾಪ್ತಿ ಚಿಕ್ಕದಾಗಿರಬಹುದು. ದೊಡ್ಡದಾಗಿರಬಹುದು. ಬಗೆಬಗೆಯ ವಿಷಯಗಳದ್ದಿರಬಹುದು. ಆರ್ಥಿಕ ವಿಚಾರ, ಸಾಮಾಜಿಕ ವಿಚಾರ, ಭಾಷೆ, ಪ್ರಾದೇಶಿಕತೆ, ರಾಷ್ಟ್ರೀಯತೆ, ಇತಿಹಾಸ, ಶಿಕ್ಷಣ ಮಾಧ್ಯಮ ಹೀಗೆ ಪ್ರತಿಯೊಂದು ವಿಷಯದ ಬಗ್ಗೆಯೂ ಆಖ್ಯಾನಗಳು ಕಾಣುತ್ತವೆ. ಒಂದೇ ವಿಚಾರದ ಬಗ್ಗೆ ಭಿನ್ನ ವಿಚಾರಧಾರೆಗಳ ಭಿನ್ನ ಆಖ್ಯಾನಗಳೂ ಇರುತ್ತವೆ. ಹೆಚ್ಚಿನ ಬಾರಿ ಯಾವುದೋ ಒಂದು ಆಖ್ಯಾನವು ಉಳಿದವುಗಳಿಗಿಂತ ಹೆಚ್ಚು ಪ್ರಭಾವಶಾಲಿಯಾಗಿರುತ್ತದೆ. ಆಖ್ಯಾನಗಳು ಕೇವಲ ವಿದ್ಯಮಾನಗಳ ಬಗ್ಗೆ ಅಥವಾ ಸಮಾಜದ ಆಗುಹೋಗುಗಳ ಬಗ್ಗೆಯೇ ಇರಬೇಕೆಂದಿಲ್ಲ. ವ್ಯಕ್ತಿಗಳ ಬಗ್ಗೆಯೂ ಆಖ್ಯಾನಗಳನ್ನು ಕಟ್ಟಲಾಗುತ್ತದೆ. ಗಾಂಧೀಜಿ ಬಗ್ಗೆ, ನೆಹರೂ ಬಗ್ಗೆ, ಅಂಬೇಡ್ಕರ್ ಬಗ್ಗೆ, ಸಾವರ್ಕರ್ ಬಗ್ಗೆ ಹೀಗೆ ಹಲವು ವಿಚಾರ/ ವ್ಯಕ್ತಿಗಳ ಬಗ್ಗೆ ಕೂಡ ವಿಭಿನ್ನ ಆಖ್ಯಾನಗಳು ಚಾಲ್ತಿಯಲ್ಲಿವೆ.

ಅನೇಕ ಬಾರಿ ಸುಳ್ಳು ಆಖ್ಯಾನಗಳೂ ಮೇಲುಗೈ ಪಡೆಯುವುದುಂಟು. ಎಷ್ಟೋ ಸತ್ಯಗಳು ಮರೆಯಾಗುವುದೂ ಉಂಟು. ಉದಾಹರಣೆಗೆ, ಸ್ವಾತಂತ್ರ್ಯೋತ್ತರ ಕಾಲದ ಭಾರತದಲ್ಲಿ ನಡೆದ ಹಿಂಸಾಚಾರಗಳ ಕುರಿತಾದ ಆಖ್ಯಾನಗಳಲ್ಲಿ 1970ರ ದಶಕದಿಂದ ಆರಂಭಿಸಿ ಸುಮಾರು ಇಪ್ಪತ್ತೈದು ಮೂವತ್ತು ವರ್ಷಗಳ ಕಾಲ ಪಶ್ಚಿಮ ಬಂಗಾಳದಲ್ಲಿ ಆದಂತಹ ರಾಜಕೀಯ ಹತ್ಯೆಗಳ ವಿಚಾರ ಪ್ರಸ್ತಾಪವಾಗುವುದೇ ಇಲ್ಲ!

ವಿವಿಧ ಆಖ್ಯಾನಗಳ ಸ್ವರೂಪ ಹಾಗೂ ಹಿನ್ನೆಲೆಗಳ ಕುರಿತು ಕನ್ನಡದಲ್ಲಿ ಹೆಚ್ಚು ಚರ್ಚೆ ಆದಂತೆ ಕಾಣುವುದಿಲ್ಲ. ಸಮಕಾಲೀನ ಆಖ್ಯಾನಗಳನ್ನು ಚರ್ಚಿಸುವ 'ಅನ್ವೀಕ್ಷಿಕೀ' ಎಂಬ ವಿಶಿಷ್ಟ ಶೀರ್ಷಿಕೆಯ ಪುಸ್ತಕ ಈಚೆಗೆ ಪ್ರಕಟವಾಗಿದೆ. ನಿರೂಪಿತ ವಿಷಯಗಳ ಪುನರ್ಮನನ ಎಂಬರ್ಥದಲ್ಲಿ ಈ ಶೀರ್ಷಿಕೆಯನ್ನು ಬಳಸಿದ್ದಾರೆ. ಸತ್ಯನಾರಾಯಣ ಶಾನಭಾಗರು ಸಂಪಾದಿಸಿದ ಈ ಪುಸ್ತಕವನ್ನು ವಿಶ್ವ ಸಂವಾದ ಕೇಂದ್ರವು ಪ್ರಕಟಿಸಿದೆ. ಈಗಾಗಲೇ ಹೇಳಿದಂತೆ ಆಖ್ಯಾನಗಳು ಸೀಮಿತವಾದ ಸಂಖ್ಯೆಯಲ್ಲಿ ಇಲ್ಲದಿರುವುದರಿಂದ ಎಲ್ಲ ಆಖ್ಯಾನಗಳನ್ನು ವಿಶ್ಲೇಷಿಸಲು ಅಸಾಧ್ಯವೇ ಸರಿ. ಇಂದಿನ ಜಗತ್ತಿನಲ್ಲಿ ಮುಖ್ಯವೆನಿಸಿದ ಕೆಲವು ಆಖ್ಯಾನಗಳನ್ನು ವಿಶ್ಲೇಷಿಸುವ ಆರು ದೀರ್ಘ ಲೇಖನಗಳನ್ನು ಈ ಸಂಕಲನವು ಒಳಗೊಂಡಿದೆ.

"ಈ ಪುಸ್ತಕವು ಆಖ್ಯಾನಗಳ ಹಿಂದಿರುವ ವಿದ್ಯಮಾನವನ್ನು, ವಿದ್ಯಮಾನದ

ಆಂತರ್ಯದಲ್ಲಿ ಇರುವ ವಿಚಾರವನ್ನು, ವಿಚಾರದ ಗರ್ಭದಲ್ಲಿ ಅಡಗಿರುವ ಸತ್ಯವನ್ನು ಬಗೆದು ನೋಡಲು ಯತ್ನಿಸಿದೆ." ಎಂದು ಹೇಳುವ ಪ್ರದೀಪ ಮೈಸೂರು ಅವರು ಈ ಸಂಕಲನಕ್ಕೆ ಒಂದು ಒಳ್ಳೆಯ ಪ್ರವೇಶಿಕೆಯನ್ನು ಬರೆದಿದ್ದಾರೆ. ಅಲ್ಲಿ ಅವರು ವಿದ್ಯಮಾನ ಮತ್ತು ಆಖ್ಯಾನ ಇವೆರಡರ ಸಂಬಂಧವನ್ನು ಹೇಳುತ್ತಾರೆ. 'ಆಖ್ಯಾನವು ವಿದ್ಯಮಾನವೊಂದರ ಹಿನ್ನೆಲೆಯಿಂದ ಬಂದರೆ, ವಿದ್ಯಮಾನವು ಆಖ್ಯಾನದಿಂದ ಉಂಟಾಗುವ ಸಾಧ್ಯತೆ ಇದೆ. ಅಂದರೆ ಒಂದು ವಿದ್ಯಮಾನವು ಒಂದು ಆಖ್ಯಾನಕ್ಕೆ ಕಾರಣವಾಗಬಹುದು. ಒಂದು ಅಖ್ಯಾನವು ಒಂದು ವಿದ್ಯಮಾನಕ್ಕೆ ಕಾರಣವಾಗಬಹುದು.' ಇಲ್ಲಿ ನಾನೊಂದು ಉದಾಹರಣೆ ನೀಡಬಹುದಾದರೆ: ಕಾಶ್ಮೀರದಲ್ಲಿ 370ನೇ ವಿದಿಯನ್ನು ಜಾರಿಗೆ ತಂದುದು ಎಂಬ ವಿದ್ಯಮಾನವು ಒಂದು ಆಖ್ಯಾನಕ್ಕೆ ಕಾರಣವಾಗಿದ್ದರೆ, ಒಂದು ಬಗೆಯ ಆಖ್ಯಾನವೇ ಅದರ ರದ್ದತಿ ಎಂಬ ವಿದ್ಯಮಾನಕ್ಕೆ ಕಾರಣವಾಗಿರಬಹುದು.

ನಾಟಕ, ಕಥೆ, ಕಾದಂಬರಿಗಳಂತಹ ಕಲ್ಪನಾಪ್ರಧಾನ ಸಾಹಿತ್ಯ ಮತ್ತು ಕಲಾ ಪ್ರಕಾರಗಳು ಸೃಷ್ಟಿಸುವ ಆಖ್ಯಾನಗಳ ಬಗ್ಗೆ ಈ ಸಂಕಲನದಲ್ಲಿ ಪ್ರತ್ಯೇಕ ಲೇಖನವಿಲ್ಲವಾದರೂ ಆ ಬಗ್ಗೆ ಪ್ರದೀಪರು ಪ್ರವೇಶಿಕೆಯಲ್ಲಿ ಹೇಳುವ "ಸಂಕಥನವು ಹರಳುಗಟ್ಟಿ, ಪ್ರಬುದ್ಧತೆಯನ್ನು ಪಡೆದು, ಜನಜೀವನದ ಭಾಗವಾಗಲು ಕಲೆಯೇ ಮುಖ್ಯ ಮಾರ್ಗ... ಕಲೆಯು ಸಾಂಸ್ಕೃತಿಕ ಮತ್ತು ಸಾಮಾಜಿಕ ಸಂಕಥನವನ್ನು ನಡೆಸುವ ಮೂಲಕ ಆಖ್ಯಾನಗಳನ್ನು ಸೃಷ್ಟಿಸುತ್ತದೆ ಮತ್ತು ಆ ಕಾಲದಲ್ಲಿ ಇರುವ ಆಖ್ಯಾನವನ್ನು ಪಲ್ಲಟಗೊಳಿಸುತ್ತದೆ.." ಎಂಬ ಮಾತುಗಳು ಉಲ್ಲೇಖಾರ್ಹವಾಗಿವೆ.

ಈ ಸಂಕಲನದಲ್ಲಿರುವ ಮೊದಲ ಲೇಖನ ಎಂ.ಕೆ. ಶ್ರೀಧರನ್ ಅವರ 'ಸುರಾಜ್ಯ ಮತ್ತು ಸರ್ಕಾರ'. ಒಳ್ಳೆಯ ಆಡಳಿತ ಅಥವಾ 'ಸುರಾಜ್ಯ' ಎಂದರೇನು? ಸರ್ಕಾರದ ಜವಾಬುದಾರಿ ಹಾಗೂ ಇತಿಮಿತಿಗಳೇನು? ಈ ಬಗೆಗೆ ಯಾವೆಲ್ಲ ರೀತಿಯ ಆಖ್ಯಾನಗಳಿವೆ? ಎಂಬ ಪ್ರಶ್ನೆಗಳನ್ನೆಲ್ಲ ಈ ಲೇಖನವು ಎತ್ತಿಕೊಳ್ಳುತ್ತದೆ. ಸರಕಾರವಿರುವುದು ಆಡಳಿತವನ್ನು ಮಾಡಲು. ಹೀಗಾಗಿ ನಮ್ಮ ವ್ಯವಸ್ಥೆಯಲ್ಲಿ ಯಾವೆಲ್ಲ ಕೊರತೆಗಳಿವೆ ಮತ್ತು ಅಂತಹ ಕೊರತೆಗಳು ಹೇಗೆ ಉತ್ತಮ ಆಡಳಿತಕ್ಕೆ ಅಡ್ಡಿಯಾಗುತ್ತವೆ ಎನ್ನುವುದನ್ನು ಹೇಳಲು ಈ ಲೇಖನವು ಯತ್ನಿಸುತ್ತದೆ. ಪ್ರಜಾಪ್ರಭುತ್ವ ಮತ್ತು ಇತರ ಆಡಳಿತವ್ಯವಸ್ಥೆಗಳ ನಡುವಿನ ವ್ಯತ್ಯಾಸವನ್ನೂ ಸ್ಥೂಲವಾಗಿ ಲೇಖಕರು ಗುರುತಿಸಿದ್ದಾರೆ. ಪ್ರಜಾಪ್ರಭುತ್ವದಲ್ಲಿ ಇದೆಯೆನ್ನಲಾಗುವ ಮುಕ್ತತೆ ಮತ್ತು ಸ್ವಾತಂತ್ರ್ಯದ ಸ್ವರೂಪವನ್ನೂ ಗುರುತಿಸುತ್ತಾರೆ. ಪ್ರಜಾಪ್ರಭುತ್ವ ದೇಶಗಳಲ್ಲಿಯೂ ಬೇರೆ ನಮೂನೆಯ ಆಡಳಿತವಿರುವ ದೇಶಗಳಂತೆ ಕೊರತೆಗಳಿದ್ದರೂ ಅದು 'ಅತುತ್ತಮ ರಾಜ್ಯವ್ಯವಸ್ಥೆ' ಎಂದು ಬಿಂಬಿತವಾಗಲು ಏನು ಕಾರಣ ಎನ್ನುವುದನ್ನೂ ಲೇಖಕರು ಹೇಳುತ್ತಾರೆ. ಜನಪ್ರತಿನಿಧಿಗಳು ರಾಜರಂತೆ ವರ್ತಿಸಬಾರದು ಎಂದಿದ್ದರೂ ಚುನಾವಣೆಯ ಸಂದರ್ಭ ಹೊರತುಪಡಿಸಿದರೆ ಸಮಾನ್ಯ ಜನರ ಮಟ್ಟಿಗೆ ಅವರು ರಾಜರಂತೆಯೇ ಆಗಿಬಿಡುವ ವ್ಯಂಗ್ಯವನ್ನು ಲೇಖಕರು ನೆನಪಿಸುತ್ತಾರೆ.

ಅಂತಾರಾಷ್ಟ್ರೀಯ ಸಂಬಂಧಗಳು, ಸಂಕೀರ್ಣತೆಗಳು ಹೇಗೆ ಸುರಾಜ್ಯಕ್ಕೆ ಬಾಧೆ ಕೊಡುತ್ತವೆ ಎನ್ನುವ ಕಡೆಗೂ ಈ ಲೇಖನ ಗಮನಹರಿಸಿದೆ. ದುರ್ಬಲರ ಶಾಂತಿಮಂತ್ರವಾಗಲೀ, 'ನಾವು ಅಂತಾರಾಷ್ಟ್ರೀಯವಾದಿಗಳು; ನಮಗೆ ಗಡಿಗಳಿಲ್ಲ; ನಾವು ರಾಷ್ಟ್ರವಾದವೆಂಬ ಸಂಕುಚಿತ ದೃಷ್ಟಿಯವರಲ್ಲ' ಎನ್ನುವಂತಹ ಆಖ್ಯಾನ–

ವ್ಯಾಖ್ಯಾನಗಳಗಲೀ ಆಧುನಿಕ ಅಂತಾರಾಷ್ಟ್ರೀಯ ಸ್ಪರ್ಧೆಯಲ್ಲಿ ಉಪಯೋಗಕ್ಕೆ ಬರುವುದಿಲ್ಲ ಎನ್ನುವುದು ಮತ್ತೆ ಮತ್ತೆ ಸಾಬೀತಾಗಿದೆ; ಆಗುತ್ತಿದೆ. ನಾನು ವಿಶ್ವಪ್ರಜೆ ಎಂದು ಘೋಷಿಸಿಕೊಂಡವನೂ ವೀಸಾ ಇಲ್ಲದೆ ಅಮೆರಿಕಕ್ಕೆ ಹೋಗಲು ವಿಮಾನ ಹತ್ತಲಾರ. ಅಮೆರಿಕ ದೇಶವು ಯಾವುದೋ ನೆಪದಲ್ಲಿ ಸದ್ದಾಮ್ ಹುಸೇನನ ಇರಾಕನ್ನು ಬಗ್ಗು ಬಡಿಯಿತು. ದಕ್ಕಿಸಿಕೊಂಡಿತು. ಇದೀಗ ರಷ್ಯಾ– ಉಕ್ರೇನ್ ಯುದ್ಧ ಈ ಬಗೆಯ ಸಂಕೀರ್ಣತೆಯ ಮತ್ತೊಂದು ಮುಖವನ್ನು ಪರಿಚಯಿಸುತ್ತಿದೆ. ಈ ಯುದ್ಧವು ಆರಂಭವಾಗಿ ದೀರ್ಘ ಕಾಲವಾಗಿದ್ದರೂ, ಅದರ ದುಷ್ಪರಿಣಾಮ ಜಗತ್ತಿನ ಬೇರೆಬೇರೆ ದೇಶಗಳ ಮೇಲೆ ಆಗುತ್ತಿದ್ದರೂ ವಿಶ್ವಸಂಸ್ಥೆ ಏನನ್ನೂ ಮಾಡಲಾಗದೆ ಇರುವುದನ್ನು ನೋಡಿದರೆ ಒಂದು ದೇಶ ಸ್ವಾವಲಂಬಿ ಶಕ್ತಿಯಾಗುವುದು ಎಷ್ಟು ಮುಖ್ಯ ಎನ್ನುವುದು ಅರ್ಥವಾದೀತು. ಸಶಕ್ತನಾದವನ ಶಾಂತಿಮಂತ್ರಕ್ಕೆ ಮಾತ್ರ ಬೆಲೆ.

ತಮ್ಮ ನಂಬಿಕೆ ಮಾತ್ರ ಸತ್ಯವೆಂಬ ದೃಷ್ಟಿಯ ಮತೀಯ ಅಸಹಿಷ್ಣುತೆ, ಯುದ್ಧ ಮಾಡದಿದ್ದರೂ ಯುದ್ಧದ ಮಾನಸಿಕತೆ, ಭಯೋತ್ಪಾದನೆ ಇವೆಲ್ಲ ಆಡಳಿತ ವ್ಯವಸ್ಥೆಯ ದಿಕ್ಕುಗೆಡಿಸುತ್ತವೆ. ಸಾರ್ವಜನಿಕ ಅಭಿಪ್ರಾಯಗಳು ದೇಶದ ಸ್ವಂತಿಕೆಯ ಆಧಾರದ ಮೇಲೆ, ಸತ್ಯ ಮತ್ತು ಮೌಲ್ಯಗಳ ಆಧಾರದಲ್ಲಿ ರೂಪುಗೊಳ್ಳಬೇಕು. ಹಾಗಲ್ಲದೆ, ವ್ಯವಸ್ಥಿತ ಅಪಪ್ರಚಾರ ಮತ್ತು ಅಪವ್ಯಾಖ್ಯಾನ–ಆಖ್ಯಾನಗಳ ಮೂಲಕ ರೂಪುಗೊಂಡ ಜನಾಭಿಪ್ರಾಯವೇ ಕಲುಷಿತವಾದುದಾಗಿರುತ್ತದೆ. ಸಂವಿಧಾನವು ಎಲ್ಲ ನಾಗರಿಕರಿಗೂ ಪ್ರತಿಯೊಬ್ಬ ವ್ಯಕ್ತಿಗೂ ಸಮಾನ ಹಕ್ಕುಗಳನ್ನು ನೀಡಿರುವ ಅಂಶವನ್ನು ಲೇಖಕರು ಉಲ್ಲೇಖಿಸುತ್ತಾರೆ. ಭಾರತದಲ್ಲಿ ಬಹುಸಂಖ್ಯಾತ ಎಂದು ಗುರುತಿಸಬಹುದಾದ, ದಬ್ಬಾಳಿಕೆ ಮಾಡಬಹುದಾದ, ಏಕರೂಪಿ ಸಮುದಾಯ ಇಲ್ಲದೆ ಇದ್ದಾಗ್ಯೂ ಸ್ವಾತಂತ್ರ್ಯೋತ್ತರ ಭಾರತದಲ್ಲಿ ಅಲ್ಪಸಂಖ್ಯಾತ– ಬಹುಸಂಖ್ಯಾತ ಎನ್ನುವ ನರೆಟಿವ್ ಬಿಟ್ಟು ಸೆಕ್ಯುಲರಿಸಮ್ಮಿನ ನರೆಟಿವ್ ಇಲ್ಲವೇ ಇಲ್ಲ! ಹೀಗಿದ್ದರೂ ಹಲವು ಸಮುದಾಯಗಳು ಆಗಾಗ ಭಾರತದಲ್ಲಿ 'ವಿಕ್ಟಿಮ್ ಕಾರ್ಡು'ಗಳನ್ನು ಹಿಡಿದುಕೊಂಡು ಬೀದಿಗೆ ಬರುವಂತಹ ಸ್ಥಿತಿಯಿದೆ. ಭಾರತದ ಬುದ್ಧಿಜೀವಿ ವರ್ಗ ಕಳೆದ ಎಪ್ಪತ್ತು ಎಂಬತ್ತು ವರ್ಷಗಳಲ್ಲಿ ಪ್ರತ್ಯೇಕತಾಭಾವವನ್ನು ಬೆಳೆಸುವ ನರೆಟಿವ್‌ಗಳನ್ನು ಯಶಸ್ವಿಯಾಗಿ ಕಟ್ಟುತ್ತಾ ಬಂದಿದೆ. ಇಂತಹ ಹುಸಿ ನರೆಟಿವ್‌ಗಳನ್ನು ಮುರಿದು ಹೊಸ ಸರಿಯಾದ ಮತ್ತು ಸತ್ಯವನ್ನಾಧರಿಸಿದ ನರೆಟಿವ್‌ಗಳನ್ನು ಕಟ್ಟುವುದು ಅಷ್ಟು ಸುಲಭದ ಮಾತಲ್ಲ.

ಲೇಖಕರ ಪ್ರಕಾರ ಇಸ್ಲಾಮಿಕ್ ದೇಶಗಳ ಮತವಿಸ್ತರಣೆಯ ಗುರಿಯಾಗಲೀ, ಚೀನಾದಂತಹ ದೇಶಗಳ ಸಾಮ್ರಾಜ್ಯ ವಿಸ್ತರಣೆಯ ಗುರಿಯಾಗಲೀ ಸುರಾಜ್ಯದ ಕಲ್ಪನೆಯನ್ನು ಸಾಕಾರಗೊಳಿಸಲಾರದು. ಅವೆಲ್ಲ ಶೋಷಣೆ, ದಬ್ಬಾಳಿಕೆ, ಯಜಮಾನಿಕೆಯಲ್ಲೇ ಮುಗಿಯುವಂಥವು. ಸದ್ಧರ್ಮದ ಭಾರತೀಯ ಪರಿಕಲ್ಪನೆಯುಳ್ಳ ವಿಕೇಂದ್ರೀಕೃತ ವ್ಯವಸ್ಥೆಯು ಹೆಚ್ಚು ಸುಸ್ಥಿರವಾದುದು; ಕುಟುಂಬವು ಸಮಾಜದ ಮೂಲ ಹಾಗೂ ಸ್ವಯಂಪೂರ್ಣ ಘಟಕವಾಗಿ ಉಳಿದಾಗ ಇದು ಸಾಧ್ಯವಾಗುತ್ತದೆ ಎನ್ನುವುದನ್ನು ಲೇಖಕರು ಒತ್ತು ಕೊಟ್ಟು ಹೇಳುತ್ತಾರೆ.

***

'ಮಹಮ್ಮದೀಯ ಮತ ಮತ್ತು ಸಮುದಾಯ: ನಾವು ಅರ್ಥೈಸಿಕೊಂಡಿರುವುದೆಷ್ಟು?' ಎನ್ನುವ ಲೇಖನವನ್ನು ಬರೆದವರು ಚಂದ್ರಶೇಖರ ಜಹಗೀರ್ದಾರ್. ಪಕ್ಕನೆ

ಮೇಲುನೋಟಕ್ಕೆ ಈ ಶೀರ್ಷಿಕೆಯಲ್ಲಿರುವ 'ನಾವು' ಎನ್ನುವ ಪದವು ಹಿಂದುಗಳು ಅಥವಾ ಹೆಚ್ಚೆಂದರೆ ಮುಸ್ಲಿಮೇತರರನ್ನು ಸೂಚಿಸುತ್ತದೆ ಎಂದು ಅನಿಸಬಹುದು. ಆದರೆ ಹಾಗೆಂದುಕೊಂಡರೆ ತಪ್ಪು. ಯಾಕೆಂದರೆ ಇಂದಿನ ನಮ್ಮ ದೇಶದ ಮುಸ್ಲಿಮರು ಕೂಡ ಸರಿಯಾಗಿ ಅರ್ಥ ಮಾಡಿಕೊಂಡಿದ್ದಾರೆ ಎಂದು ಹೇಳಲಾಗದು! ಅರ್ಥವಾದವರೂ ಬಹಿರಂಗವಾಗಿ ಹೇಳುತ್ತಾರೆ ಎನ್ನಲಾಗದು. ಜಗತ್ತಿನ ವಿವಿಧ ನಂಬಿಕೆ, ಮತ, ರಿಲಿಜನ್ನುಗಳಿಗೆ ಸಂಬಂಧಿಸಿದಂತೆ ಎರಡು ನೆಲೆಗಳಲ್ಲಿ ರಿಲಿಜಿಯಸ್ ಪಠ್ಯಗಳ ಅರ್ಥೈಸುವಿಕೆಗಳು ಸಾಮಾನ್ಯವಾಗಿ ಕಂಡುಬರುತ್ತವೆ: ಸಾಂಪ್ರದಾಯಿಕ ಅರ್ಥೈಸುವಿಕೆ ಮತ್ತು ಸುಧಾರಣೆಗೊಂಡ ಅರ್ಥೈಸುವಿಕೆ. ಹಿಂದುಗಳಿಗೆ ನಿರ್ದಿಷ್ಟ 'ರಿಲಿಜಿಯಸ್' ಪಠ್ಯ ಅಂತ ಇಲ್ಲದಿದ್ದರೂ ಒಟ್ಟಾರೆಯಾಗಿ, ಪುರಾಣಗಳು, ಶಾಸ್ತ್ರಗಳು, ರೂಢಿಗಳು ಮತ್ತು ನಂಬಿಕೆಗಳನ್ನು ಪರಿಗಣಿಸಿದರೆ ಅಲ್ಲಿಯೂ ಸ್ಥೂಲವಾಗಿ ಈ ಎರಡು ಬಗೆಯ ಅರ್ಥೈಸುವಿಕೆಗಳನ್ನು ಕಾಣಬಹುದು.

ಈ ಎರಡು ನಮೂನೆಗಳ ಬಗ್ಗೆ ಲೇಖಕರು ನೀಡುವ ವಿವರಣೆ ಬಹಳ ಉಲ್ಲೇಖಾರ್ಹವಾಗಿದೆ. "..ಯಹೂದಿ ಮತ್ತು ಕ್ರೈಸ್ತ ಮತಗಳನ್ನೂ ಒಳಗೊಂಡು ಹಲವಾರು ಮತಗಳಲ್ಲಿ ಸಾಂಪ್ರದಾಯಿಕ ಮತ್ತು ಸುದಾರಣೆಗೊಂಡ ಅರ್ಥೈಸುವಿಕೆಗಳಿವೆ. ಸಾಮಾನ್ಯವಾಗಿ ಸುಧಾರಣೆಗೊಂಡ ಅರ್ಥೈಸುವಿಕೆಗಳು ರಾಜ್ಯ ನಿರ್ವಹಣೆಯಲ್ಲಿ ವಿನಿಯೋಗವಾದರೆ, ಸಾಂಪ್ರದಾಯಿಕ ಅರ್ಥೈಸುವಿಕೆಯು ಸಮುದಾಯ–ಕೌಟುಂಬಿಕ–ವೈಯಕ್ತಿಕ ನೆಲೆಗಳಲ್ಲಿ ಉಳಿದುಕೊಂಡಿರಬಹುದು. ಆದರೆ ಇಸ್ಲಾಮ ಮತದಲ್ಲಿ ಸಾಂಪ್ರದಾಯಿಕ ಅರ್ಥೈಸುವಿಕೆಯೇ ಇಸ್ಲಾಮಿಕ್ ದೇಶದ ರಾಜಕೀಯ ವ್ಯವಸ್ಥೆ ಮತ್ತು ಆಡಳಿತ ನೀತಿಗಳಲ್ಲಿ ಉಪಯೋಗವಾಗುತ್ತಿದ್ದು ಇದು ಸಮುದಾಯಗಳಲ್ಲಿನ ಸಂಬಂಧಗಳಲ್ಲಿ ಒಂದು ರೀತಿಯ ಒತ್ತಡವನ್ನು ಸೃಷ್ಟಿಸುತ್ತಿದೆ."

ಈ ಒತ್ತಡದ ಸ್ವರೂಪ ಕೆಲವೊಮ್ಮೆ ವಿಚಿತ್ರವಾಗಿರಬಹುದು. ಇಂದಿನ ಎಲ್ಲ ಸಮಸ್ಯೆಗಳನ್ನೂ ಪ್ರಾಚೀನ ಗ್ರಂಥ/ಶಾಸ್ತ್ರಗಳ ಆಧಾರದಲ್ಲಿ ಪರಿಹರಿಸಬೇಕು ಎಂದು ಯಾರಾದರೂ ಹಿಂದೂವೊಬ್ಬ ಹೇಳಿದರೆ ಅವನು ಭಾರತೀಯತೆಯಿಂದ ಅಷ್ಟು ದೂರ ಹೋದನೆಂದು ಅರ್ಥ. ಹದಿನೈದು ವರ್ಷದ ಹುಡುಗಿಗೆ ಮದುವೆ ಮಾಡಿದ್ದು ಸರಿಯೆ? ವಿಧವೆಯೊಬ್ಬಳ ತಲೆ ಬೋಳಿಸಿದ್ದು ಸರಿಯೆ? ಎನ್ನುವ ಪ್ರಶ್ನೆಗೆ ನ್ಯಾಯಾಲಯವು ವೇದವನ್ನೋ ಮನುಸ್ಮೃತಿಯನ್ನೋ ಮತ್ತೊಂದು ಧರ್ಮಶಾಸ್ತ್ರವನ್ನೋ ನೋಡಿ ಉತ್ತರ ಕಂಡುಕೊಳ್ಳುತ್ತೇನೆಂದು ಇಂದು ಹೇಳಿದರೆ ಅದು ಭಾರತೀಯತೆಯಿಂದ, ಹಿಂದುತ್ವದಿಂದಷ್ಟೇ ಅಲ್ಲ; ಕೊನೆಗೆ ವೇದ, ಧರ್ಮಶಾಸ್ತ್ರ ಅಥವಾ ಮನುಸ್ಮೃತಿಯಿಂದಲೂ ಅಷ್ಟು ದೂರ ಹೋಯಿತೆಂದೇ ಅರ್ಥ. ಅಂದರೆ ಪುಸ್ತಕಾಧಾರಿತ ರಿಲಿಜನ್ ಒಂದು ತನ್ನ ನೆರೆಯ ನಂಬಿಕೆಗಳ ಮೇಲೆ ಉಂಟುಮಾಡುವ ಒತ್ತಡ ಈ ಬಗೆಯದು ಎನ್ನುವುದನ್ನು ಗಮನಿಸದೆ ಹೋಗಬಾರದು.

ಸಮುದಾಯಗಳು ನಂಬಿರುವ ಮೌಲ್ಯಗಳನ್ನು ತುಲನಾತ್ಮಕವಾಗಿ ನೋಡುವ ಅಗತ್ಯವನ್ನು ಲೇಖಕರು ಪ್ರತಿಪಾದಿಸುತ್ತಾರೆ. ಇಂದ್ರಿಯ ನಿಯಂತ್ರಣ ಮೊದಲಾದ ಹಲವು ವಿಷಯಗಳಲ್ಲಿ ಇರುವ ಸಮಾನತೆ/ವ್ಯತ್ಯಾಸಗಳನ್ನು ತೌಲನಿಕವಾಗಿ ಗುರುತಿಸುತ್ತಾರೆ. ಸ್ವಾರಸ್ಯವೆಂದರೆ ಭಾರತದಲ್ಲಿ ಹಿಂದೂ– ಮುಸ್ಲಿಂ ಸೌಹಾರ್ದವನ್ನು ಉಂಟುಮಾಡುವ ಉದ್ದೇಶವನ್ನು ಹೊಂದಿದ್ದ ನೆಹರೂ ಅವರಾಗಲೀ ನೆಹರೂವಿಯನ್ ಸೆಕ್ಯುಲರಿಸಮ್ಮಿನ

ಇತರ ಅಧ್ವರ್ಯುಗಳಾಗಲೀ ಈ ಬಗೆಯ ತೌಲನಿಕ ದೃಷ್ಟಿಯ ವಿವೇಚನೆಯನ್ನು ಮಾಡಿದ್ದು ಕಾಣುವುದಿಲ್ಲ. ಅಥವಾ ವಿವೇಚಿಸಿದ್ದರೂ ಸಾಮರಸ್ಯ, ಸೌಹಾರ್ದದ ಸಾಮಾಜಿಕ ಬದುಕಿಗೆ ಯಾವುದು ಪೂರಕ, ಯಾವುದು ಮಾರಕ ಎಂದು ವಿವೇಚಿಸಿ ಗುಣದೋಷಗಳನ್ನು ಹೇಳಿದ್ದು ಕಾಣುವುದಿಲ್ಲ. ನಿಜ, ಜಾತಿಗಳ ನಡುವಿನ ತಾರತಮ್ಯದ ಸಮಸ್ಯೆ ಬಗ್ಗೆ ಸಾಕಷ್ಟು ಬರೆದವರಿದ್ದಾರೆ. ಆದರೆ ಹಿಂದುಗಳ ನಂಬಿಕೆಗಳು, ವಿವಿಧ ಮತ–ಪಂಥಗಳು, ರಿಲಿಜನ್ ಮೊದಲಾದವುಗಳ ನಡುವಿನ ಸಾಮ್ಯ ವೈಷಮ್ಯಗಳ ಬಗ್ಗೆ ಅಂತಹ ತೌಲನಿಕ ಚರ್ಚೆ ನಡೆದುದಿಲ್ಲ. ಅಂತಹ ತೌಲನಿಕ ವಿವೇಚನೆ ನಡೆದಾಗ ಮಾತ್ರ ಸೌಹಾರ್ದ ಸ್ಥಾಪಿಸುವ, ಉಳಿಸುವ ಹೊಣೆಗಾರಿಕೆಯನ್ನು ಯಾರು ಹೆಚ್ಚು ಹೊರಬೇಕು ಎನ್ನುವುದು ಸ್ಪಷ್ಟವಾಗುತ್ತದೆ. ಲೇಖಕರು ಆ ಸ್ಪಷ್ಟತೆಯನ್ನು ಇಲ್ಲಿ ತಂದಿದ್ದಾರೆ.

*****

'ನವ ಚಳವಳಿಗಳು– ಸಮಸ್ಯೆ, ಸ್ವರೂಪ, ಸವಾಲು' ಎನ್ನುವ ಶೀರ್ಷಿಕೆಯುಳ್ಳ ರೋಹಿತ್ ಚಕ್ರತೀರ್ಥ ಅವರ ಲೇಖನ ಈ ಕಾಲದ ಹಲವು ಚಳವಳಿಗಳನ್ನು ಗ್ರಹಿಸಿಕೊಳ್ಳಲು ಬೇಕಾದ ಸೂಕ್ಷ್ಮಗಳನ್ನು ಬಿಡಿಸಿ ಹೇಳಲು ಯತ್ನಿಸುತ್ತದೆ. ಚಳವಳಿಗಳೆಂಬ ವಿದ್ಯಮಾನಗಳನ್ನು ರೂಪಿಸಲು ಬಗೆಬಗೆಯಲ್ಲಿ ಕಟ್ಟಲಾಗುವ ನರೆಟಿವ್‌ಗಳ ಆಖ್ಯಾನಗಳ ಸ್ವರೂಪವನ್ನು ಲೇಖನ ಬಿಚ್ಚಿಡುತ್ತದೆ. ಲೇಖಕರು ಚಳವಳಿ ಎನ್ನು ಒಮದು ಪರಿಕಲ್ಪನೆಯನ್ನೇ ಪ್ರಶ್ನಿಸುತ್ತಿಲ್ಲ. ಚಳವಳಿ ಎನ್ನುವುದು ಇರಲೇಬಾರದು ಎನ್ನುತ್ತಿಲ್ಲ ಅಥವಾ ಎಲ್ಲಾ ಚಳವಳಿಗಳನ್ನೂ ಋಣಾತ್ಮಕವಾಗಿ ಕಾಣುವುದಿಲ್ಲ. ಬದಲಾಗಿ ಚಳವಳಿಯ ನೆಪದಲ್ಲಿ ಅನ್ಯ ಉದ್ದೇಶಗಳನ್ನು ಈಡೇರಿಸಿಕೊಳ್ಳುವ ಮತ್ತು ಸಮಾಜದ ಹಿತಕ್ಕೆ, ದೇಶದ ಹಿತಕ್ಕೆ ಧಕ್ಕೆ ತರುವ ಚಳವಳಿಗಳ ಕಡೆಗೆ ಲೇಖಕರು ನಮ್ಮ ಗಮನವನ್ನು ಸೆಳೆಯುತ್ತಾರೆ. ಹಾಗೆ ನೋಡಿದರೆ ದೇಶಕ್ಕೆ ಮಾರಕವಾದ ಚಳವಳಿಗೆ ವಿರೋಧವಾಗಿ ಚಳವಳಿ ಅಗಬೇಕಾದುದು ಕೂಡ ಅಗತ್ಯವೇ.

ಇಲ್ಲಿ ಲೇಖಕರು ಮುಖ್ಯವಾಗಿ ವಾಮಮಾರ್ಗದ ಚಳವಳಿಗಳನ್ನು ಅಥವಾ ಆಂದೋಲನಗಳನ್ನು ಗುರಿಯಾಗಿಟ್ಟುಕೊಂಡು ವಿಶ್ಲೇಷಣೆ ನಡೆಸಿದ್ದಾರೆ. ಸುಳ್ಳುಗಳನ್ನು ಮತ್ತೆ ಮತ್ತೆ ಒತ್ತಿ ಹೇಳುವ ಮೂಲಕ ಭ್ರಾಮಕ ವಾತಾವರಣವನ್ನು ನಿರ್ಮಿಸಿ ಆ ಮೂಲಕ ಒಂದು ಆಂದೋಲನವನ್ನು ದೀರ್ಘ ಕಾಲ ನಿಲ್ಲಿಸುವ ಬಗೆಯನ್ನು ಹೇಳುತ್ತಾರೆ. ಪರಿಸರದ ಬಗ್ಗೆ ಜನರಿಗಿರುವ ಸಹಜ ಕಾಳಜಿಯನ್ನು ಕೂಡ ಹೇಗೆ ಎನ್ಕ್ಯಾಶ್ ಮಾಡಿಕೊಂಡು ಆಂದೋಲನಗಳನ್ನು ಹುಟ್ಟುಹಾಕಿ ಗಂದಲಗಳನ್ನು ಉಂಟುಮಾಡಬಹುದು ಎನ್ನುವುದನ್ನು ಲೇಖನ ವಿವರಿಸುತ್ತದೆ.

ಋತ್ವಿಕ್ ದೇಸ್ವಾಲ್ ಎಂಬ ಯುವಕನ ಒಂದು ಲೇಖನವನ್ನು ನಿದರ್ಶನವಾಗಿ ಇಟ್ಟುಕೊಂಡು ಯುವಜನತೆಯನ್ನು ಆಂದೋಲನಗಳಿಗೆ ಸೆಳೆಯುವ ಬಗೆಯನ್ನು ಹೇಳುತ್ತಾರೆ. ಎಲ್ಲಕ್ಕಿಂತ ಮುಖ್ಯವಾಗಿ ಚಳವಳಿಯ ನೆಪದಲ್ಲಿ ಸಾರ್ವಜನಿಕ ಆಸ್ತಿಪಾಸ್ತಿ ನಾಶ ಮುಂತಾದ ಸಮಾಜವಿರೋಧಿ ಚಟುವಟಿಕೆಗಳನ್ನು ಕೂಡ ನೈತಿಕ ಎಂಬಂತೆ ಸಮರ್ಥಿಸುವುದರ ಬಗ್ಗೆ ರೋಹಿತ್ ಉಲ್ಲೇಖಿಸುತ್ತಾರೆ. ರೈತ ಚಳವಳಿಯ ಸಂದರ್ಭದಲ್ಲಿ ಟ್ರಾಕ್ಟರುಗಳನ್ನು ಯದ್ವಾತದ್ವಾ ಅಪಾಯಕಾರಿಯಾಗಿ ಓಡಿಸಿದ್ದು, ಕೆಂಪುಕೋಟೆಯ ಧ್ವಜಸ್ಥಂಭವನ್ನು ಏರಿದ್ದು ಇವನ್ನೆಲ್ಲ ತಥಾಕಥಿತ ಪ್ರಗತಿಪರರು ಚಳವಳಿಯ ವಿಕೃತಿಯೆಂದು ಕಾಣಲಿಲ್ಲ.

ನಂದಿಗ್ರಾಮದ ಚಳವಳಿ, ನರ್ಮದಾ ಬಚಾವೋ ಆಂದೋಲನ ಇಲ್ಲೆಲ್ಲ ಗ್ರಾಮೀಣರ ಹಿತದ ನೆಪದಲ್ಲಿ ಅನ್ಯ ಉದ್ದೇಶಗಳನ್ನು ಈಡೇರಿಸಿಕೊಂಡ ಬಗ್ಗೆ ಲೇಖಕರು ಬೆಳಕು ಹರಿಸಿದ್ದಾರೆ. ಅದೇರೀತಿಯಲ್ಲಿ ಕೂಡಂಕುಲಂ ಆಂದೋಲನ, ತೂತುಕುಡಿಯ ತಾಮ್ರದ ಕಾರ್ಖಾನೆ ವಿರೋಧಿ ಆಂದೋಲನ ಇವೆಲ್ಲವುಗಳ ಹಿಂದಿದ್ದ ದೇಸೀಯ ವಿದೇಶೀಯರ ಹುನ್ನಾರಗಳ ಬಗ್ಗೆ ಲೇಖಕರು ಉಲ್ಲೇಖಿಸಿದ್ದಾರೆ. ಮಾಧ್ಯಮಗಳು ಕೂಡ ಇಂತಹ ಹುನ್ನಾರಕೋರರಿಗೆ ಗೊತ್ತಿದ್ದೋ ಗೊತ್ತಿಲ್ಲದೆಯೋ ಬೆಂಬಲವನ್ನು ನೀಡುತ್ತವೆ. ಏನಿಲ್ಲದಿದ್ದರೂ ಅವು ಟಿ.ಆರ್.ಪಿ.ಗೆ ಸಹಕಾರಿ ಎನ್ನುವುದು ಅವುಗಳಿಗೆ ಗೊತ್ತು. ಇಂತಹ ಚಳವಳಿಗೆ ಎನ್.ಜಿ.ಓ.ಗಳ ಹೆಸರಿನಲ್ಲಿ ಸಾಕಷ್ಟು ವಿದೇಶಿ ಹಣ ಬರುತ್ತದೆ. ಪ್ರಚಾರದ ಭರಾಟೆ, ಜಾಹಿರಾತು, ಪತ್ರಿಕಾಗೋಷ್ಠಿಗಳ ವೈಭವ ಇವೆಲ್ಲವೂ ಪ್ರಚಾರದ ಮೇಲೆ ಪರಿಣಾಮ ಬೀರುತ್ತವೆಯಾದ್ದರಿಂದ ಹಣವಿದ್ದರೆ ಮಧ್ಯಮಗಳನ್ನು ತಮ್ಮ ಕಡೆ ಇಟ್ಟುಕೊಳ್ಳುವುದು ಕಷ್ಟವಿಲ್ಲ.

ಟ್ವಿಟರ್, ವಾಟ್ಸಪ್, ಫೇಸ್ಬುಕ್, ಇನ್‌ಸ್ಟಾಗ್ರಾಂ ಮೊದಲಾದ ನವಮಾಧ್ಯಮಗಳು ಸುಲಭವಾಗಿ ಅಪಪ್ರಚಾರಕ್ಕೆ ಅನುಕೂಲವನ್ನು ಒದಗಿಸುತ್ತವೆ. ಒಳ್ಳೆಯ ವಿಚಾರವನ್ನು ಪ್ರಚಾರ ಮಾಡುವುದಕ್ಕಿಂತ ಅಪಪ್ರಚಾರ ಮಾಡುವುದು ಯಾವಾಗಲೂ ಸುಲಭ. ಅದರಲ್ಲೂ ಜನಜೀವನದ ಮೇಲೆ ಪ್ರಭಾವ ಬೀರುವಂತಹ, ಆದರೆ ವಿಷಯದ ಬಗ್ಗೆ ಆಳ ಅರಿವಿಲ್ಲದ ಜನರ ನಡುವೆ ಪರಿಸರ, ರೈತ ಕಾನೂನು ಇತ್ಯಾದಿ ವಿಷಯಗಳ ಬಗ್ಗೆ ಅಪಪ್ರಚಾರ ಮಾಡುವುದು ಸುಲಭ. ತಂತ್ರಜ್ಞಾನವನ್ನು ಆಂದೋಲನಗಳು ಚೆನ್ನಾಗಿ ಬಳಸಿಕೊಳ್ಳುತ್ತವೆ.

ಭಾರತದ ಸ್ಥಿತಿಗತಿಯ ಸಂಪೂರ್ಣ ಪರಿಚಯವಿಲ್ಲದ ಪಶ್ಚಿಮದವರ ನಡುವೆ ಅಪಕಲ್ಪನೆಗಳನ್ನು ಬಿತ್ತಿ ಅವರ ಆಂದೋಲನೋತ್ಸಾಹವನ್ನು ಬಳಸಿಕೊಳ್ಳುವುದು ಇನ್ನೂ ಸುಲಭ. ಭಾರತದ ಬಗ್ಗೆ ವಸಾಹತುಸಾಹಿ ದೊರೆಗಳು ಮತ್ತು ಸ್ವಾತಂತ್ರ್ಯಾನಂತರದ ಸುಶಿಕ್ಷಿತರು ಕಟ್ಟಿದ ನರೆಟಿವ್‌ಗಳು ಕೂಡ ಇದಕ್ಕೆ ಪೂರಕವೇ ಹೌದು. ಭಾರತದಲ್ಲಿ ನಡೆಯುವ ನವಚಳವಳಿಗಳ ಹಿಂದೆ ವಿದೇಶಗಳಲ್ಲಿರುವ ಭಾರತವಿರೋಧಿಗಳ ಕೈವಾಡ/ಬೆಂಬಲ ಇರುವುದು ಕೂಡ ಇಂದು ಸ್ಪಷ್ಟವೇ ಇದೆ. ಖಾಲಿಸ್ತಾನವಾದಿಗಳು, ಕಾಶ್ಮೀರ ಪ್ರತ್ಯೇಕತಾವಾದಿಗಳು ಇವರೆಲ್ಲರೂ ಈ ದೇಶದೊಳಗೆ ಸರಕಾರದ ವಿರುದ್ಧ ಚಳವಳಿ ನಡೆಸುವವರಿಗೆ ಪ್ರೀತಿಪಾತ್ರರೇ ಹೌದು! ಅಂತಾರಾಷ್ಟ್ರೀಯ ಸಾಹಿತ್ಯ ಪ್ರಶಸ್ತಿ ಪಡೆದ ಒಬ್ಬರು ತುಕಡೇವಾದಿ ಬುದ್ಧಿಜೀವಿ ಮಹಿಳೆ ಕಾಶ್ಮೀರವನ್ನು ಭಾರತದಿಂದ ಪ್ರತ್ಯೇಕಿಸಬೇಕೆಂದು ಹೇಳಿದ್ದೂ ವರದಿಯಾಗಿದ್ದುಂಟು.

ವೋಕಿಸಂ ಎನ್ನುವ ಒಂದು ಅಧುನಿಕ ಮನೋಭಾವವನ್ನು ಇಲ್ಲಿ ಲೇಖಕರು ಪರಿಚಯಿಸಿದ್ದಾರೆ. ವೋಕಿಸಂ ಬಗ್ಗೆ ಕನ್ನಡದಲ್ಲಿ ಹೆಚ್ಚು ಬರವಣಿಗೆ ಆಗಿಲ್ಲ. ಸರಳವಾಗಿ ಹೇಳಬೇಕೆಂದರೆ, ವ್ಯವಸ್ಥೆಯೆಲ್ಲ ಅಡಿಮೇಲಾಗಬೇಕು ಎನ್ನುವ ಮನೋಭಾವ ಇದು. ದಾಂಪತ್ಯ, ಕುಟುಂಬ ಇಂತಹ ಸಂಸ್ಥೆಗಳು ಒಡೆದು ಚೂರುಚೂರಾದರೆ ಅಡ್ಡಿಯಿಲ್ಲ; ಉತ್ತಮವೇ. ಆದರೆ ಸಮಾಜ ಮತ್ರ ಸೆಕ್ಯುಲರ್ ಆಗಿ, ಸಹಿಷ್ಣುವಾಗಿ, ಸೌಹಾರ್ದದಿಂದ ಇರಬೇಕೆಂದು ವೋಕ್ ಸಿದ್ಧಾಂತಿಗಳು ಬಯಸುತ್ತಾರೆ.

ಯಾವ ಕಷ್ಟವೂ ಇಲ್ಲದ ಶ್ರೀಮಂತರ ಮಕ್ಕಳು ಇನ್ನೊಬ್ಬರಿಗೆ 'ದನಿಯಾಗುವ' ಉತ್ಸಾಹ ತೋರುತ್ತಾ ವೋಕಿಸಂ ಕಡೆಗೆ ಒಲಿಯುತ್ತಿರುವುದು ಈಚಿನ ವಿದ್ಯಮಾನ.

ಎಲ್ಲವನ್ನೂ ಕೇವಲ ಶ್ರೀಮಂತ– ಬಡವ, ಶೋಷಕ–ಶೋಷಿತ ಮುಂತಾದ ವಿರುದ್ಧಗಳ ನೆಲೆಯಲ್ಲಿ ಮಾತ್ರ ಅರ್ಥ ಮಾಡಿಕೊಳ್ಳುತ್ತ ಸಮಾಜ ಅಥವಾ ದೇಶವೆಂಬ ವ್ಯವಸ್ಥೆಯ ಸಂಕೀರ್ಣತೆಯನ್ನು ಅರ್ಥ ಮಾಡಿಕೊಳ್ಳದ ಸಮೂಹಕ್ಕೆ ಹೊಸ ಬುಡಮೇಲು ಸಿದ್ಧಾಂತಗಳು ಇಷ್ಟವಾಗುತ್ತವೆ. ಅವರ ಗ್ರಹಿಕಾಸಾಮರ್ಥ್ಯ ಕೂಡ ಅಷ್ಟಕ್ಕಷ್ಟೇ. ಜೋರುದನಿಯ ಅಭಿವ್ಯಕ್ತಿ ಸಾಮರ್ಥ್ಯ ಮಾತ್ರ ಇರುತ್ತದೆ. ಎಷ್ಟೋ ನವಚಳವಳಿಗಳನ್ನು ಬೆಂಬಲಿಸುವವರ ಮಹಳ ಮುಖ್ಯ ಲಕ್ಷಣವೇ ಇದು. ಗ್ರಹಿಕಾಸಾಮರ್ಥ್ಯ ಸೊನ್ನೆ; ರೆಟಾರಿಕ್‌ಗಳ ಆಕರ್ಷಣೆಗೆ ಸುಲಭವಾಗಿ ಸೆಳೆಯಲ್ಪಡುತ್ತಾರೆ.

ವೋಕ್ ಸಿದ್ಧಾಂತಿಗಳನ್ನು ಗುರುತಿಸುವುದು ಹೇಗೆ? ರೋಹಿತ್ ಹೇಳುತ್ತಾರೆ: ಅವರು ತಮ್ಮ ಗೋಲ್ ಪೋಸ್ಟ್ ಗಳನ್ನು ಬದಲಾಯಿಸುತ್ತ ಹೋಗುತ್ತಾರೆ. ಇದಕ್ಕೆ ಭಾರತೀಯ ಸಂದರ್ಭದಲ್ಲಿ ನಡೆಯುವ ಸಂಸ್ಕೃತಿ ಕುರಿತಾದ ಚರ್ಚೆಗಳ ಉದಾಹರಣೆಯನ್ನೂ ಲೇಖಕರು ನೀಡಿದ್ದಾರೆ. ವೋಕ್ ಸಿದ್ಧಾಂತಿಗಳು ನೀವು ಗೋಲು ಹೊಡೆವಾಗ ತಮ್ಮ ಗೋಲ್ ಪೋಸ್ಟ್ ಗಳನ್ನು ಆಚೀಚೆ ಬದಲಾಯಿಸುವುದಷ್ಟೇ ಅಲ್ಲ. ಅವರ ಎದುರಿನ, ಅವರು ಗೋಲು ಹೊಡೆಯಬೇಕಾದ ಗೋಲ್ ಪೋಸ್ಟನ್ನೂ ತಮ್ಮ ಚೆಂಡು ಹೋಗುವಲ್ಲಿಗೆ ಬದಲಿಸುತ್ತಾರೆ ಎನ್ನುವ ಸೂಚನೆಯೂ ಲೇಖನದಲ್ಲಿದೆ.

****

'ಪರಿಸರದ ಚರ್ಚೆ– ನೆಲೆ, ಮಾರ್ಗ ಮತ್ತು ಗುರಿ' ಎನ್ನುವ ಲೇಖನವನ್ನು ಹೆಸರಾಂತ ಪತ್ರಕರ್ತರೂ ಪರಿಸರವಾದಿಯೂ ಆದ ಎಸ್. ಗಿರಿಜಾಶಂಕರ ಅವರು ಬರೆದಿದ್ದಾರೆ. ಇದನ್ನು ರೋಹಿತ್ ಚಕ್ರತೀರ್ಥರ ಲೇಖನದ ಜೊತೆಗೆ ಓದಿದರೆ ಹೆಚ್ಚು ಪ್ರಯೋಜನವಿದೆ.

ಆರಂಭದಲ್ಲೇ ಈ ಭೂಮಿಯ ಜೀವವೈವಿಧ್ಯವನ್ನು ಸಂಭ್ರಮಿಸುವ, ತೈತ್ತರೀಯ ಅರಣ್ಯಕದ ಶಾಂತಿಮಂತ್ರವೊಂದನ್ನು ಉದ್ಧರಿಸಿ ಇಡೀ ಲೇಖನದ ಹಿಂದಿರುವ ತಾತ್ತ್ವಿಕ ಬುನಾದಿಯೇನು ಎನ್ನುವುದನ್ನು ಸೂಚಿಸಿದ್ದಾರೆ. ಇದೊಂದೇ ಅಲ್ಲ; ಇಡೀ ಚರಾಚರಗಳನ್ನು ಸಮಗ್ರವಾಗಿ ಕಾಣುವ ಹಲವು ಮಂತ್ರಗಳು ಸಿಗುತ್ತವೆ. ನಮ್ಮ ಜನಪದ ಸಾಹಿತ್ಯದಲ್ಲೂ ಇಂತಹ ಆಶಯ ಹೇರಳವಾಗಿ ಸಿಗುತ್ತದೆ. ಸಾಮಾನ್ಯವಾಗಿ ಜಗತ್ತಿನ ಇತರ ದೇಶಗಳ ತತ್ತ್ವಗಳಲ್ಲಿ ಮನುಷ್ಯನಿಗೆ ಪ್ರಾಧಾನ್ಯ. ಇತರ ಸಂಪನ್ಮೂಲಗಳು ಮನುಷ್ಯನ ಅಗತ್ಯವನ್ನು ಪೂರೈಸಲಿಕ್ಕೆ. ಅದು ಪರಿಸರಕ್ಕೆ ಮಾರಕ. ಈಚಿನ ವರ್ಷಗಳಲ್ಲಿ ಮುಂದುವರಿದ ದೇಶಗಳು ಪರಿಸರ ಸ್ವಚ್ಛತೆ, ನೀರಿನ ಸ್ವಚ್ಛತೆ ಇತ್ಯಾದಿ ಸಂಗತಿಗಳಲ್ಲಿ ಭಾರತದಿಂದ ಎಷ್ಟೋ ಮುಂದಿದ್ದರೂ ಯಂತ್ರಗಳ ಬಳಕೆಯ ಮೂಲಕ ಪರೋಕ್ಷವಾಗಿ ಪರಿಸರಕ್ಕೆ ಉಂಟುಮಾಡುವ ಹಾನಿಯ ಪ್ರಮಾಣ ಬಹಳ ದೊಡ್ಡದು. ಭಾರತದಲ್ಲಿ ಪ್ರಾಚೀನ ಕಾಲದಿಂದಲೂ ಇದ್ದ ದೃಷ್ಟಿ ಸಮಗ್ರತೆಯದು. ಕೇವಲ ಮನುಷ್ಯ ಕೇಂದ್ರಿತವಲ್ಲ. ಮನುಷ್ಯನ ಹಿತವು ಪರಿಸರದ ಹಿತವನ್ನು ಅವಲಂಬಿಸಿದೆ ಎನ್ನುವ ದೃಷ್ಟಿಕೋನ.

ಅವರು ಉಲ್ಲೇಖಿಸುವ ಶಾಂತಿಮಂತ್ರದ ಅರ್ಥ ಹೀಗೆ: "ವಾಯುವು ನಮಗೆ ಸುಖವುಂಟಾಗುವಂತೆ ಬೀಸಲಿ. ನದಿಗಳು ಮಧುರವಾಗಿ ಹರಿಯಲಿ. ಸಸ್ಯಗಳು ಮಧುರವಾಗಿರಲಿ. ದ್ಯುಲೋಕವೂ ಸುಖಕರವಾಗಿರಲಿ. ವೃಕ್ಷ, ಸೂರ್ಯ, ಗೋವಿನ ಕ್ಷೀರ ಸಹ ಮಧುರವಾಗಿರಲಿ." ಅದೇರೀತಿ ಅಥರ್ವ ವೇದದ ಪೃಥ್ವಿ ಸೂಕ್ತವು ಬಹು ಮುಖ್ಯವಾದುದು. ಪರಿಸರವಾದವು ಕಟ್ಟಿಕೊಳ್ಳಬೇಕಾದ ನರೆಟಿವ್ ಕೂಡ ಹೊಂದಿರಬೇಕದುದು ಇದೇ ತಾತ್ತ್ವಿಕ ಬುನಾದಿಯನ್ನು.

ಪರಿಸರದ ಕುರಿತ ಚರ್ಚೆಯಲ್ಲಿ ಮುಖ್ಯವಾಗುವುದು ಮನುಷ್ಯನ ಮಧ್ಯಪ್ರವೇಶದಿಂದಾಗಿ ಅದಕ್ಕೆ ಆಗುವ ಹಾನಿ. ಪರಿಸದ ಪರಿಭಾಷೆ ಮತ್ತು ಅಭಿವೃದ್ಧಿಯ ಪರಿಭಾಷೆ ಇವೆರಡು ಮುಖಾಮುಖಿಯಾಗುವುದನ್ನು ಲೇಖಕರು ಸೂಚಿಸುತ್ತಾರೆ. ಪರಿಸರದ ಚರ್ಚೆಯು ಈ ಎರಡೂ ಪರಿಭಾಷೆಗಳನ್ನು ಅನಿವಾರ್ಯವಾಗಿ ಒಳಗೊಳ್ಳುತ್ತದೆ. ಈ ಮುಖಾಮುಖಿಯಲ್ಲಿ ಸಮತೋಲನವನ್ನು ಕಾಪಾಡಿಕೊಳ್ಳುವುದು ನೀತಿನಿರೂಪಕರಿಗೆ ಹಾಗೂ ಆಡಳಿತಗಾರರಿಗೆ ಅತಿದೊಡ್ಡ ಸವಾಲು.

ಜೀವವೈವಿಧ್ಯ, ಕೈಗಾರಿಕೀಕರಣ, ನಗರೀಕರಣ, ವಿಜ್ಞಾನ–ತಂತ್ರಜ್ಞಾನ ಇವೆಲ್ಲ ಇಂದು ಪರಿಸರಸಂಬಂಧೀ ದೇಶೀಯ ಮತ್ತು ಅಂತಾರಾಷ್ಟ್ರೀಯ ಚರ್ಚೆಗಳಲ್ಲಿ ಮುಖ್ಯ ಪರಿಕಲ್ಪನೆಗಳಾಗಿ ಬರುತ್ತವೆ. ಅಂತಾರಾಷ್ಟ್ರೀಯ ರಾಜಕಾರಣವು ಪರಿಸರದ ಚರ್ಚೆಯಲ್ಲೂ ತಲೆಹಾಕುವುದರಿಂದ ಅಭಿವೃದ್ಧಿಶೀಲ ದೇಶಗಳು ಎದುರಿಸಬೇಕಾದ ಅಂತಾರಾಷ್ಟ್ರೀಯ ಸವಾಲು ಇನ್ನಷ್ಟು ಹೆಚ್ಚಿನದು. ಪರಿಸರ ಒಪ್ಪಂದಗಳೆಲ್ಲ ಏಕಪಕ್ಷೀಯವಾಗಿ ಶ್ರೀಮಂತ ಹಾಗೂ ಹೆಚ್ಚು ಕಾರ್ಬನನ್ನು ವಾತಾವರಣಕ್ಕೆ ಸೇರಿಸುವ ಬಲಾಢ್ಯ ದೇಶಗಳ ಹಿತಾಸಕ್ತಿಯನ್ನು ಕಾಪಾಡುತ್ತ ಭಾರತದಂತಹ ದೇಶಗಳ ಮೇಲೆ ಒತ್ತಡವನ್ನು ಹೇರುತ್ತವೆ.

ದೇಶದೊಳಗಿನ ಪರಿಸರ ಹೋರಾಟಗಾರರು ಎಷ್ಟರಮಟ್ಟಿಗೆ ದೇಶದ ಹಿತವನ್ನು ಕಾಪಾಡುತ್ತಾರೆನ್ನುವುದನ್ನು ಅವಲಂಬಿಸಿ ಅಭಿವೃದ್ಧಿ ಮತ್ತು ಪರಿಸರದ ಸಮತೋಲನವು ಸಾಧಿತವಾಗುತ್ತದೆ. ಈ ಹಿನ್ನೆಲೆಯಲ್ಲಿ ಲೇಖಕರು ತಮಿಳುನಾಡಿನ ಕೂಡುಕುಲಂ ಅಣು ವಿದ್ಯುತ್ ಯೋಜನೆ ಮತ್ತು ನರ್ಮದಾ ಯೋಜನೆಗಳ ಸಂದಭ್ದಲ್ಲಿ ನಡೆದ ಹೋರಾಟದ ಮಗ್ಗುಲುಗಳನ್ನು ಉಲ್ಲೇಖಿಸುತ್ತಾರೆ.

ಪರಿಸರಕ್ಕೆ ಸಂಬಂಧಿಸಿದ ತೀರ್ಮಾನಗಳನ್ನು ಸರಕಾರಗಳು ತೆಗೆದುಕೊಳ್ಳುವಾಗ ಜನರ ಅಭಿಪ್ರಾಯಕ್ಕೆ ಬೆಲೆ ಕೊಡಬೇಕು; ಪಾರದರ್ಶಕತೆ ಇರಬೇಕು; ಅದಕ್ಕಾಗಿ ವಿವಿಧ ಸರ್ವೇಕ್ಷಣೆ, ತಜ್ಞರ ಅಭಿಪ್ರಾಯ ಇಂತಹ ದಾಖಲೆಗಳು ಸಾರ್ವಜನಿಕರಿಗೆ ಸುಲಭವಾಗಿ ಲಭ್ಯವಾಗುವ ಮತ್ತು ಅರ್ಥವಾಗುವ ರೀತಿಯಲ್ಲಿ ಸ್ಥಳೀಯ ಭಾಷೆಯಲ್ಲಿ ಇರಬೇಕು ಎಂದು ಲೇಖಕರು ಒತ್ತಿ ಹೇಳುತ್ತಾರೆ.

ಸರಕಾರಗಳು ಜವಾಬ್ದಾರಿಯಿಂದ ನಡೆದುಕೊಂಡಾಗ ಶಾಂತಿಯುತವಾಗಿ, ಯಾವುದೇ ಸಮಸ್ಯೆಗಳಿಲ್ಲದೆ ಮನವೊಲಿಕೆಯ ಮೂಲಕ ಪರಿಸರ ಸ್ನೇಹಿ ಯೋಜನೆಗಳು ಅದುದು ಇದೆ. ಚಿಕ್ಕಮಗಳೂರಿನ ಒಂದು ಅಂತಹ ಉದಾಹರಣೆಯನ್ನು ಲೇಖಕರು ನೀಡಿದ್ದಾರೆ. ಅದೇರೀತಿ ಕುದುರೆಮುಖದ ಕಬ್ಬಿಣದ ಅದಿರು ಹೋರಾಟವು ಸೂಕ್ತವಾದ ವೈಜ್ಞಾನಿಕ ಆಧಾರಗಳೊಂದಿಗೆ ನ್ಯಾಯಾಲಯದ ಮೂಲಕ ಯಶಸ್ಸು ಸಾಧಿಸಿದ ವಿವರವೂ ಗಮನಾರ್ಹವಾಗಿದೆ.

ಕೊನೆಯಲ್ಲಿ ಪ್ರಕೃತಿಯೊಂದಿಗೆ ಬದುಕು ಸಾಗಿಸುವ ಹಾಗೂ ಪ್ರಕೃತಿಯ ಬಗೆಗಿನ ಋಣಪ್ರಜ್ಞೆಯನ್ನು ಹೊಂದಿದ ಭಾರತೀಯ ದೃಷ್ಟಿಕೋನವು ಪರಿಸರ ಸಂರಕ್ಷಣೆಗೆ ಪೂರಕವೆನ್ನುವುದನ್ನು ಸೂಚಿಸುತ್ತಾರೆ. ಮಹಾಭಾರತದಂತಹ ಪುರಾಣ ಕೂಡ ಪರಿಸರದ ವಿಚಾರವನ್ನು ಒಳಗೊಂಡ ಬಗೆ ಚೆನ್ನಾಗಿದೆ. ಒಂದು ವನದ ರಕ್ಷಣೆಗೆ ಹುಲಿ ಅಗತ್ಯವೆನ್ನುವ ಸಾಲುಗಳುಳ್ಳ ಶ್ಲೋಕವನ್ನು ಉದ್ಧರಿಸಿದ್ದಾರೆ. ಪ್ರಾಣಿಗಳು ಮತ್ತು ಪರಿಸರ ಒಂದಕ್ಕೊಂದು ಪೂರಕ. “..ವ್ಯಾಘ್ರೋ ವನಂ ರಕ್ಷೇದ್ವನಂ ವ್ಯಾಘ್ರಂಚ ಪಾಲಯೇತ್.”

ಪರಿಸರ ಕಾಳಜಿಯು ಜಾತಿ, ವರ್ಣ, ಶ್ರೀಮಂತ, ಬಡವ, ಎಂಬ ಭೇದಗಳನ್ನು ಹಾಗೂ ದೇಶದ ಗಡಿಗಳನ್ನು ಮೀರಿದ್ದಾಗಿರಬೇಕು ಎಂಬ ಅಶಯವು ಲೇಖಕರದ್ದಾಗಿದೆ.

***

ಸಾಮಾಜಿಕ ಸಾಮರಸ್ಯದ ಬಗ್ಗೆ ರೋಹಿಣಾಕ್ಷ ಶಿರ್ಲಾಲು ಅವರ ಲೇಖನ ಚರ್ಚಿಸುತ್ತದೆ. ಸಮಾನತೆ ಎನ್ನುವ ಅಧುನಿಕ ಮೌಲ್ಯವು ಸಾಮರಸ್ಯಕ್ಕೆ ಬಹಳ ಮುಖ್ಯ ಎನ್ನುವುದು ಈ ಲೇಖನದ ಸಾರ. ನಮ್ಮ ದೇಶದಲ್ಲಿ ಜಾತ್ರೆಯಂತಹ ಅಚರಣೆಗಳಲ್ಲಿ ಎಲ್ಲಾ ಜಾತಿಗಳ ಜನರಿಗೂ ಅವರದೇ ಪಾತ್ರವಿದ್ದರೂ ಅಸಮಾನತೆ ಅಥವಾ ತಾರತಮ್ಯಕ್ಕೂ ಅಂಥದೇ ಆಚರಣೆಗಳು ಅಥವಾ ದೇವಾಲಯದಂತಹ ತಾಣಗಳು ಕಾರಣವಾಗುವುದನ್ನು ಲೇಖಕರು ಗುರುತಿಸುತ್ತಾರೆ.

ಪಶ್ಚಿಮದಲ್ಲಿ ಅನ್ಯರನ್ನು 'ಸಹಿಸಿಕೊಳ್ಳುವ' ಟಾಲರೆನ್ಸ್ ಪರಿಕಲ್ಪನೆಯಿದೆ. ಅದರೆ, 'ಸಹಿಸಿದರೆ' ಹೆಚ್ಚು ಪ್ರಯೋಜನವಿಲ್ಲ. ಸಹಿಸುವಿಕೆಯು ನಿಜವಾದ ಸಾಮರಸ್ಯವನ್ನು ಸಾಧಿಸಲಾರದು. ಅಲ್ಲದೆ ಲೇಖಕರು ಹೇಳುವಂತೆ, ಸಾಮರಸ್ಯವನ್ನು ಸಂಘರ್ಷದಿಂದ ಸಾಧಿಸಲು ಸಾಧ್ಯವಿಲ್ಲ; ಬದಲಾಗಿ ಅದಕ್ಕೆ ಬೇಕಾದುದು ತೆರೆದ ಹೃದಯ; ಪರಸ್ಪರರನ್ನು ಸ್ವೀಕರಿಸುವ ಮನಸ್ಥಿತಿ. ಯಾಕೆಂದರೆ ಲೋಕರೂಢಿಯ ಮಾತಿನಂತೆ, ಗೌರವವನ್ನು ಅಥವ ಪ್ರೀತಿಯನ್ನು ಬೇಡಿ ಪಡೆಯಲಾಗದು. ಅದು ಸಹಜವಾಗಿ ಸಾಧ್ಯವಾಗಬೇಕು. ನಮಗಿಂದು ಬೇಕಾದುದು ಸಂಘರ್ಷದ ಆಖ್ಯಾನಗಳಲ್ಲ. ಸಾಮರಸ್ಯಕ್ಕೆ ಯಾವುದು ಪೂರಕ ಎನ್ನುವ ಆಖ್ಯಾನಗಳು. ಏಣಿಯಂತಹ ವ್ಯವಸ್ಥೆಯಲ್ಲಿ ಜಾತಿ ತಾರತಮ್ಯಕ್ಕೆ ಎಲ್ಲ ಜಾತಿಗಳೂ ಸಹಜವಾಗಿಯೇ ಹೊಣೆಯನ್ನು ಹೊರಬೇಕಾಗುತ್ತದೆ. ಆದರೆ, ದೇವಾಲಯಗಳಂತಹ ಜಾಗಗಳಲ್ಲಿ ಸಹಪಂಕ್ತಿ ಭೋಜನವು ಇಲ್ಲದೆ, ಬ್ರಾಹ್ಮಣರಿಗೇ ಪ್ರತ್ಯೇಕ ಭೋಜನ ಇತ್ಯಾದಿ ವ್ಯಸ್ಥೆಗಳು ಇದ್ದಾಗ ಹೆಚ್ಚಿನ ಹೊಣೆ ಸಹಜವಾಗಿಯೇ ಬ್ರಾಹ್ಮಣರ ಮೇಲೆ ಹೊರಿಸಲ್ಪಡುತ್ತದೆ. ಬಹಿರಂಗವಾಗಿ ಜಾತಿಮುಕ್ತ ಸಮಾಜವಾಗಬೇಕೆಂದು ಹೇಳುತ್ತಲೇ ರಾಜಕೀಯ ಕಾರಣಗಳಿಗಾಗಿ ಜಾತೀಯತೆಯನ್ನು ಪೋಷಿಸುತ್ತ ಸಮಾಜವನ್ನು ವಿಭಜಿಸುವ ಮತ್ತು ಹಿಂದುಗಳ ನಡುವೆ ಶತಾಯಗತಾಯ ಒಡಕನ್ನು ಹುಟ್ಟಿಸಲು ಯತ್ನಿಸುವ ಶಕ್ತಿಗಳ ಬಗ್ಗೆ ಎಚ್ಚರಿಕೆಯನ್ನೂ ಲೇಖಕರು ನೀಡುತ್ತಾರೆ.

ಭಾರತೀಯ ಪರಂಪರೆಯಲ್ಲಿ ಸಮುದಾಯಗಳ ನಡುವಿನ ತಾರತಮ್ಯ ನಿವಾರಣೆ ಮಾಡಿ ಸಾಮರಸ್ಯ ಸಾಧಿಸುವ ನಿಟ್ಟಿನಲ್ಲಿ ಅನೇಕ ಚಿಂತಕರು ಶ್ರಮಿಸಿದ್ದುಂಟು. ಅಧ್ಯಾತ್ಮವನ್ನು ಈ ಸಾಮಾಜಿಕ ಉದ್ದೇಶಕ್ಕೆ ತಕ್ಕಮಟ್ಟಿನ ಯಶಸ್ಸಿನೊಂದಿಗೆ ಬಳಸಿದ ಬಸವಣ್ಣನವರಂತಹ ಸುಧಾರಣಾವಾದಿಗಳಿದ್ದಾರೆ. ಡಾ. ಅಂಬೆಡ್ಕರರ ಪ್ರಯತ್ನಗಳನ್ನು ಲೇಖಕರು ವಿಶೇಷವಾಗಿ ಉಲ್ಲೇಖಿಸಿದ್ದಾರೆ. ಅಸ್ಪೃಶ್ಯತೆಯಂತಹ ಅನಿಷ್ಠಗಳು ಕೇವಲ ದಲಿತರಿಗೆ ಹಾನಿಯುಂಟುಮಾಡಿಲ್ಲ; ಅದು ಅಂತಿಮವಾಗಿ ದೇಶವನ್ನೇ ನಾಶ ಮಾಡುವ ಅನಿಷ್ಠ. ಇಂತಹ ತಾರತಮ್ಯವನ್ನು ನಿವಾರಿಸಲು ಹಿಂದೂ ಮುಖಂಡರು ಮತ್ತು ಸಂಘಟನೆಗಳು ಹಲವು ವರ್ಷಗಳಿಂದ ಶ್ರಮಿಸಿವೆ. ಆದರೆ ಇನ್ನೂ ಕೆಲಸ ಪೂರ್ತಿಯಾಗಿಲ್ಲ.

ಲೇಖಕರು ಹೇಳುವಂತೆ, ದಲಿತ ಸಮಾಜದೊಳಗೆ ಜಾಗೃತಿಯನ್ನು ಮೂಡಿಸಲು, ಹೋರಾಟದ ಮನೋಭಾವವನ್ನು, ಹಕ್ಕಿನ ಪ್ರಜ್ಞೆಯನ್ನು ಮೂಡಿಸಲು ಆರಂಭವಾದ ಸಂಘಟನೆಗಳು ಹೋಳುಗಳಾದುದು ಮಾತ್ರವಲ್ಲ; ಕ್ರೈಸ್ತ ಮಿಷನರಿಗಳು ಮತ್ತು

ಕಮ್ಯುನಿಸ್ಟ್ ಪ್ರೇರಿತ ಐಡಿಯಾಲಜಿಗಳಿಂದ ಹೈಜಾಕ್ ಆಗಿರುವುದೂ ಗಮನಕ್ಕೆ ಬರುತ್ತಿದೆ. ಇಂಥ ಸನ್ನಿವೇಶದಲ್ಲಿ ಸಮಾಜವು ವಿಘಟಿತವಾಗದಂತೆ ನೋಡಿಕೊಳ್ಳುವುದು ತುಂಬ ಅಗತ್ಯವಿದೆ ಎನ್ನುವ ಆಶಯ ಲೇಖಕರದ್ದಾಗಿದೆ.

***

"ಪ್ರಾದೇಶಿಕತೆ ಮತ್ತು ರಾಷ್ಟ್ರೀಯತೆ– ಒಂದು ಚಿಂತನೆ" ಎನ್ನುವ ಕೊನೆಯ ಲೇಖನವನ್ನು ಎಂ.ಕೆ. ಶ್ರೀಧರನ್ ಮತ್ತು ಸತ್ಯನಾರಾಯಣ ಶಾನಭಾಗ ಬರೆದಿದ್ದಾರೆ. ಸಂವಿದಾನವನ್ನು ರಚಿಸುವಾಗ ದೇಶದ ಸರಕಾರ ಮತ್ತು ರಾಜ್ಯ ಸರಕಾರಗಳ ಜವಾಬ್ದಾರಿ ಏನು; ಅವುಗಳ ನಡುವೆ ಯಾವ ಯಾವ ವಿಷಯಗಳಲ್ಲಿ ಅಧಿಕಾರದ ಹಂಚಿಕೆ ಹೇಗೆ ಹೇಗೆ ಇರಬೇಕು ಎನ್ನುವುದನ್ನೆಲ್ಲ ಹೇಳಿದ್ದಾರೆ. ಆದರೆ, ಕಾಲಕಾಲಕ್ಕೆ ವಿವಿಧ ಕಾರಣಗಳಿಗಾಗಿ ಬದಲಾಗುವ ಸನ್ನಿವೇಶಗಳಲ್ಲಿ ಯಾವಾಗಲೋ ಮಾಡಿಟ್ಟ ಸಿದ್ಧ ಸೂತ್ರಗಳು ಕೆಲಸ ಮಾಡಲಾರವು ಎನ್ನುವುದು ನಿಜ. ಹಾಗಾಗಿ ಮತ್ತೆ ಮತ್ತೆ ಪ್ರಾದೇಶಿಕತೆಯ ಚರ್ಚೆಗಳು ಮುನ್ನೆಲೆಗೆ ಬರುತ್ತವೆ. ಪ್ರಾದೇಶಿಕ ಹಿತಾಸಕ್ತಿಯು ಇಡೀ ದೇಶದ ಹಿತಾಸಕ್ತಿಗಿಂತ ಭಿನ್ನವೇ ಎಂಬ ಮುಖ್ಯ ಪ್ರಶ್ನೆಯನ್ನು ಇಟ್ಟುಕೊಂಡು ಈ ಲೇಖನದಲ್ಲಿ ವಿವೇಚನೆ ಸಾಗಿದೆ.

ರಾಜ್ಯಗಳ ನಡುವೆ ನದಿ ನೀರು, ಗಡಿ ವಿವಾದ, ಭಾಷಾ ವಿವಾದ ಇತ್ಯಾದಿ ಸಂಘರ್ಷಗಳು ಇದ್ದಾಗ ಸಹಜವಾಗಿಯೇ ಸ್ಪರ್ಧೆ ಬೆಳೆಯುತ್ತದೆ. ದೇಶದ ಒಗ್ಗಟ್ಟಿಗೆ ಅಪ್ಪರಮಟ್ಟಿನ ಹೊಡೆತ ಬೀಳುತ್ತದೆ. ಇತ್ತೀಚೆಗಂತೂ ಕೆಲವು ರಾಜಕೀಯ ಉದ್ದೇಶಗಳನ್ನು ಈಡೇರಿಸಿಕೊಳ್ಳುವುದಕ್ಕಾಗಿ ಉತ್ತರದ ರಾಜ್ಯಗಳು ಮತ್ತು ದಕ್ಷಿಣದ ರಾಜ್ಯಗಳು ಎನ್ನುವ ವಿಭಾಗವನ್ನು ಮಾಡುವುದನ್ನು ಕಾಣುತ್ತಿದ್ದೇವೆ.

ರಾಷ್ಟ್ರೀಯತೆ ಮತ್ತು ರಾಷ್ಟ್ರವಾದದ ಬಗ್ಗೆ ಈ ದೇಶದಲ್ಲಿ ಕಟ್ಟಲಾದ ನರೆಟಿವ್ ಅನ್ನು ನಾವು ಮೊದಲು ವಿಮರ್ಶೆಗೆ ಒಳಪಡಿಸಬೇಕಿದೆ. ಭಾರತದಲ್ಲಿ ಪ್ರಾಚೀನ ಕಾಲದಿಂದಲೇ ಇದ್ದ 'ರಾಷ್ಟ್ರ' ಎನ್ನುವ ಪರಿಕಲ್ಪನೆಯನ್ನು ಪಶ್ಚಿಮದ ಸಂಕುಚಿತ ಅರ್ಥದ 'ನೇಶನ್' ಎನ್ನುವುದಕ್ಕೆ ಪರ್ಯಾಯವಾಗಿ ಬಳಸಿದಾಗಲೇ ಸಮಸ್ಯೆಯ ಆರಂಭವಾಯಿತು. ಪಶ್ಚಿಮದ ನ್ಯಾಶನಲಿಸಂ ಮತ್ತು ಭಾರತದ ರಾಷ್ಟ್ರವಾದ ಒಂದೇ ಅಲ್ಲ ಎನ್ನುವುದನ್ನು ಮೊದಲು ಅರ್ಥ ಮಾಡಿಕೊಳ್ಳಬೇಕು. ನೇಶನ್ ಎನ್ನುವ ಪದವು ಒಂದು ಬಾಷೆ/ಸಂಸ್ಕೃತಿಯನ್ನು ಹೊಂದಿದ ಸಮುದಾಯ ಎನ್ನುವ ಸಂಕುಚಿತ ಅರ್ಥದಲ್ಲಿ ಬಳಕೆಗೆ ಬಂದುದು. ಭಾರತದಲ್ಲಿ ರಾಷ್ಟ್ರದ ಕಲ್ಪನೆ ಹಾಗೆ ಸೀಮಿತವಾದುದಾಗಿರಲಿಲ್ಲ. ಈ ಹಿನ್ನೆಲೆಯಲ್ಲಿ ಈ ಲೇಖನದ ಮಹತ್ತ್ವವನ್ನು ಮನಗಾಣಬೇಕು.

ಭಾರತದಲ್ಲಿ ಭಾಷಾವಾರು ರಾಜ್ಯ ವಿಂಗಡನೆ, ಫೆಡೆರಲಿಸಂ ಸ್ವರೂಪ ಇವನ್ನೆಲ್ಲ ಚರ್ಚಿಸಿ ಅಮೆರಿಕದಂತಹ ದೇಶಗಳ ವ್ಯವಸ್ಥೆಯ ಜೊತೆ ಹೋಲಿಸಿ ಇಲ್ಲಿಯ ವ್ಯವಸ್ಥೆಯನ್ನು ಅರ್ಥೈಸಲು ಲೇಖನ ಯತ್ನಿಸುತ್ತದೆ. ಇಂಗ್ಲಿಷನ್ನು ಮುಂದಿಟ್ಟುಕೊಂಡು ಭಾರತೀಯ ಬಾಷೆಗಳನ್ನು ಕೀಳಾಗಿ ಕಂಡ ಬಗೆಯನ್ನು ಲೇಖನವು ಪ್ರಶ್ನಿಸುತ್ತದೆ.

ಲೇಖನದ ಮುಖ್ಯ ಭಾಗದಲ್ಲಿ ಪ್ರಾದೇಶಿಕ ಭಾವನೆಗಳು ಹುಟ್ಟಿ ಬೆಳೆಯಲು ಕಾರಣಗಳೇನು ಎಂದು ವಿವರಿಸಲಾಗಿದೆ. ದೆಹಲಿ ಕೇಂದ್ರಿತ ವ್ಯವಸ್ಥೆ, ರಾಜಕೀಯ ಪಕ್ಷಗಳ ಹೈಕಮಾಂಡ್ ಸಂಸ್ಕೃತಿ, ಪ್ರಾದೇಶಿಕ ಪಕ್ಷಗಳ ರಾಜಕೀಯ ಹಿತಾಸಕ್ತಿ, ಕೇಂದ್ರ ಸರಕಾರದ ಉದ್ಯೋಗಗಳಲ್ಲಿ ದಕ್ಷಿಣದ ರಾಜ್ಯದವರಿಗೆ ಕಡಿಮೆ ಅವಕಾಶಗಳು, ಹಿಂದಿ

ಭಾಷಿಕರ ಪ್ರಾಬಲ್ಯ, ತೆರಿಗೆ ಹಣದ ಹಂಚಿಕೆಯಲ್ಲಿ ಜನಸಾಂದ್ರತೆಯಿರುವ ಉತ್ತರದ ರಾಜ್ಯಗಳಿಗೆ ಆದ್ಯತೆ ಇವೆಲ್ಲ ಕಾರಣಗಳನ್ನು ಲೇಖಕರು ಚರ್ಚಿಸಿದ್ದಾರೆ.

ಕೇಂದ್ರ ಸರಕಾರವನ್ನು ನಡೆಸುವ ಪಕ್ಷದ ವಿರೋಧವೇ ಕೆಲವು ರಾಜ್ಯಗಳಲ್ಲಿ ಪ್ರಾದೇಶಿಕತೆ ಮತ್ತು ಪ್ರತ್ಯೇಕತೆಯ ಭಾವನೆಗೆ ಕುಮ್ಮಕ್ಕು ಸಿಗಲು ಕಾರಣವಾಗುವ ಸಂಗತಿಯನ್ನೂ ಲೇಖನವು ದಾಖಲಿಸಿದೆ. ದೇಶವಿರೋಧಿ ಪಿತೂರಿಗಾರರು ಇಂತಹ ಪ್ರಾದೇಶಿಕ ಭಾವನೆಯನ್ನು ತಮ್ಮ ಅನುಕೂಲಕ್ಕೆ ಬಳಸಿಕೊಳ್ಳುತ್ತಾರೆ. ಕಾಶ್ಮೀರಿ ಅನನ್ಯತೆ ಎನ್ನುವ ಒಂದು ಸುಳ್ಳು ಪರಿಕಲ್ಪನೆಯನ್ನು ಹೇಗೆ ಕೇವಲ ಅಲ್ಲಿಯ ಪ್ರತ್ಯೇಕತಾವಾದಿ ನಾಯಕರಷ್ಟೇ ಅಲ್ಲ; ಇಡೀ ದೇಶದ ತಥಾಕಥಿತ ಪ್ರಗತಿಪರರು ಮುಂದಿಡುತ್ತಿದ್ದಾರೆ ಎನ್ನುವುದನ್ನು ಕಾಣುತ್ತಲೇ ಇದ್ದೇವೆ. ಎಲ್ಲ ರಾಜ್ಯಗಳೂ ಸಂಸ್ಕೃತಿಗಳೂ ಅನನ್ಯವೇ. ರಿಲಿಜಿಯಸ್ ಪ್ರತ್ಯೇಕತೆಯನ್ನು ಬಿಟ್ಟರೆ ಕಾಶ್ಮೀರಿ ಅನನ್ಯತೆ ಎಂಬುದೊಂದು ಬೇರೆಯಿಲ್ಲ. ಹೀಗೆಲ್ಲ ಇರುವಾಗ ಪ್ರಾದೇಶಿಕತೆ ಮತ್ತು ರಾಷ್ಟ್ರೀಯತೆ ಮುಂತಾದ ಪರಿಕಲ್ಪನೆಗಳ ಬಗ್ಗೆ ಇನ್ನಷ್ಟು ವಿಶ್ಲೇಷಣೆಗಳು ನಡೆಯಬೇಕಿರುವುದು ಸ್ಪಷ್ಟ. ಅಪವ್ಯಾಖ್ಯಾನಗಳು ಮತ್ತು ಸುಳ್ಳನ್ನಾಧರಿಸಿದ ಆಖ್ಯಾನಗಳನ್ನು ಬಗೆದು ನೋಡುವುದು ಅಗತ್ಯ.

ಒಟ್ಟಿನಲ್ಲಿ ಪ್ರಾಂತಗಳ ಪ್ರಗತಿ ಮತ್ತು ದೇಶದ ಪ್ರಗತಿ ಬೇರೆಬೇರೆಯಲ್ಲ ಎನ್ನುವ ದೃಷ್ಟಿ ಈ ಲೇಖನದಲ್ಲಿದೆ.

***

ಒಂದು ವಿದ್ಯಮಾನದ ಇಂಟರ್‌ಪ್ರೆಟೇಶನ್ ಒಂದು ಆಖ್ಯಾನವಾಗಿ ರೂಪುಗೊಳ್ಳಬಹುದು. ಅಂತೆಯೇ 'ಮಿಸ್‌ಇಂಟರ್‌ಪ್ರೆಟೇಶನ್' ಕೂಡ ಒಂದು ಅಖ್ಯಾನವಾಗಿ ರೂಪುಗೊಳ್ಳಬಹುದು. ಮತ್ತು ಈ 'ಮಿಸ್‌ಇಂಟರ್‌ಪ್ರೆಟೇಶನ್' ಉದ್ದೇಶಪೂರ್ವಕವೂ ಆಗಿರಲು ಸಾಧ್ಯವಿದೆ. ಪ್ರವೇಶಿಕೆಯಲ್ಲಿ ಪ್ರದೀಪರು ಈ ಸಂಕಲನವನ್ನು ವಿಚಾರಪ್ರಧಾನವಾದ 'ಆಖ್ಯಾನಗಳ ಪರಿಚಯ ಪುಸ್ತಕ' ಎಂದು ಕರೆದಿದ್ದಾರೆ. ಈ ಸಂಕಲನದಲ್ಲಿ ವಿವಿಧ 'ನರೆಟಿವ್'ಗಳನ್ನು 'ಆಖ್ಯಾನ'ಗಳು ಎಂದು ಕರೆಯಲಾಗಿದೆ. ಸಂಸ್ಕೃತದಲ್ಲಿ ಆಖ್ಯಾನ ಮತ್ತು ಕಥನ ಎಂಬ ಎರಡೂ ಪದಗಳಿಗೂ ಹೆಚ್ಚು ಕಡಿಮೆ ಒಂದೇ ಅರ್ಥವಿದೆಯೆನಿಸುತ್ತದೆ. ಆದರೂ, ನರೆಟಿವ್‌ಗಳು ಸೇರಿ ಡಿಸ್ಕೋರ್ಸುಗಳು(ಸಂಕಥನಗಳು) ರೂಪುಗೊಳ್ಳುತ್ತವೆ ಎನ್ನುವ ಮಾತಿನ ಹಿನ್ನೆಲೆಯಲ್ಲಿ ಆಖ್ಯಾನಗಳನ್ನು ಕಥನಗಳು ಎಂದು ಕರೆಯುವುದು ಹೆಚ್ಚು ಯುಕ್ತವಾದೀತೇನೋ ಎನಿಸುತ್ತದೆ. ಯಾಕೆಂದರೆ ನರೆಟಿವ್‌ಗಳು ಎಷ್ಟೋ ಬಾರಿ ಕಟ್ಟಿದ ಕಥೆಗಳೇ ಆಗಿರುವುದೂ ಉಂಟು. ಕಥನ ಎಂಬುದು ಸಾಕಷ್ಟು ವರ್ಷಗಳಿಂದೀಚೆಗೆ ಕನ್ನಡದಲ್ಲಿ ಬಳಕೆಯಲ್ಲಿರುವ ಪದ್ಯವೂ ಹೌದು. ಅಲ್ಲದೆ ಅದು ಕನ್ನಡಕ್ಕೆ ಹೆಚ್ಚು ಒಗ್ಗುವ ಪದ ಕೂಡ ಆಗಿದೆ.

❖❖❖

ಅನುವಾದಿತ ಕಥೆಗಳ ಸಂಕಲನಗಳ ಆಶಯ, ಸ್ವರೂಪ : 1940ರ ದಶಕದ ಪ್ರಕ್ರಿಯೆಯ ಸಮೀಕ್ಷೆ

ಡಾ. ಎಂ.ಎಸ್. ದುರ್ಗಾಪ್ರವೀಣ
ಸಹ ಪ್ರಾಧ್ಯಾಪಕರು
ಕನ್ನಡ ಭಾಷೆ ಮತ್ತು ಅನುವಾದ ಅಧ್ಯಯನ ವಿಭಾಗ, ದ್ರಾವಿಡ ವಿಶ್ವವಿದ್ಯಾಲಯ,
ಶ್ರೀನಿವಾಸವನಂ–517426, ಕುಪ್ಪಂ, ಚಿತ್ತೂರು ಜಿಲ್ಲೆ, ಆಂಧ್ರಪ್ರದೇಶ

ಪ್ರಸ್ತುತ ಪತ್ರಿಕೆಯು ಅನುವಾದಿತ ಕಥೆಗಳು ಸಂಕಲನದ ರೂಪದಲ್ಲಿ ಪ್ರಕಟವಾಗುವ ಬಗೆಯನ್ನು ಪರಿಶೀಲಿಸುವ ಉದ್ದೇಶವನ್ನು ಹೊಂದಿದ್ದು ಇಲ್ಲಿ ಅಧ್ಯಯನದ ಅನುಕೂಲಕ್ಕಾಗಿ 1940ರ ದಶಕದ ಕೆಲವು ಪ್ರಾತಿನಿಧಿಕ ಸಣ್ಣಕಥೆಗಳ ಸಂಕಲನಗಳನ್ನು ಆಯ್ದುಕೊಳ್ಳಲಾಗಿದೆ. ಕನ್ನಡ ಸಾಹಿತ್ಯವು ಕ್ಷಿಪ್ರಗತಿಯ ಬೆಳವಣಿಗೆಯನ್ನು ಕಾಣುತ್ತಿದ್ದ ಈ ದಶಕದಲ್ಲಿ ಅನುವಾದಿತ ಕೃತಿಗಳ ಪಾತ್ರವನ್ನು ಇನ್ನಷ್ಟು ಸೂಕ್ಷ್ಮವಾಗಿ ಪರಿಶೀಲಿಸಬೇಕಾದ ಅಗತ್ಯವಿದೆ. ಒಟ್ಟು ಆಧುನಿಕ ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಅನುವಾದಗಳ ಚರಿತ್ರೆಯನ್ನು ಕಟ್ಟುವಲ್ಲಿ ಇಂತಹಾ ಹಲವು ಬಿಡಿವಿವರಗಳು ಅತ್ಯಂತ ಮಹತ್ವದ್ದಾಗುತ್ತವೆ. ನಿರ್ದಿಷ್ಟ ಸಾಹಿತ್ಯ ಪ್ರಕಾರಗಳ ಈ ಬಗೆಯ ಅಧ್ಯಯನವು ಸೂಕ್ಷ್ಮ ಒಳನೋಟಗಳನ್ನು ಒದಗಿಸುವುದರೊಂದಿಗೆ ನಿರ್ದಿಷ್ಟ ಕಾಲಘಟ್ಟ, ಪಂಥಗಳ ಅಭ್ಯಾಸಕ್ಕೆ ಪೂರಕವಾದ ಅಂಶಗಳನ್ನು ತೆರೆದಿಡಬಲ್ಲುವು. ಹಲವು ವಿಶಿಷ್ಟ ಸಂವೇದನೆಗಳನ್ನು ಲಭ್ಯವಾಗಿಸುವ ಅನುವಾದಿತ ಕಥೆಗಳು ಉದ್ದಿಷ್ಟ ಭಾಷೆಯ ಮೂಲಕಥೆಗಳ ವಸ್ತು, ಸಂವೇದನೆ, ಆಶಯ, ಸ್ವರೂಪವನ್ನೂ ಪ್ರಭಾವಿಸಬಲ್ಲವು. ಅಂದು ಜನಪ್ರಿಯವಾದ ಸಾಹಿತ್ಯ ಪ್ರಕಾರವಾಗಿ ಬೆಳೆಯುತ್ತಿದ್ದ ಸ್ವತಂತ್ರ ಕಥೆಗಳ ಜೊತೆಗೆ ಹಲವು ಆಯಾಮಗಳ ಅನುವಾದಿತ ಕಥೆಗಳೂ ಬರುತ್ತಿದ್ದು ಅವುಗಳನ್ನು ಪ್ರತ್ಯೇಕವಾಗಿ ಅಭ್ಯಸಿಸಬೇಕಾಗಿದೆ. ಈ ಹಿನ್ನೆಲೆಯಲ್ಲಿ ಇಂತಹಾ ಅನುವಾದಿತ ಕಥೆಗಳ ಸಂಕಲನಗಳು ಮುಖ್ಯವಾಗಿದ್ದು ಅವುಗಳು ರೂಪುಗೊಳ್ಳುವಲ್ಲಿನ ಆಶಯವನ್ನೂ ಕಂಡುಕೊಳ್ಳಬೇಕಾಗುತ್ತದೆ. ಇದು ಪ್ರಾರಂಭದಿಂದ ಇಂದಿನವರೆಗೂ ಪ್ರಕಟವಾಗುತ್ತಾ ಬಂದಿರುವ ಅನುವಾದಿತ ಕಥೆಗಳ ಒಟ್ಟು ಸ್ವರೂಪವನ್ನು ಗ್ರಹಿಸಿಕೊಳ್ಳುವಲ್ಲಿಯೂ ಸಹಾಯಕವಾಗುತ್ತದೆ.

ಅಂದಿನ ಸಂದರ್ಭದಲ್ಲಿ ಅನುವಾದಿತ ಕಥೆಗಳನ್ನು ಸಂಕಲನ ರೂಪದಲ್ಲಿ ನೀಡುವ ಬಗೆಯನ್ನು ಗಮನಿಸಿದಾಗ ಈ ಕೆಳಗಿನ ಮಾದರಿಗಳು ಕಂಡುಬರುತ್ತವೆ:

1. ಒಂದು ಮೂಲ ಭಾಷೆ– ಒಬ್ಬ ಕಥೆಗಾರರ ಸಣ್ಣಕಥೆಗಳ ಅನುವಾದಗಳ ಸಂಕಲನ
2. ಒಂದು ಮೂಲ ಭಾಷೆ– ಹಲವು ಕಥೆಗಾರರ ಸಣ್ಣಕಥೆಗಳ ಅನುವಾದಗಳ ಸಂಕಲನ
3. ಹಲವು ಮೂಲ ಭಾಷೆ– ಹಲವು ಕಥೆಗಾರರ ಸಣ್ಣಕಥೆಗಳ ಅನುವಾದಗಳ ಸಂಪಾದಿತ ಸಂಕಲನ
4. ಅನುವಾದ ಹಾಗೂ ಸ್ವತಂತ್ರ ಕಥೆಗಳ ಸಂಕಲನ

1. ಒಂದು ಮೂಲ ಭಾಷೆ– ಒಬ್ಬ ಕಥೆಗಾರರ ಸಣ್ಣಕಥೆಗಳ ಅನುವಾದಗಳ ಸಂಕಲನ

ಅನ್ಯ ಭಾಷೆಯಲ್ಲಿ ಪ್ರಸಿದ್ಧರಾದ ಕಥೆಗಾರರ ಕಥೆಗಳನ್ನು ಪತ್ರಿಕೆಗಳಲ್ಲಿ ಬಿಡಿಯಾಗಿ ಮತ್ತು ಸಂಕಲನರೂಪದಲ್ಲಿ ಇಡಿಯಾಗಿ ನೀಡುವ ಪ್ರಕ್ರಿಯೆ ನಲುವತ್ತರ ಹಿಂದಿನ ದಶಕಗಳಲ್ಲಿಯೂ ಕಾಣಿಸುತ್ತದೆ. ಅವು ಅನುವಾದ ಸಂಬಂಧೀ ಜಿಜ್ಞಾಸೆಗಳನ್ನು ಒಳಗುಮಾಡಿಕೊಂಡು ಬಂದಿರುವುದೂ ಇದೆ. ಇದಕ್ಕೆ ಉತ್ತಮ ಉದಾಹರಣೆ 1937ರಲ್ಲಿ ಪ್ರಕಟವಾದ ದೃಷ್ಟಿಕೋನ ಎಂಬ ಕಥಾ ಸಂಕಲನ. ವಿ.ಎಸ್ ಖಾಂಡೇಕರ ಅವರ ಕಥೆಗಳನ್ನು ವಿ.ಎಮ್.ಇನಾಮದಾರ ಅವರು ಅನುವಾದಿಸಿದ್ದು ಕರ್ನಾಟಕ ವೈಭವ ಪ್ರಕಟನಾ ಮಂದಿರ, ವಿಜಾಪುರದ ವೈಜಯಂತೀಮಾಲೆ ಕುಸುಮ ಒಂದರಡಿಯಲ್ಲಿ ಅದು ಸಂಕಲನವಾಗಿ ಪ್ರಕಟವಾಗಿದೆ. ಮರಾಠಿ ಮೂಲದಿಂದ ಕನ್ನಡಕ್ಕೆ ಬಂದಿರುವ ಕಥೆಗಳಿವು. ಈ ಸಂಕಲನದಲ್ಲಿ ಎರಡು ಚಿತ್ರಗಳು, ಅವಳ ಕಣ್ಣುಗಳು, ರಾತ್ರಿಯ ದಿವಸವಾದರೆ, ಕಲ್ಲೆದೆಯ ಕಂಬನಿಗಳು, ಚಂದ್ರಕಲೆ, ಸೇತುವೆ, ಕುರುಡನ ಭಾವಬಿದಿಗೆ, ದೃಷ್ಟಿಲಾಭ ಎಂಬ ಎಂಟು ಕತೆಗಳಿವೆ. ಅನುವಾದದ ಬಗ್ಗೆ ಹಲವು ಕುತೂಹಲಕರ ಮಾತುಗಳಿಲ್ಲಿವೆ. ಅಂದಿನ ಹೆಸರಾಂತ ಸಾಹಿತಿಯೊಬ್ಬರು ಭಾಷಾಂತರಕ್ಕಿಂತಲೂ, ಸಾಧಾರಣವಾದರೂ ಸ್ವತಂತ್ರ ಕೃತಿಯೇ ಶ್ರೇಯಸ್ಕರ, ಕನ್ನಡದಲ್ಲಿ ಭಾಷಾಂತರಗಳಿಗೆ ಸ್ಥಾನವಿಲ್ಲ ಎಂಬ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದು ಅದಕ್ಕುತ್ತರವಾಗಿ ವಿ.ಎಮ್. ಇನಾಮದಾರ ಅವರು ಇಲ್ಲಿ ಭಾಷಾಂತರ ಕಾರ್ಯ ಎಷ್ಟು ಮಹತ್ವದ್ದೆಂಬ ಸುದೀರ್ಘ ಸಮರ್ಥನೆ ನೀಡಿ ಪ್ರಸ್ತುತ ಕಥೆಗಳ ಮಹತ್ವವನ್ನು ಅಧಿಕಾರಯುತವಾಗಿ ವಿವರಿಸಿರುವುದು (ಖಾಂಡೇಕರ ವಿ.ಎಸ್.; 1937;ಪು.1–11) ಗಮನಸೆಳೆಯುತ್ತದೆ. ಆ ವೇಳೆಗೆ ಅನುವಾದದ ಬಗೆಗಿದ್ದ ಅಪಕಲ್ಪನೆಯನ್ನು ತೊಡೆದುಹಾಕುವ ಈ ಪ್ರಯತ್ನ ಮುಖ್ಯವಾದುದಾಗಿದೆ.

ಧಾರವಾಡದ ಮನೋಹರ ಗ್ರಂಥಭಾಂಡಾರದವರು 1942ರಲ್ಲಿ ಪ್ರಕಟಿಸಿದ ಗಾಯ್ ಡಿ. ಮೊಪಾಸಾನ ಕಥೆಗಳು ಈ ದೃಷ್ಟಿಯಿಂದ ಗಮನಿಸಬೇಕಾದಂತಹುದು. ಗೋವಿಂದ ವೆಂಕಟೇಶ ಚುಳುಕಿ ಈ ಕಥೆಗಳ ಅನುವಾದಕರಾಗಿದ್ದು ಇಲ್ಲಿ ಸೇಬು ಹಣ್ಣಿನ ಉಂಡಿ, ಹುಚ್ಚಿ, ಕಾಕೋಟಿ, ಗುರುಮಹಾರಾಜರು, ಸೋಡಚೀಟಿ, ಮೋಯಿರೋನ್, ತಪ್ಪು ತಿಳುವಳಿಕೆ, ದಳವಾಯಿಯ ದೂತ, ಚಕ್ರತೀರ್ಥ ಎಂಬ ಒಂಬತ್ತು ಕಥೆಗಳಿವೆ. "ಕಥೆಗಳ ಜೀವನ ಫ್ರಾನ್ಸ್ ದೇಶದ ಜೀವನ ಚಿತ್ರ; ಭಾಷೆ ಕನ್ನಡ", "ಕನ್ನಡ ಬಲ್ಲವರಿಗೆ ಇವನ ಕೃತಿಗಳ ದರ್ಶನವಾಗಬೇಕು" ಎಂಬ ಆಶಯ ಇಲ್ಲಿನದು. "ಇವನ ಕಥೆಗಳಲ್ಲಿ ಅತಿ ಶ್ರೇಷ್ಠವಾದ ಕೆಲವು ಕಥೆಗಳಿವೆ. ಅವುಗಳನ್ನು ಅನೇಕರು ಈಗಾಗಲೇ ಭಾಷಾಂತರಿಸಿ ಪ್ರಕಟಿಸಿದ್ದಾರೆ. ನಾನು ಮಾತ್ರ ಅವುಗಳನ್ನು ಬೇಕಂತಲೆ ಬಿಟ್ಟು ಬೇರೆಯವುಗಳನ್ನೇ ಆರಿಸಿದ್ದೇನೆ" ಎಂಬ ಅನುವಾದಕರ 'ನನ್ನ ನುಡಿ'ಯಲ್ಲಿ ಹೊಸದನ್ನು ಅನುವಾದದ ಮೂಲಕ ತರಬೇಕೆಂಬ ಭಾವ ಸ್ಪಷ್ಟವಾಗುತ್ತದೆ. ಇಂಗ್ಲೀಷ್ ಮೂಲವನ್ನಾಧರಿಸಿ ಈ ಅನುವಾದಗಳು ಬಂದಿವೆ. ಇಲ್ಲಿ ಮೊಪಾಸನ ಜೀವನಚಿತ್ರವನ್ನೂ ಸಂಕಲನದ ಪ್ರಾರಂಭದಲ್ಲಿ ನೀಡಲಾಗಿದೆ.

ತಮಿಳಿನಿಂದ ಈ ಅವಧಿಯಲ್ಲಿ ಅನೇಕ ಕಥೆಗಳು ಬಂದಿವೆ. ಮದರಾಸಿನ ಕಲೈಮಗಳ್ ತಮಿಳು ಮಾಸಿಕದ ಸಂಪಾದಕರಾಗಿದ್ದ ವಿದ್ವಾನ್ ಕೆ.ವಿ. ಜಗನ್ನಾಥ ಅವರ ಕಥೆಗಳನ್ನು ಶ್ರೀಮತಿ ಜಯಲಕ್ಷ್ಮೀ ಆರ್. ಶ್ರೀನಿವಾಸ ಅವರು 1943ರ ವೇಳೆಗೆ

ಕಲಾವಿದನ ತ್ಯಾಗ ಮತ್ತು ಇತರ ಕಥೆಗಳು ಎಂಬ ಹೆಸರಿನಲ್ಲಿ ಪ್ರಕಟಿಸಿದ್ದರು. ಇದರಲ್ಲಿ ಕಲಾವಿದನ ತ್ಯಾಗ, ಮಿಠಾಯಿಯವನು, ಯಾವಾಗ ಬರುವನು, ವಿಷ ಪರೀಕ್ಷೆ, ಪರಿವರ್ತನೆ, ನವರಾತ್ರಿಯ ಗೊಂಬೆ, ಅವಳು, ತೋಟದವನು, ನಂದಿ ಹೋದ ದೀಪ, ಮುದುಕಿಯ ನೆರಳು ಎಂಬ ಹತ್ತು ಕಥೆಗಳಿವೆ. ಅನುವಾದಕರು ತಮ್ಮ 'ಎರಡು ಮಾತು'ಗಳಲ್ಲಿ "ನಾವು ಸ್ವಂತವಾಗಿ ಬರೆಯುವುದು ಇದ್ದೇ ಇದೆ. ಇತರ ಭಾಷೆಗಳ ಸವಿಯೂಟವನ್ನು ಕನ್ನಡಿಗರಿಗೆ ಉಣಿಸಿ ಕನ್ನಡ ಭಾಷೆಯಲ್ಲಿ ಸಾಹಿತ್ಯ ರೂಪವನ್ನು ತಾಳಿರುವ ಮೃಷ್ಟಾನ್ನ ಭೋಜನವನ್ನು ಇತರ ಭಾಷೆಯವರಿಗೆ ಬಡಿಸಿ, ತನ್ಮೂಲಕ ಪರಸ್ಪರ ಬಾಂಧವ್ಯವನ್ನು ಬಲಪಡಿಸುವುದರಿಂದ ಭಾರತಮಾತೆಯು ಸಂತಸಗೊಳ್ಳುವಳೆಂದು ಮನಗಂಡೆನು" ಎಂದಿದ್ದಾರೆ. ಈ ಕಥೆಗಳಲ್ಲಿ ಕೆಲವು ಜಯಂತಿ, ಜಯಕರ್ಣಾಟಕ, ಛಾಯಾ, ವಾಣಿ, ಸರಸ್ವತಿ, ದೇಶಬಂಧು ಪತ್ರಿಕೆಗಳಲ್ಲಿ ಪ್ರಕಟವಾಗಿದ್ದವು. ಅನುವಾದದ ಕಡೆಗೆ ಹೆಚ್ಚುತ್ತಿರುವ ಒಲವೂ ಅಂದಿನ ಸಂಕಲನಗಳಲ್ಲಿ ವ್ಯಕ್ತವಾಗುತ್ತಾ ಹೋಗುತ್ತದೆ. ಅನುವಾದಕರು ಇಲ್ಲಿ "ಈಚೆಗೆ ಹಲವು ವರ್ಷಗಳಿಂದಲೂ ಅನುವಾದ ಕಾರ್ಯದ ಮೂಲಕವಾಗಿಯೂ ಸಹ ಶ್ರೇಷ್ಟ ರೀತಿಯಲ್ಲಿ ಸಾಹಿತ್ಯ ಸೇವೆ ಮಾಡಲು ಸಾಧ್ಯವುಂಟು ಎಂಬ ಹೆಬ್ಬಯಕೆಯುಂಟಾದುದು ಈ ಕಲಾವಿದನ ತ್ಯಾಗ ಎಂಬ ಅತ್ಯುತ್ಕೃಷ್ಟವಾದ ಕಥೆಯನ್ನು ಓದಿದಾಗಲೇ ಎಂದು ಧೈರ್ಯವಾಗಿ ಹೇಳಬಲ್ಲೆನು" ಎಂದಿರುವುದು ಇದೆ.

ರವೀಂದ್ರನಾಥ ಠಾಕೂರ್ ಅವರ ಕಾಬೂಲಿವಾಲಾ, ದೀದೀ, ದುಯಿ ಬೋನ್ ಎಂಬ ಮೂರು ಕಥೆಗಳು 'ಕಾಬೂಲಿವಾಲಾ ಮತ್ತು ಇತರ ಕಥೆಗಳು' ಎಂಬ ಸಂಕಲನವಾಗಿ 1945ರಲ್ಲಿ ಹುಬ್ಬಳ್ಳಿಯ ಸಾಹಿತ್ಯ ಭಾಂಡಾರದಿಂದ ಪ್ರಕಟವಾಯಿತು. ಇಲ್ಲೊಂದು ವಿಶಿಷ್ಟ ಅಂಶದ ದಾಖಲಾತಿಯಿದೆ. ಅ.ನಾರಾಯಣಸ್ವಾಮಿ ಅಯ್ಯರ್ ಅವರು ಮೂಲ ಬಂಗಾಳಿಯಿಂದಲೇ ನೇರವಾಗಿ ಇವನ್ನು ಅನುವಾದಿಸಿದ್ದು ಹತ್ತು ವರ್ಷಗಳ ಹಿಂದೆ ಇದೇ ಅನುವಾದಕರು ತಾವು ಹಿಂದಿಯಿಂದ ಕಥೆಗಳನ್ನು ಅನುವಾದಿಸಿ ರವೀಂದ್ರನಾಥ ಠಾಕೂರರ ಅನುಮತಿ ಬೇಡಿದಾಗ ಅವರು "ಬಂಗಾಳಿ ಮೂಲದಿಂದ ಕನ್ನಡಿಸಲು ತಮ್ಮ ಅಪ್ಪಣೆಯಿದೆಯೆಂದೂ ಹಿಂದೀ ಅನುವಾದದ ಅನುವಾದಕ್ಕೆ ತಮ್ಮ ಒಪ್ಪಿಗೆಯಿಲ್ಲವೆಂದೂ ತಿಳಿಸಿದ್ದರು." ಇದಕ್ಕೆ ಕಾರಣವಿದ್ದಿತು, ರವೀಂದ್ರರ ಬಂಗಾಳಿ ಕವನವೊಂದರ ಸಾಲು "ಆಮಿ ಹೊಬೊ ತೊಮಾರ್ ಮಾಲಂಚೇರ್ ಮಾಲಾಕಾರ್" ಎಂದಿದ್ದು "ನಾನು ನಿನ್ನ ಹೂದೋಟದ ಹೂವಾಡಿಗ(ಮಾಲೆಗಾರ)ನಾಗುವೆನು" ಎಂಬ ಅರ್ಥ ಹೊಂದಿತ್ತು. ಇದನ್ನು ಇಂಗ್ಲೀಷಿಗೆ ಅನುವಾದಿಸಿದವರು 'ಮಾಲೆಗಾರ' ಎಂಬುದನ್ನು 'ಗಾರ್ಡನರ್' ಎಂದು ಮಾಡಿಬಿಟ್ಟಿದ್ದರು, ಹಿಂದೀ ಅನುವಾದಕರು ಇದನ್ನು ಅನುಸರಿಸಿ 'ಮಾಲೀ' ಎಂದು ಮಾಡಿದರು, ಕನ್ನಡದಲ್ಲಿ ಇದು 'ತೋಂಟಿಗ' ಎಂದಾಗಿಬಿಟ್ಟಿತ್ತು. ಹೀಗಾಗಿ ಪ್ರಸ್ತುತ ನೇರ ಅನುವಾದದಲ್ಲಿ ಮೂಲದ ಭಾವ ಕೆಡದಂತೆ ಎಚ್ಚರವಹಿಸಿರುವುದಾಗಿ ಹೇಳಿದ್ದಾರೆ. "ಬಂಗಾಲಿಗಳಲ್ಲಿ ಗಂಡ ಹೆಂಡಿರು ಪರಸ್ಪರ ಸಂಭಾಷಣೆಗಳಲ್ಲಿ ಏಕವಚನ ಉಪಯೋಗಿಸುವರು. ನಮ್ಮವರಿಗೆ ಇದು ವಿಚಿತ್ರವಾಗಿ ಕಂಡೀತೆಂದು ಎಣಿಸಿ ಅವಶ್ಯವಾದೆಡೆ ಬಹುವಚನ ಉಪಯೋಗಿಸಿರುವೆನು" ಎಂದು ಮಾಡಿಕೊಂಡಿರುವ ಬದಲಾವಣೆಯ ಸ್ವರೂಪದ ಬಗ್ಗೆ ತಮ್ಮ 'ಮೊದಲ ಮಾತು'ಗಳಲ್ಲಿ ತಿಳಿಸಿದ್ದಾರೆ. ಈ ಅನುವಾದಗಳು ಸಂಕಲನವಾಗಿ ಪ್ರಕಟವಾಗುವುದಕ್ಕೆ ಕಾರಣಗಳೂ ಇಲ್ಲಿವೆ. "ಬಹುದಿನಗಳ ಹಿಂದೆ ಶ್ರೀಮಾನ್ ಆರ್.ವ್ಯಾಸರಾಯರೂ, ಧಾರವಾಡದ

ಗೆಳೆಯರ ಗುಂಪಿನವರೂ ಮೂಲದಿಂದ ಕನ್ನಡಿಸಿದ ಕೆಲವು ಕಥೆಗಳು ಪುಸ್ತಕವಾಗಿಯೂ, ಮಾಸಪತ್ರಿಕೆಗಳಲ್ಲಿಯೂ ಅಚ್ಚಾದವು. ಈಗ ಅವು ಸಿಕ್ಕುತ್ತಿಲ್ಲ. ಈಚೆಗೆ ಅಚ್ಚಾಗಿರುವ ರವೀಂದ್ರ ಕಥೆಗಳ ಒಂದೆರಡು ಸಂಗ್ರಹಗಳು ಇಂಗ್ಲೀಷು ಅಥವಾ ಹಿಂದಿಯಿಂದ ಕನ್ನಡಕ್ಕೆ ಬಂದವು" ಎಂದು ಸಂಕಲನದ ಸ್ವರೂಪದ ಬಗ್ಗೆಯೂ, ಮೂಲಭಾಷೆಯಿಂದ ನೇರವಾಗಿ ಕನ್ನಡಿಸಬೇಕಾದ ಅಗತ್ಯದ ಬಗ್ಗೆ ಹೇಳಿರುವುದು ಕಾಣಿಸುತ್ತದೆ.

ಹಿಂದಿಯ ಖ್ಯಾತ ಕಥೆಗಾರರಾದ ಪ್ರೇಮಚಂದ ಅವರ ಕಥೆಗಳನ್ನು ರಂ.ಶಾ.ಲೋಕಾಪುರ ಅವರು ಅನುವಾದಿಸಿದ್ದು 1947ರಲ್ಲಿ ಇದು ಗೃಹ–ದಾಹ ಮತ್ತು ಇತರ ಕಥೆಗಳು ಎಂಬ ಸಂಕಲನವಾಗಿ ಪ್ರಕಟವಾಗಿದೆ. ಗೃಹ–ದಾಹ, ವಿಕ್ರಮ ಸಿಂಹಾಸನ, ಸತ್ಯಾಗ್ರಹ, ಮುಕ್ತಿಮಾರ್ಗ, ಶಾಂತಿ, ಶಂಖನಾದ, ಡಿಕ್ರಿಯ ರೂಪಾಯಿಗಳು, ಬ್ಯಾಂಕಿನ ದಿವಾಳಿ ಎಂಬ ಎಂಟು ಕಥೆಗಳು ಇಲ್ಲಿವೆ. ಪ್ರತಿಭಾ ಗ್ರಂಥಮಾಲೆಯ ಸಂಪಾದಕರಾದ ಭಾಲಚಂದ್ರ ಘಾಣೇಕರ ಅವರು ತಮ್ಮ ಗ್ರಂಥಮಾಲೆಯ ಈ ಮೂರನೇ ವರ್ಷದಲ್ಲಿ ಮೂರು ಸಾಮಾಜಿಕ ಕಾದಂಬರಿಗಳು, ಒಂದು ನಾಟಕಗಳ ಸಂಗ್ರಹ, ಒಂದು ಕಥಾಸಂಗ್ರಹ, ಒಂದು ಸಾಹಸಮಯವಾದ ಜೀವನ ಚರಿತ್ರೆ, ಒಂದು ಐತಿಹಾಸಿಕ ಕಾದಂಬರಿ ಹೊರಬಂದಿದ್ದು 'ಈ ಸಾಹಿತ್ಯದಲ್ಲಿ ಅರ್ಧದಷ್ಟು ಸ್ವತಂತ್ರ, ಮಿಕ್ಕದು ಶ್ರೇಷ್ಠ ಕೃತಿಗಳ ಅನುವಾದಗಳು' ಎಂದಿರುವುದು ಗಮನಾರ್ಹ ಸಂಗತಿ.

2. ಒಂದು ಮೂಲ ಭಾಷೆ– ಹಲವು ಕಥೆಗಾರರ ಸಣ್ಣಕಥೆಗಳ ಅನುವಾದಗಳ ಸಂಕಲನ

ಶ್ರೀಮತಿ ಕುಂತಳ ಎಂಬ ಅನುವಾದಕರ ಅಕಾಲಿಕ ಮರಣದ ನಂತರ 1945ರಲ್ಲಿ ಪ್ರಕಟವಾದ ಅವರ ಕಥಾಸಂಕಲನ ವೀಣೆ ಭವಾನಿ ಮತ್ತು ಇತರ ಕಥೆಗಳು. "ಈ ದೇಶದ ಅನೇಕ ಭಾಷೆಗಳಲ್ಲಿ ಹೊಸ ರೀತಿಯ ಸಾಹಿತ್ಯವು ಹುಟ್ಟುತ್ತಾ ಇದೆ. ಪರಸ್ಪರ ವಿನಿಮಯದಿಂದ ಸಾಹಿತ್ಯದ ಪ್ರಗತಿಗೆ ಬಹು ಸಹಾಯವಾಗುತ್ತದೆಂದು ಹೇಳಬೇಕಾದುದೇ ಇಲ್ಲ. ತಮಿಳಿನಲ್ಲಿ ಪ್ರಚುರವಾಗುತ್ತಿರುವ ಪುಸ್ತಕಗಳನ್ನು ಕನ್ನಡಿಸಿ ಈ ರೀತಿ ಕನ್ನಡಿಗರಿಗೆ ಉಪಕಾರ ಮಾಡಿದವರಲ್ಲಿ ಕುಂತಳಮ್ಮನವರು ಒಬ್ಬರು" ಎಂದು 'ಪ್ರಕಾಶಕರ ಬಿನ್ನಹ'ದಲ್ಲಿ ಹೇಳಲಾಗಿದೆ. ಉತ್ಸಾಹಿ ಅನುವಾದಕರಾಗಿದ್ದ ಕುಂತಳವರು ಎಳೆಯ ವಯಸ್ಸಿನಲ್ಲಿಯೇ ತೀರಿ ಹೋದರು ಎಂಬ ಮಾಹಿತಿ ಇಲ್ಲಿದೆ. ಇವುಗಳಲ್ಲಿ ಕೆಲವು ವಿಶ್ವಕರ್ಣಾಟಕ ವಾರಪತ್ರಿಕೆಯಲ್ಲಿ ಪ್ರಕಟವಾಗಿದ್ದವು. ಇಲ್ಲಿ ಅಪೂರ್ಣವಾಗಿದ್ದ ಕೆಲವು ಭಾಗಗಳನ್ನು ಕುಂತಳಮ್ಮನವರ ಸಮೀಪ ಬಂಧುಗಳಾದ ಶ್ರೀ ಶಲ್ಲಮ್ಮನವರು ಪೂರ್ಣಗೊಳಿಸಿದ್ದಾರೆ. ಇಲ್ಲಿರುವ ಇದೆಂತಹ ಸ್ವರ್ಗ, ವೀಣೆ ಭವಾನಿ, ಮೂರು ತಿಂಗಳ ತುರಂಗವಾಸ ತಮಿಳಿನ ರಾ.ಕೃಷ್ಣಮೂರ್ತಿ(ಕಲ್ಕಿ)ಯವರ ಕಥೆಗಳ ಅನುವಾದಗಳಾಗಿವೆ. ಎಲ್ಲವೂ ಅವನೇ ಎಂಬುದು ಚಕ್ರವರ್ತಿ ರಾಜಗೋಪಾಲಾಚಾರ್ಯರ ಕಥೆಯ ಅನುವಾದವಾಗಿದೆ.

ಒಂದೇ ಮೂಲಭಾಷೆಯಿಂದ ಇಂಗ್ಲೀಷಿಗೆ ಬಂದ ಹಲವು ಕಥೆಗಾರರ ಕಥೆಗಳ ಸಂಕಲನವನ್ನು ಹಲವು ಅನುವಾದಕರು ಜೊತೆಗೂಡಿ ಕನ್ನಡಕ್ಕೆ ತಂದಿರುವುದಿದೆ. ಧಾರವಾಡದ ಮನೋಹರ ಗ್ರಂಥಮಾಲೆಯವರು 1949ರಲ್ಲಿ ಪ್ರಕಟಿಸಿದ ಚೀನದ ಬಾಳು–ಬದುಕು (ಚೀನೀ ಆಧುನಿಕ ಸಣ್ಣಕತೆಗಳ ಸಂಗ್ರಹ) ಈ ದೃಷ್ಟಿಯಿಂದ ಗಮನಾರ್ಹವಾದ ಸಂಕಲನ. ಇದನ್ನು ಇಂಗ್ಲೀಷಿಗೆ ತಂದ ಮೂಲ ಸಂಪಾದಕರು

ಎಡ್ಗರ್ ಸ್ನೋ. ಕನ್ನಡಕ್ಕೆ ಅನುವಾದಿಸಿ ನೀಡಿದವರು ದ.ರಾ.ಬೇಂದ್ರೆ, ಗು.ಜ.ಮಂಗಲಗಿ, ಕೀರ್ತಿ ಕುರ್ತಕೋಟಿ ಹಾಗೂ ವರಗಿರಿ. ಇಲ್ಲಿ ಕೀರ್ತಿನಾಥ ಕುರ್ತಕೋಟಿಯವರು ಕೀರ್ತಿ, ಕೀರ್ತಿ ಕುರ್ತಕೋಟಿ ಎಂಬ ಹೆಸರುಗಳನ್ನು ಬಳಸಿದ್ದಾರೆ. ಸಂಪಾದಕರಾದ ಜಿ.ಬಿ.ಜೋಶಿಯವರು 'ನಮ್ಮ ಮಾತು'ಗಳಲ್ಲಿ 'ವಿ.ಕೃ.ಗೋಕಾಕ್ ಅವರು ಇಂಗ್ಲೆಂಡಿಗೆ ಹೋಗಿದ್ದಾಗ ಈ ಸಂಕಲನದ ಅನುವಾದಕ್ಕೆ ಒಪ್ಪಿಗೆ ಪಡೆದುಕೊಂಡು ಬಂದಿದ್ದರು. ಆದರೆ ಕಾರಣಾಂತರಗಳಿಂದ ಹದಿಮೂರು ವರ್ಷಗಳ ನಂತರ ಅನುವಾದಗೊಂಡು, ಪ್ರಕಟಗೊಂಡಿತು... ಎಡ್ಗರ್ ಸ್ನೋ ಅವರ ಐದು ವರ್ಷಗಳ ಶ್ರಮದ ಫಲಿತ ಈ ಇಂಗ್ಲೀಷ್ ಅನುವಾದ ಸಂಕಲನ... ದ.ರಾ.ಬೇಂದ್ರೆಯವರೇ ಸಂಪೂರ್ಣ ಅನುವಾದವನ್ನು ಮಾಡಬೇಕೆಂಬ ಅಪೇಕ್ಷೆಯಿದ್ದರೂ ಅದು ಕೈಗೂಡದಿದ್ದಾಗ ಸಂಪಾದಕರ ಬೇಡಿಕೆಗೆ ಉಳಿದ ಅನುವಾದಕರು ಸ್ಪಂದಿಸಿ ಈ ಸಂಕಲನವನ್ನು ರೂಪಿಸಿದ್ದಾರೆ' ಎಂಬಿತ್ಯಾದಿ ಅಂಶಗಳನ್ನು ಪ್ರಸ್ತಾಪಿಸಿದ್ದಾರೆ. "ಇಂಗ್ಲೀಷಿನಲ್ಲಿಯೇ ಈ ತರಹದ ಪುಸ್ತಕ ಮೊದಲನೆಯದು ಎನ್ನುವಾಗ ಕನ್ನಡಕ್ಕೆ ಅದು ಮೊದಲನೆಯದು ಎಂದು ಬೇರೆಯಾಗಿ ಹೇಳಬೇಕಾಗಿಲ್ಲ" ಎಂದು ಅವರು ಹೇಳಿದ್ದಾರೆ. ಈ ಸಂಕಲನದಲ್ಲಿ ಮೊದಲಿಗೆ ಎಡ್ಗರ್ ಸ್ನೋ ಅವರ ಪ್ರಸ್ತಾವನೆಯ ಅನುವಾದವನ್ನು ಕುರ್ತಕೋಟಿಯವರು ನೀಡಿದ್ದಾರೆ, ಬಳಿಕ ಲು–ಶೂನ್ ಎಂಬ ಚೀನೀ ಕಥೆಗಾರನ ಪರಿಚಯವಿದ್ದು ಇದನ್ನು ವರಗಿರಿಯವರು ಅನುವಾದಿಸಿ ಕೊಟ್ಟಿದ್ದಾರೆ. ಭಾಗ ಒಂದು ಲು–ಶೂನರ ಕಥೆಗಳು ಎಂಬುದಾಗಿದ್ದು ಇದರಲ್ಲಿ ಏಳು ಕಥೆಗಳಿವೆ. ಈ ಭಾಗದಲ್ಲಿ ಬೇಂದ್ರೆಯವರು ನಾಲ್ಕು ಕಥೆಗಳನ್ನು, ವರಗಿರಿಯವರು ಮೂರು ಕಥೆಗಳನ್ನು ಅನುವಾದಿಸಿ ನೀಡಿದ್ದಾರೆ. ಭಾಗ ಎರಡು ಬೇರೆ ಲೇಖಕರ ಕಥೆಗಳು ಎಂಬುದಾಗಿದ್ದು ಇದರಲ್ಲಿ ಕಥೆಗಾರರಾದ ಜೊ–ವು–ಶೀ, ಮಾ–ವೊ–ಟನ್, ಟಿಂಗ್–ಲಿಂಗ್, ಪಾ–ಚಿನ್, ಶೇನ್–ಶುಂಗ್–ವೇನ್, ಸನ್–ಶಿ–ಚೈನ್, ಟೆನ್–ಚುನ್, ಲಿನ್–ಯು–ಟಯಾಂಗ, ಯು–ಟಾ–ಫೂ, ಕೌ–ಮೋ–ಜೊ, ಷಿ–ಮಿಂಗ್, ಚಾಂಗ್–ಶೆಯಿನ್–ಯಿ, ಶಿಯೊ–ಚೈನ್, ಶಾ–ಟಿಂಗ್ ಎಂಬವರ ಹದಿನೇಳು ಕಥೆಗಳಿವೆ. ಇಲ್ಲಿ ಮಂಗಲಗಿಯವರು ಐದು ಕಥೆಗಳನ್ನು, ಬೇಂದ್ರೆಯವರು ನಾಲ್ಕು ಕಥೆಗಳನ್ನು, ಕುರ್ತಕೋಟಿಯವರು ಎಂಟು ಕಥೆಗಳನ್ನು ಅನುವಾದಿಸಿ ನೀಡಿದ್ದಾರೆ. ಕೊನೆಯಲ್ಲಿ ಪುರವಣಿಯಾಗಿ ನೀಮ್ ವೇಲ್ಸರ ಆಧುನಿಕ 'ಚೀನೀ ಸಾಹಿತ್ಯದ ಆಂದೋಲನ' (ಪು.381–406) ಲೇಖನವನ್ನು ಕುರ್ತಕೋಟಿಯವರು ಅನುವಾದಿಸಿ ನೀಡಿದ್ದಾರೆ.

3. ಹಲವು ಮೂಲ ಭಾಷೆ–ಹಲವು ಕಥೆಗಾರರ ಸಣ್ಣಕಥೆಗಳ ಅನುವಾದಗಳ ಸಂಪಾದಿತ ಸಂಕಲನ

ಈ ವರ್ಗೀಕರಣವು ತುಸು ಭಿನ್ನವಾದುದು. ಇಲ್ಲಿ ಸಂಪಾದಕರು ಅನುವಾದಕರಲ್ಲ, ಅವರು ಅನುವಾದಗಳನ್ನು ಸಂಕಲಿಸಿ ನೀಡಿದವರು. 'ಅನುವಾದ ಪ್ರಯತ್ನಕ್ಕೆ ಒಂದು ಸಂಘಟಿತ ರೂಪ ಕೊಡುವ ಪ್ರಯತ್ನ'ವಾಗಿ ಕಾಮನಬಿಲ್ಲು – ಭಾಗ 2 (ಭಾರತೀಯ ಕಥಾ ಸಾಹಿತ್ಯ) ಸಂಕಲನವು ಅ.ನ. ಕೃಷ್ಣರಾಯ ಅವರ ಸಂಪಾದನೆಯೊಂದಿಗೆ 1945ರಲ್ಲಿ ಪ್ರಕಟವಾಯಿತು. ಹಲವು ಅನುವಾದಕರು ಇಲ್ಲಿದ್ದಾರೆ. "ಕನ್ನಡದಲ್ಲಿ ಪ್ರಕಟವಾಗುತ್ತಿರುವ ಅನುವಾದಿತ ಸಾಹಿತ್ಯ ತೃಪ್ತಿಕರವಾಗಿದೆಯೇ? ಅದು ನಿಜವಾಗಿಯೂ

ಪರಪ್ರಾಂತ್ಯ, ಪರದೇಶಗಳ ಸಾಂಸ್ಕೃತಿಕ ಪರಿಚಯವನ್ನು ನಮಗೊದಗಿಸುತ್ತಿದೆಯೇ ಎಂಬುದು ಚರ್ಚಾಸ್ಪದ. ಸಾಹಿತ್ಯ ನಿರ್ಮಾಣಕ್ಕೆ (ಅನುವಾದವೇ ಆದರೂ) ಸದಾಶೆಯೊಂದೇ ಸಾಲದು. ಬೆವರು ಹರಿಸುವ ಸಾಧನೆಯೂ ಬೇಕು. ಅನುವಾದದ ಕೆಲಸ ಹೆಚ್ಚು ಜವಾಬ್ದಾರಿಯನ್ನು ಹೊತ್ತಿದೆ. ಮೂಲಲೇಖಕನ ಸಂಹಾರವಾಗದ ಹಾಗೆ ಅನುವಾದಕ ಅವನ ಭಾವ, ರಸಗಳನ್ನು ಕನ್ನಡೀಕರಿಸಬೇಕಾಗುತ್ತದೆ. ಮೂಲ ಲೇಖಕನ ಭಾಷಾಪರಿಚಯವೂ ಇಲ್ಲದೇ ಮೂರನೆಯ ಭಾಷೆಯ ಅನುವಾದಗಳಿಂದ ಕನ್ನಡಕ್ಕೆ ಸಿದ್ಧಸಾಹಿತಿಗಳ ಕೃತಿಗಳನ್ನಿಳಿಸುತ್ತಿರುವುದು ವ್ಯಾಪಾರಶೀಲವೇ ವಿನಾ, ಶೀಲವ್ಯಾಪಾರವಲ್ಲ" ಎಂದು ಸಂಪಾದಕರು 'ಮೊದಲ ಮಾತು'ಗಳಲ್ಲಿ ಹೇಳಿದ್ದಾರೆ. ಪ್ರಸ್ತುತ ಸಂಕಲನದಲ್ಲಿ ನಿರ್ದಿಷ್ಟ ರೂಪುರೇಷೆಗಳಿಗನುಗುಣವಾಗಿ ಮೂಲಭಾಷೆಯಿಂದ ಕಥೆಗಳನ್ನು ಅನುವಾದಿಸಲಾಗಿದ್ದು ಒಂದು ಕಥೆ ಮಾತ್ರ ಇಂಗ್ಲೀಷ್ ಮೂಲಕವಾಗಿ ಬಂದಿದೆ. ಮೂಲದಿಂದ ಅನುವಾದಕರು ದೊರೆಯದ ಸಂದರ್ಭದಲ್ಲಿ ಕಥೆಗಳನ್ನು ಆಯ್ದುಕೊಂಡಿಲ್ಲ. ಆಯಾ ಸಾಹಿತ್ಯದ, ಮೂಲ ಲೇಖಕರ ಪರಿಚಯ ನೀಡಿ ಕಥೆಗಳನ್ನು ನೀಡಲಾಗಿದೆ. ಇದರಲ್ಲಿ ಅಸ್ಸಾಮಿಯಿಂದ ಲಕ್ಷ್ಮೀನಾಥ ಬೇಜ ಬರುವಾ ಅವರ ಭಾವರಿ ಕಥೆಯನ್ನು ಸೌ.ವಸಂತಾದೇವಿ, ಉರ್ದುವಿನಿಂದ ಮಹಮ್ಮದ್ ಮಜೀಬ್ ಅವರ ಹೊಸಮನೆ ಕಥೆಯನ್ನು ಗುರುನಾಥ ಜೋಶಿ, ಗುಜರಾತಿಯಿಂದ ಸೌ. ಲೀಲಾವತಿ ಮುನಿಷಿ ಅವರ ರಾಣಿಯ ಚಿತ್ರ ಕಥೆಯನ್ನು ಹ.ಪಿ. ಜೋಶಿ, ತಮಿಳಿನಿಂದ ತ.ನಾ.ಕುಮಾರಸ್ವಾಮಿಯವರ ಕಾನೂನು ಪರೀಕ್ಷೆ ಕಥೆಯನ್ನು ಸೌ. ಜಯಲಕ್ಷ್ಮೀ ಆರ್.ಶ್ರೀನಿವಾಸನ್, ತೆಲುಗಿನ ಚಿಂತಾ ದೀಕ್ಷಿತುಲು ಅವರ ಭಿಲ್ಲರ ರಾಣಿ ಕಥೆಯನ್ನು ಆ.ಶಿ.ಶಾಮಾಚಾರ್ಯ, ಬಂಗಾಳಿಯಿಂದ ಪ್ರಥಮನಾಥ ಚೌಧರಿಯವರ ಆಹುತಿ ಕಥೆಯನ್ನು ಅ.ನಾರಾಯಣಸ್ವಾಮಿ ಅಯ್ಯರ್, ಮರಾಠಿಯಿಂದ ವಿ.ಸ.ಖಾಂಡೇಕರ ಅವರ ಇಂದು–ನಾಳೆ ಕಥೆಯನ್ನು ಹ.ಪಿ.ಜೋಶಿಯವರು, ಮಲಯಾಳಂನಿಂದ ಎಸ್.ಕೆ. ಪೊಟ್ಟುಕಾಟ್ ಅವರ ಸಾವಿನ ದೋಟಿ ಕಥೆಯನ್ನು ಕಾರ್ಯಹಳ್ಳಿ ರಾಮಕೃಷ್ಣ ಶೆಟ್ಟಿಯವರು, ಹಿಂದಿಯಿಂದ ಪ್ರೇಮಚಂದ ಅವರ ದೊಡ್ಡವರ ಮನೆಯ ಹೆಣ್ಣು ಕಥೆಯನ್ನು ಗುರುನಾಥ ಜೋಶಿಯವರು ಅನುವಾದಿಸಿದ್ದಾರೆ.

4. ಅನುವಾದ ಹಾಗೂ ಸ್ವತಂತ್ರ ಕಥೆಗಳ ಸಂಕಲನ

ಕನ್ನಡದಲ್ಲಿ ಕಥಾಸಂಕಲನವನ್ನು ಪ್ರಕಟಿಸುವಾಗ ಸ್ವತಂತ್ರ ಕಥೆಗಳ ಜೊತೆಗೆ ಅನುವಾದಿತ ಕಥೆಗಳನ್ನು ನೀಡುವ ಬಗೆಯೂ ಕಾಣಿಸುತ್ತದೆ. ಉದಾಹರಣೆಗೆ ಆನಂದರ ಕೆಲವು ಕತೆಗಳು ಸಂಕಲನವು 1930ರಲ್ಲಿ ಮೊದಲ ಮುದ್ರಣ ಕಂಡಿದ್ದು 1944ರಲ್ಲಿ ಮರುಮುದ್ರಣವಾಗಿದೆ. ಇದರಲ್ಲಿ ಭವತಿ ಭಿಕ್ಷಾಂದೇಹಿ, ಸರಸಿಯ ಗೊಂಬೆ, ದೂರದ ಆಸೆ, ಮನೆಗೆ ಹೋದರು, ನಾವು ಹಾಗೆಯೇ ಎಂಬ ಐದು ಕಥೆಗಳಿವೆ. ಕಥಾ ಸಂಕಲನದ ಪರಿವಿಡಿಯಲ್ಲಿ 'ಮನೆಗೆ ಹೋದರು' ಎಂಬುದನ್ನು "ಮೇರಿ ಕೊರಲ್ಲಿ ಎಂಬ ಪ್ರಸಿದ್ಧ ಆಂಗ್ಲ ಕಾದಂಬರಿಕಾರಳ ಒಂದು ಸಣ್ಣ ಕಥೆಯು ಈ ಕತೆಗೆ ಮೂಲ" ಎಂದು ನಕ್ಷತ್ರ ಚಿಹ್ನೆಯೊಂದಿಗೆ ಕಂಸದಲ್ಲಿ ಸೂಚಿಸಲಾಗಿದೆ. ಆದರೆ ಮುನ್ನುಡಿಯಲ್ಲಿ ಈ ಬಗ್ಗೆ ಏನೂ ವಿವರಗಳಿಲ್ಲ, ಮೂಲ ಕಥೆಯ ಶೀರ್ಷಿಕೆಯೂ ಲಭ್ಯವಾಗುವುದಿಲ್ಲ. ಕಥೆಯ ಪ್ರಾರಂಭದಲ್ಲಿ "ಜವರಾಯ ನುಂಗಿದೀ ಹೆಣ್ಣುಮಗುವಿನಲಿ... ಹೆಣ್ಣುತನವೊಂದು"

ಎಂಬ ಶ್ರೀಯವರ ಕವಿತೆಯ ಆರು ಸಾಲುಗಳನ್ನು ನೀಡಲಾಗಿದ್ದು ಬಹುತೇಕ ಭಾವಾನುವಾದವು ಇಲ್ಲಿರುವಂತೆ ತೋರುತ್ತದೆ.

ರತ್ನಮ್ಮ, ಮದರಾಸು ಅವರ ದೇವಗಾನ ಕಥಾ ಸಂಕಲನವು 1947ರಲ್ಲಿ ಪ್ರಕಟವಾಗಿದೆ. ಇದರಲ್ಲಿ ಹದಿನಾಲ್ಕು ಕಥೆಗಳಿವೆ. ಮೊದಲನೆಯ ಕಥೆಯಾದ ದೇವಗಾನ ಮತ್ತು ಮತ್ತು ಕೊನೆಯದಾದ ಸತಿ ಸಾವಿತ್ರಿ ಸ್ವತಂತ್ರ ಕಥೆಗಳಾಗಿವೆ. ಗೋಪಾಲ ಬಾ, ಮೂಗುಬೊಟ್ಟು, ರೇಶನ್ನ, ತಾಯಿ, ಅತಿಥಿ, ಶುಕ್ರದೆಶೆ, ಮೂರನೇಗುಂಡಿ ಈ ಏಳು ಕಥೆಗಳು ತಮಿಳು ಕಥೆಗಳ ಭಾವಾನುವಾದಗಳಾಗಿವೆ. ನಾಲಿಗಿಲ್ಲದ ಗುಬ್ಬಿ, ಕಾಮಕಸ್ತೂರಿ ಕುಂಡೆ, ಹೆರವರ ವಿಲಾಸ, ಸುಖ, ಮಸುಕು ಈ ಐದು ಕಥೆಗಳು ಇಂಗ್ಲಿಷ್ ಮೂಲದವುಗಳಾಗಿವೆ. ಮೂಲ ಲೇಖಕರ ಹೆಸರು, ಮೂಲ ಕಥೆಗಳ ಶೀರ್ಷಿಕೆ ಇಲ್ಲಿಲ್ಲ. ಮೂಲಕ್ಕನುಗುಣವಾಗಿ ಬಂದಿದೆ ಎಂಬ ಪ್ರಕಾಶಕರ ಮಾತು ಇಲ್ಲಿದೆ. ಈ ಅನುವಾದಕರ ಬಂಗಾರದ ಬಳೆ ಎಂಬ ಕಥೆ ಮನೋಹರ ಗ್ರಂಥಭಾಂಡಾರದ ರಂಗವಲ್ಲಿ ಕಥಾ ಸಂಕಲನದಲ್ಲಿ ಪ್ರಕಟವಾಗಿತ್ತು ಎಂಬ ಮಾಹಿತಿಯಿದೆ. ಪ್ರಕಾಶಕರು ವರ್ಷಕ್ಕೆ ನಾಲ್ಕು ಪುಸ್ತಕಗಳನ್ನು ಚಂದಾದಾರರಿಗೆ ನೀಡುತ್ತಿದ್ದು ಅದರಲ್ಲಿ ಕೊನೆಯ ಪುಸ್ತಕವಾಗಿ ಇದು ಪ್ರಕಟವಾಗಿದೆ.

ಈ ಅವಧಿಯ ಅನುವಾದಿತ ಕಥೆಗಳ ಸಂಕಲನಗಳ ಸ್ವರೂಪವನ್ನು ಗಮನಿಸುವಾಗ ಹಲವು ಅಂಶಗಳು ಗೋಚರಿಸುತ್ತವೆ. ಇಲ್ಲಿ ಬಹುತೇಕ ಅನುವಾದಗಳಲ್ಲಿ ಮೂಲ ಕಥೆಗಳ ಹೆಸರುಗಳನ್ನು ಸೂಚಿಸಲಾಗಿಲ್ಲ. ಹಾಗೆಯೇ ಅನೇಕ ಕಡೆಗಳಲ್ಲಿ ಅನುವಾದಕರು ಮೂಲ ಭಾಷೆಯಿಂದ ನೇರವಾಗಿ ಅನುವಾದ ಮಾಡಿದ್ದಾರೆಯೇ ಅಥವಾ ಇತರ ಭಾಷೆಗಳ ಅನುವಾದವನ್ನಾಧರಿಸಿ ಕನ್ನಡಕ್ಕೆ ತಂದಿದ್ದಾರೆಯೇ ಎಂಬ ವಿಚಾರವೂ ಸ್ಪಷ್ಟವಾಗುವುದಿಲ್ಲ. ಅನುವಾದಕರ ವಿವರವಾದ ಮಾಹಿತಿಯು ಕೃತಿಗಳಲ್ಲಿ ಲಭ್ಯವಿಲ್ಲದಿರುವುದೂ ಒಂದು ಕೊರತೆಯಾಗಿದೆ. ಅಂದು ವಿವಿಧ ಪ್ರಕಾಶಕರು ಅನುಸರಿಸುತ್ತಿದ್ದ ಚಂದಾದಾರರಿಗೆ ವರ್ಷಕ್ಕೆ ಇಂತಿಷ್ಟು ಕೃತಿಗಳ ಕೊಡುಗೆ ಎಂಬ ಯೋಜನೆಯಡಿಯಲ್ಲಿ ಸ್ವತಂತ್ರ ಕೃತಿಗಳಂತೆ ಅನುವಾದಿತ ಕಥೆಗಳ ಸಂಕಲನಗಳೂ, ಅನುವಾದಿತ ಕಾದಂಬರಿಗಳೂ ಗಣನೀಯ ಪ್ರಮಾಣದಲ್ಲಿ ಪ್ರಕಟವಾಗಿವೆ ಎಂಬುದು ಕುತೂಹಲಕರ ಸಂಗತಿ. ಅಂದು ಪ್ರವರ್ಧಮಾನಕ್ಕೆ ಬರುತ್ತಿದ್ದ ಪ್ರಗತಿಶೀಲ ಸಾಹಿತ್ಯದ ಪ್ರಭಾವವೂ ಅನುವಾದ ಪ್ರಕ್ರಿಯೆಯ ಮೇಲಾಗಿರುವುದು ಇಲ್ಲಿ ಕಂಡುಬರುತ್ತದೆ. ಅಂದಿನ ಸಂದರ್ಭದ ಬಹಳಷ್ಟು ಅನುವಾದಿತ ಕಥೆಗಳು ಪ್ರಗತಿಶೀಲ ಆಶಯವನ್ನು ಒಳಗೊಂಡು ಬಂದಿರುವುದಿದೆ. ದಾಖಲೀಕರಣದ ದೃಷ್ಟಿಯಿಂದ ಮೂಲ ಕಥೆಗಳ ಮಾಹಿತಿ, ಪತ್ರಿಕೆಗಳಲ್ಲಿ ಪ್ರಕಟವಾದ ವಿವರಗಳಿದ್ದರೆ ಕನ್ನಡದ ನಿಯತಕಾಲಿಕಗಳು ಅನುವಾದಕ್ಕೆ ನೀಡಿರುವ ಕೊಡುಗೆಯನ್ನು ಅಭ್ಯಸಿಸಲೂ ಇವು ಉತ್ತಮ ಆಕರಗಳಾಗುತ್ತಿದ್ದವು. ಹೀಗಿದ್ದರೂ ಅನುವಾದಿತ ಕಥೆಗಳು ಈ ರೀತಿ ಸಂಕಲನಗಳಾಗಿ ಬಂದಿರುವುದರಿಂದ ದಶಕಗಳ ನಂತರವೂ ಸಹೃದಯರ ಓದಿಗೆ, ಅಧ್ಯಯನಕ್ಕೆ ಲಭ್ಯವಾಗುತ್ತಿವೆ, ಅವು ನಿರ್ದಿಷ್ಟ ಪಂಥ, ಪ್ರಕಾರಗಳ ವಿವಿಧ ವಿಚಾರಗಳನ್ನು ತೆರೆದಿಡುತ್ತವೆ ಎಂಬುದು ಗಮನಾರ್ಹ ಅಂಶವಾಗಿದೆ.

ಆಕರಸೂಚಿ

1. ಆನಂದ; 1944 (ದ್ವಿ.ಮು); ಕೆಲವು ಕಥೆಗಳು; ಸತ್ಯಶೋಧನ ಪ್ರಕಟನ ಮಂದಿರ, ಬೆಂಗಳೂರು
2. ಎಡ್ಗರ್ ಸ್ನೋ, ದ.ರಾ. ಬೇಂದ್ರೆ, ಗು.ಜ. ಮಂಗಲಗಿ, ಕೀರ್ತಿ ಕುರ್ತಕೋಟಿ, ವರಗಿರಿ (ಅನು); 1949; ಚೀನದ ಬಾಳು–ಬದುಕು (ಚೀನೀ ಆಧುನಿಕ ಸಣ್ಣಕತೆಗಳ ಸಂಗ್ರಹ); ಮನೋಹರ ಗ್ರಂಥಮಾಲೆ, ಧಾರವಾಡ
3. ಕೃಷ್ಣರಾಯ ಅ.ನ.(ಸಂ); 1945; ಕಾಮನಬಿಲ್ಲು–ಭಾಗ 2 (ಭಾರತೀಯ ಕಥಾ ಸಾಹಿತ್ಯ); ಕರ್ನಾಟಕ ಸಾಹಿತ್ಯ ಮಂದಿರ, ಧಾರವಾಡ
4. ಖಾಂಡೇಕರ ವಿ.ಎಸ್. ವಿ.ಎಮ್. ಇನಾಮದಾರ (ಅನು); 1937; ದೃಷ್ಟಿಕೋನ; ಕರ್ನಾಟಕ ವೈಭವ ಪ್ರಕಟನಾ ಮಂದಿರ, ವಿಜಾಪುರ
5. ಗಾಯ್ ಡಿ. ಮೊಪಾಸಾ, ಗೋವಿಂದ ವೆಂಕಟೇಶ ಚುಳುಕಿ(ಅನು); 1942; ಗಾಯ್ ಡಿ. ಮೊಪಾಸಾನ ಕಥೆಗಳು; ಮನೋಹರ ಗ್ರಂಥಭಾಂಡಾರ, ಧಾರವಾಡ
6. ಜಗನ್ನಾಥ ಕೆ.ವಿ, ಜಯಲಕ್ಷ್ಮೀ ಆರ್. ಶ್ರೀನಿವಾಸ (ಅನು); 1943; ಕಲಾವಿದನ ತ್ಯಾಗ ಮತ್ತು ಇತರ ಕಥೆಗಳು; ಸತ್ಯಶೋಧನ ಪ್ರಕಟನ ಮಂದಿರ, ಬೆಂಗಳೂರು
7. ದಿವಂ.ಶ್ರೀಮತಿ ಕುಂತಳ (ಅನು); 1945; ವೀಣೆ ಭವಾನಿ ಮತ್ತು ಇತರ ಕಥೆಗಳು; ಸತ್ಯಶೋಧನ ಪ್ರಕಟನ ಮಂದಿರ, ಬೆಂಗಳೂರು
8. ರವೀಂದ್ರನಾಥ ಠಾಕೂರ್, ನಾರಾಯಣಸ್ವಾಮಿ ಅಯ್ಯರ್ ಅ.(ಅನು); 1945; ಕಾಬೂಲಿವಾಲಾ ಮತ್ತು ಇತರ ಕಥೆಗಳು; ಸಾಹಿತ್ಯ ಭಾಂಡಾರ, ಹುಬ್ಬಳ್ಳಿ
9. ರತ್ನಮ್ಮ ಮದರಾಸು; 1947; ದೇವಗಾನ; ಸಂಜೀವಿನಿ ಪ್ರಕಾಶನ, ಹುಬ್ಬಳ್ಳಿ
10. ಪ್ರೇಮಚಂದ, ರಂ.ಶಾ. ಲೋಕಾಪುರ (ಅನು); 1947; ಗೃಹ–ದಾಹ ಮತ್ತು ಇತರ ಕಥೆಗಳು; ಪ್ರತಿಭಾ ಗ್ರಂಥಮಾಲೆ, ಧಾರವಾಡ

❖❖❖

ಅಲೆ ಬಂದು ಮುಟ್ಟಲು
ನೆಲವೊಂದು ಬೇಕು
ಮುಟ್ಟಿದಲೆ ಹಿಂದೆಗೆಯಲು
ಜಲದ ನೆಲೆಯೊಂದು ಬೇಕು.

ಸಂಶೋಧನೆಗಳಲ್ಲಿ ಕುಮಾರವ್ಯಾಸನ ಕಾಲ

ಓಬಳೇಶ ಎನ್ **ಡಾ. ಪಿ.ಎಂ ಗಂಗಾಧರಯ್ಯ**
ಸಂಶೋಧನಾ ವಿದ್ಯಾರ್ಥಿ ಮಾರ್ಗದರ್ಶಕರು
ಕನ್ನಡ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು

ಕನ್ನಡ ಸಾಹಿತ್ಯದಲ್ಲಿ ಕವಿಯ ಕಾಲವನ್ನು ನಿರ್ಣಯ ಮಾಡಲು ನಿರ್ದಿಷ್ಟವಾದ ಮಾನದಂಡಗಳಿಲ್ಲ. ವೈಜ್ಞಾನಿಕ ವಿಧಾನವೂ ಇಲ್ಲ. ಸ್ವತಃ ಬರಹಗಾರರು ಮತ್ತು ಅವರ ಬಗ್ಗೆ ಬೇರೆ ಕವಿಗಳು ಹೇಳಿಕೊಂಡಿಲ್ಲದ ಹೊರತು ನಮಗೆ ತಿಳಿಯುವುದಿಲ್ಲ. ಸ್ವಯಂ ವಿವರವನ್ನು ಉಲ್ಲೇಖಿಸದ ಕನ್ನಡದ ಬರಹಗಾರರಲ್ಲಿ ಕುಮಾರವ್ಯಾಸನು ಒಬ್ಬನು. ಈತನು ತನ್ನ ಕಾವ್ಯವಾದ 'ಕರ್ಣಾಟ ಭಾರತ ಕಥಾಮಂಜರಿ'ಯಲ್ಲಿ ಎಲ್ಲಿಯೂ ಸ್ವಂತ ವಿವರಣೆ ಹೇಳಿಕೊಂಡಿಲ್ಲ. ಮತ್ತು ವ್ಯಾಸರನ್ನು ಬಿಟ್ಟು ಬೇರೆ ಯಾವ ಕವಿಯನ್ನು ಸ್ಮರಿಸಿಲ್ಲ. ಈತನ ಕೃತಿಯು ಕನ್ನಡ ಸಾಹಿತ್ಯದಲ್ಲಿ ಮಹತ್ವದ್ದು ಆಗಿರುವುದರಿಂದ ಹಾಗೂ ಸಾಹಿತ್ಯದಲ್ಲಿ ದೇಶ-ಕಾಲದ ವಿವೇಚನೆ ಬಹುಮುಖ್ಯವೂ ಆಗಿರುವುದರಿಂದ ಕುಮಾರವ್ಯಾಸನ ಕಾಲದ ಬಗ್ಗೆ ಸಾಕಷ್ಟು ಸಂಶೋಧನೆ, ಅಧ್ಯಯನಗಳು ನಡೆದಿವೆ. ನಿಂತಿಲ್ಲ. ಕುಮಾರವ್ಯಾಸನ ಕಾಲದ ಕುರಿತು ನಡೆದ ಸಂಶೋಧನೆ ಮತ್ತು ಅಧ್ಯಯನಗಳ ತಾತ್ವಿಕತೆಯನ್ನು ವಿಶ್ಲೇಷಿಸುವುದು ಈ ಲೇಖನದ ಮುಖ್ಯ ಉದ್ದೇಶ.

ಕುಮಾರವ್ಯಾಸನ ಕಾಲದ ಕುರಿತು ರೈಸ್-ಕಿಟ್ಟೆಲ್‌ರಿಂದ, ಧನಂಜಯ ಕುಂಬ್ಳೆಯವರೆಗೆ ದೊಡ್ಡ ಮಟ್ಟದ ಸಂಶೋಧನೆ, ಅಧ್ಯಯನಗಳಾಗಿದ್ದರೂ ಸ್ಪಷ್ಟವಾದ ತೀರ್ಮಾನಕ್ಕೆ ಬರಲಾಗಿಲ್ಲ. ಇಂತಹ ಸಂದರ್ಭದಲ್ಲಿ ಹೊಸದಾಗಿ ಅಧ್ಯಯನ ನಡೆಸುವ ಅಥವಾ ಸಂಶೋಧನೆ ನಡೆಸುವವರಿಗೆ ಸಹಜವಾಗಿಯೇ ಕಾಡುವ ಪ್ರಶ್ನೆಯೆಂದರೆ ಸಂಶೋಧನೆ ಎಂದರೇನು? ಇಷ್ಟು ಸಂಶೋಧನೆ, ಅಧ್ಯಯನಗಳಿಂದ ಕುಮಾರವ್ಯಾಸನ ಕಾಲ ನಿರ್ಣಯವಾಗಿಲ್ಲವೆಂದರೆ ಇಂತಹ ಸಂಶೋಧನೆಗಳ ಉಪಯುಕ್ತತೆ ಏನು? ಆಥವಾ ಇಂತಹ ಸಂಶೋಧನೆಗಳಿಂದ ಯಾವ ರೀತಿಯ ಜ್ಞಾನ ಸೃಷ್ಟಿಯಾಗುತ್ತದೆ? ಎಂಬ ಪ್ರಶ್ನೆಗಳು ಎದುರಾಗುತ್ತವೆ. ಸಂಶೋಧನೆ ಎಂದರೆ ಇರುವುದರಲ್ಲೇ ಹುಡುಕುವುದು ಎಂಬುದನ್ನು ಆದರ್ಶವಾಗಿಟ್ಟುಕೊಂಡು ಎಷ್ಟು ದಿನಗಳವರೆಗೆ ಅಲ್ಲೆ ಸುತ್ತುವುದು. ಅದೇ ಅಚ್ಯುತರಾಯನ ಶಾಸನ, ಅದೇ ತಿಮ್ಮಣ್ಣ ಕವಿಯ ಕೃಷ್ಣರಾಜ ಭಾರತ, ಅದೇ ಭಾಸ್ಕರ, ಅದೇ ಕುಮಾರವಾಲ್ಮೀಕಿ, ಅದೇ ದೇವರಾಯ, ಅದೇ ಕೃಷ್ಣರಾಯ. ಚಾರಿತ್ರಿಕ ಕ್ರಮದಲ್ಲಿ ನೋಡಿದರೂ ಅದೇ ಹೊಯ್ಸಳ, ಅದೇ ಸೇವುಣ, ಅದೇ ವಿಜಯನಗರ. ಇವುಗಳ ಜೊತೆಗೆ ಕುಮಾರವ್ಯಾಸ ಭಾರತದಲ್ಲಿ ಕೆಲವು ಪದಗಳನ್ನು ಬಿಡಿಸಿ ಬಿಡಿಸಿ ಸಂಶೋಧಕರಿಗೆ ಸರಿಯೆನಿಸಿದ ಅರ್ಥಗಳನ್ನು ಆರೋಪಿಸಿ ಕಾಲವನ್ನು ನಿರ್ಣಯಿಸಿಬಿಟ್ಟಿದ್ದಾರೆ. ಆದರೂ ಕಾಲ ನಿಶ್ಚಯವಾಗಿಲ್ಲ. ಅವುಗಳನ್ನು ಸಂಕ್ಷಿಪ್ತವಾಗಿ ನೋಡಬಹುದು.

ರೈಸ್ ಮತ್ತು ಕಿಟ್ಟೆಲ್ಲರು ಕುಮಾರವ್ಯಾಸನ ಕಾಲವನ್ನು ತಿಮ್ಮಣ್ಣ ಕವಿಯ ಕರ್ಣಾಟ

ಕೃಷ್ಣರಾಯ ಭಾರತದ ಪೀಠಿಕೆಯಲ್ಲಿನ 'ಲೇಸೆನಿಸಿ ಮೊದಲಾ ಕುಮಾರವ್ಯಾಸ ದಶಪರ್ವಗಳ ಹೇಟಿದ ಭಾರತದ ಉಟಿದ ಪರ್ವಗಳ ನೀ ಸಕಲಜನ ಮೆಚ್ಚುವಂತೆ ಪೇಟು' ಎಂಬುದರ ಆಧಾರದ ಮೇಲೆ ಕೃಷ್ಣದೇವರಾಯನ(ಕ್ರಿ.ಶ 1509–1529) ಆಳ್ವಿಕೆಯ ಆರಂಭದಲ್ಲಿ ಹುಟ್ಟಿತೆಂದು ಹೇಳುತ್ತಾರೆ. ಇದಕ್ಕೆ ಪ್ರತಿಕ್ರಿಯಿಸುತ್ತಾ ಆರ್ ನರಸಿಂಹಚಾರ್ ಅವರು "ಮೊದಲಾ ಕುಮಾರವ್ಯಾಸ ಎಂದು ಇರುವುದರಿಂದ ಹಾಗೂ ಗುರುರಾಜಚರಿತ್ರೆ ಮತ್ತು ಚೊರಬಸವಚರಿತ್ರೆಗಳಲ್ಲಿನ ಚಾಮರಸ–ಕುಮಾರವ್ಯಾಸರ ಕತೆಯ ಆಧಾರದ ಮೇಲೆ ಕುಮಾರವ್ಯಾಸನ ಕಾಲವನ್ನು 1430 ಎಂದು ನಿರ್ಧರಿಸಿದ್ದಾರೆ. ಅಲ್ಲದೆ ವಿಜಯನಗರದ ದೇವರಾಯನ ಆಳ್ವಿಕೆಯಲ್ಲಿದ್ದನೆಂದು ಹೇಳಿದ್ದಾರೆ." ಇದನ್ನು ಟಿ ಎನ್ ಸುಬ್ಬಾರಾಯ ಶಾಸ್ತ್ರಿಗಳು ಒಪ್ಪದೆ ಅವನು ವಿಜಯನಗರದ ದೇವರಾಯನಲ್ಲವೆಂದೂ 12ನೇ ಶತಮಾನದಲ್ಲಿದ್ದ ಯಾವನೋ ಸಾಮಾನ್ಯ ದೇವರಾಯನೆಂದು ಅಲ್ಲಗೆಳದಿದ್ದಾರೆ.

ಗೋವಿಂದ ಪೈರವರು ಕುಮಾರವ್ಯಾಸ ಭಾರತದಲ್ಲಿನ "ಬುದ್ಧ, ಲಿಂಗಿ, ಸಮುದ್ರಹೊಸಲ, ಸಾಯಣ, ಲಾಮಚದ ಬಲ್ಲಾಳ, ಬಲ್ಲಾಳ ನಾಥ, ಮತ್ತು ಅಚ್ಯುತರಾಯನ ಶಾಸನಗಳಿಂದ ಕುಮಾರವ್ಯಾಸನ ಕಾಲ ಕ್ರಿ.ಶ 13ನೇ ಶತಮಾನದ ಪೂರ್ವಾರ್ಧವೆಂದು ತೀರ್ಮಾನಿಸಿದ್ದಾರೆ." ಶ.ಕ ಕೋಳಿವಾಡರು ಕೋಳಿವಾಡದ ಕಾಗದ ಪತ್ರಗಳ ಆಧಾರದ ಮೇಲೆ ಕುಮಾರವ್ಯಾಸನ ಕಾಲವನ್ನು ಕ್ರಿ.ಶ 1425 ರಿಂದ 1455 ಎಂದು ಹೇಳುತ್ತಾರೆ. ಸುಜನಾ ಅವರು ಭಾಸ್ಕರನ ಜೀವಂಧರ ಚರಿತ್ರೆಯಲ್ಲಿ ಬಹುವಾಗಿ ಕುಮಾರವ್ಯಾಸನನ್ನು ಅನುಸರಿಸಿದ್ದಾನೆ. ಆದ್ದರಿಂದ 1423ರಲ್ಲಿ ಕೃತಿ ರಚಿಸಿದ ಭಾಸ್ಕರನಿಗಿಂತ 50–100 ವರ್ಷ ಮುನ್ನವೆ ಕುಮಾರವ್ಯಾಸನಿದ್ದ ಎಂಬುದು ನಮ್ಮ ನಿಲುವು ಎಂದಿದ್ದಾರೆ. ಇದಕ್ಕೆ ಪ್ರತಿಕ್ರಿಯೆಯಾಗಿ ಎಚ್ ದೇವಿರಪ್ಪನವರು "ಭಾಸ್ಕರನ ಕಾಲವೇ ಅನಿಶ್ಚಿತವಾಗಿರುವಾಗ ಆ ಅನಿಶ್ಚಿತ ಕಾಲಕ್ಕೆ ಹಿಂದೆಯೋ ಮುಂದೆಯೋ ಕುಮಾರವ್ಯಾಸನಿದ್ದನು ಎಂದು ಆ ಒಂದೇ ಆಧಾರದ ಮೇಲೆ ಹೇಳುವುದು ಸೂಕ್ತವೆ ಅಲ್ಲವೆ ಎಂಬುದು ಯೋಚನೆ ಮಾಡತಕ್ಕ ವಿಚಾರ ಎಂದಿದ್ದಾರೆ.

ಆರ್ ಎಸ್ ಪಂಚಮುಖಿಯವರು ಮೇವುಂಡಿ ಶಾಸನ, ವೀರನಾರಯಣ ದೇವಾಲಯದಲ್ಲಿರುವ ಕುಮಾರವ್ಯಾಸನ ಕಂಬ, ಕುಮಾರವ್ಯಾಸ ಭಾರತ, ಐರಾವತ, ತಿಮ್ಮಣ್ಣ ಕವಿಯ ಉಲ್ಲೇಖ ಹಾಗೂ ಚಾಮರಸ–ಕುಮಾರವ್ಯಾಸರ ಸಮಕಾಲೀನತ್ವದ ಸಿದ್ಧಾಂತಗಳ ಆಧಾರದ ಮೇಲೆ ಕುಮಾರವ್ಯಾಸನ ಕಾಲವನ್ನು 1480 ರಿಂದ 1520 ಎಂದು ತೀರ್ಮಾನಿಸಿದ್ದಾರೆ. ದ.ರಾ ಬೇಂದ್ರೆಯವರು 'ಕವಿಯ ಹರಿಕತೆ' ಎಂಬ ಲೇಖನದಲ್ಲಿ ಕೋಳಿವಾಡದ ಕಾಗದ ಪತ್ರಗಳ ಆಧಾರದ ಮೇಲೆ ಕುಮಾರವ್ಯಾಸನ ಕಾಲವನ್ನು ಕ್ರಿ.ಶ 1482 ರಿಂದ 1520 ಎಂದು ಹೇಳಿದ್ದಾರೆ. ಸದಾನಂದ ನಾಯಕರು ಕನ್ನಡ ಸಾಹಿತ್ಯದಲ್ಲಿ ಕುಮಾರವ್ಯಾಸರು ಮೂರು ಜನರೆಂದೂ ಅವರ 1242 ರಿಂದ 1515ರ ವರೆಗೆ ಇದ್ದರೆಂದೂ, ಮೂರು ಜನ ಸೇರಿ ಕರ್ಣಾಟ ಭಾರತ ಕಥಾಮಂಜರಿಯನ್ನು ಬರೆದರೆಂದು ಹೇಳಿದ್ದಾರೆ. ಕೆ.ಆರ್ ಶೇಷಗಿರಿಯವರು ತಿಮ್ಮಣ್ಣ ಕವಿಯ ಹೇಳಿಕೆ ಮತ್ತು ಕುಮಾರವ್ಯಾಸ ಭಾರತದ ಅತ್ಯಂತ ಹಳೇಯ ಪ್ರತಿಯಾದ 1554ನ್ನು ಆಧಾರವಾಗಿಟ್ಟುಕೊಂಡು ಕುಮಾರವ್ಯಾಸನ ಕಾಲವನ್ನು 1430 ರಿಂದ 1500ರ ಗಡುವಿನಲ್ಲಿರಬೇಕು ಎಂದಿದ್ದಾರೆ.

ನಾ.ಶ್ರೀ ರಾಜಪುರೋಹಿತರು ಒಂದು ಬಖೈರಿನ ಆಧಾರದ ಮೇಲೆ

ಕುಮಾರವ್ಯಾಸನ ಕಾಲವನ್ನು ಕ್ರಿ.ಶ 1509 ರಿಂದ 1522 ಎಂದು ಹೇಳಿದ್ದಾರೆ. ರಂ ಶ್ರೀ ಮುಗಳಿ ಕುಮಾರವ್ಯಾಸನ ಕಾಲದ ಕುರಿತ ಮೇಲಿನ ಎಲ್ಲ ಅಭಿಪ್ರಾಯಗಳನ್ನು ಅಲ್ಲಗೆಳದು ಭಾಸ್ಕರನ ಜೀವಂಧರ ಚರಿತ್ರೆಯ ಆಧಾರದ ಮೇಲೆ ಕುಮಾರವ್ಯಾಸನ ಕಾಲವನ್ನು ಕ್ರಿ.ಶ 1400 ಎಂದು ನಿರ್ಧರಿಸುತ್ತಾರೆ.

ಸೀತಾರಾಮ ಜಾಗಿರ್‌ದಾರರು 1998ರಲ್ಲಿ ಬರೆದ ಕುಮಾರವ್ಯಾಸ ಒಂದು ಅಧ್ಯಯನ ಎಂಬ ತಮ್ಮ ಸಂಶೋಧನಾ ಕೃತಿಯಲ್ಲಿ ಆವರೆಗಿನ ಎಲ್ಲರ ಅಭಿಪ್ರಾಯಗಳನ್ನು ವಿಮರ್ಶಿಸಿದ್ದಾರೆ. ಕುಮಾರವ್ಯಾಸನ ಕಾವ್ಯದಲ್ಲಿನ ಸೇವುಣ ರಾಯ ರಾವುತರು, ನಂದ ನಂದನ ಸನ್ನಭ ಮತ್ತು ಯಾದವ ಚಕ್ರವರ್ತಿ ಎಂಬ ಪಾಠಗಳನ್ನು ಮುಖ್ಯವಾಗಿರಿಸಿಕೊಂಡು ಕುಮಾರವ್ಯಾಸನ ಕಾಲವನ್ನು ಕ್ರಿ.ಶ 1230 ರಿಂದ 1276 ಎಂದು ಹೇಳಿದ್ದಾರೆ. ಕುಮಾರವ್ಯಾಸನು ದೇವಗಿರಿಯ ಯಾದವರ ಕಾಲದ ಕೃಷ್ಣನ ಆಶ್ರಿತ ಅಥವಾ ಇಬ್ಬರಿಗೂ ಸಂಬಂಧವಿತ್ತು ಎಂಬ ಅರ್ಥದಲ್ಲಿ ಬರೆದಿದ್ದಾರೆ. ಆದರೆ ಕುಮಾರವ್ಯಾಸ ಕೇವಲ ಸೇವುಣ ರಾಯ ರಾವುತರನ್ನು ಮಾತ್ರವೇ ಹೇಳದೆ ಕಾಶ್ಮೀರ ರಾವುತರು, ಗುಜ್ಜರ ರಾವುತರು, ಮಾಳವದ ರಾವುತರು, ಗೌಳ ರಾವುತರು, ಕರ್ಣಾಟ ರಾವುತರು, ತಿಗಳ ರಾವುತರು, ಹಮ್ಮೀರ ರಾವುತರು ಕೊಂಗ ಕಳಿಂಗದ ರಾವುತರ ಯುದ್ಧ ತಂತ್ರಗಳನ್ನು ಹೇಳಿದ್ದಾನೆ. ಶ್ರೀಯುತರು ಇದನ್ನು ಗಮನಿಸಿದಂತೆ ಕಾಣುವುದಿಲ್ಲ.

ಶ್ರೀನಿವಾಸ ಹಾವನೂರರು 2009ರಲ್ಲಿ ಕುಮಾರವ್ಯಾಸನ ಕಾಲ ನಿರ್ಣಯ ಎಂಬ ಲೇಖನದಲ್ಲಿ ತಮಿಳಿನ ವಿಲ್ಲಿಭಾರತಕ್ಕೆ ಕುಮಾರವ್ಯಾಸನ ಕನ್ನಡ ಭಾರತದ ಪ್ರಭಾವವಿರುವುದನ್ನು ಗುರುತಿಸಿ ಕುಮಾರವ್ಯಾಸನ ಕಾಲವನ್ನು 13ನೆ ಶತಮಾನದ ಉತ್ತರಾರ್ಧ ಎಂದು ತಿಳಿಸಿದ್ದಾರೆ. ಅದೇ ರೀತಿ ಧನಂಜಯ ಕುಂಬ್ಳೆಯವರು 2012ರಲ್ಲಿ "ಕುಮಾರವ್ಯಾಸನ ಕಾಲ ನಿರ್ಣಯ ಹೊಸ ಬೆಳಕು" ಎಂಬ ಸಂಶೋಧನ ಕೃತಿಯಲ್ಲಿ ಅವರೆಗಿನ ಕುಮಾರವ್ಯಾಸನ ಕಾಲದ ಕುರಿತ ಚರ್ಚೆಯನ್ನು ದಾಖಲಿಸಿದ್ದಾರೆ. ತುಳು ಕವಿ ಅರುಣಾಬ್ಜನ ಮಹಾಭಾರತೊ ಕೃತಿಗೆ ಕುಮಾರವ್ಯಾಸ ಭಾರತ ಮಾರ್ಗದರ್ಶಕ ಕೃತಿಯಂತೆ ಆಕರವಾಗಿದೆ ಎಂದಿದ್ದಾರೆ. ಆದ್ದರಿಂದ ಅರುಣಾಬ್ಜನ ಮಹಾಭಾರತೊ 1383ರಲ್ಲಿ ರಚನೆಯಾಗಿದ್ದು, ಕುಮಾರವ್ಯಾಸ 13ನೆ ಶತಮಾನದ ಉತ್ತರಾರ್ಧದಲ್ಲಿ ಬದುಕಿರಬಹುದು ಎಂದು ತಿಳಿಸಿದ್ದಾರೆ.

ಮೇಲಿನ ಎಲ್ಲಾ ಅಧ್ಯಯನಕಾರರು ಕುಮಾರವ್ಯಾಸನ ಕಾಲ ನಿರ್ಣಯದ ಬಗ್ಗೆ ಇರಬಹುದಾದ ಸಾಧ್ಯತೆಗಳನ್ನೆಲ್ಲ ಪರಿಶೀಲಿಸಿದ್ದಾರೆ. ಆದರೆ ಸಾಧುವಾಗಿಲ್ಲ ಅಷ್ಟೆ. ಇದು ಅಧ್ಯಯನ ಕ್ರಮದ ಸಮಸ್ಯೆಯೇ ಹೊರತು ಅಧ್ಯಯನಕಾರರ ಸಮಸ್ಯೆಯಲ್ಲ. ಈ ವಿಚಾರದಲ್ಲಿ ಎಲ್ಲರೂ ಪುಟ್ಟಪ್ಪನವರ ಮಾತನ್ನು ಒಪ್ಪಬೇಕಾಗುತ್ತದೆ. "ಒಟ್ಟಿನಲ್ಲಿ ನಾವು ಸಿದ್ಧಪಡಿಸಿರುವುದು ಜನಪ್ರಿಯ ಪ್ರತಿ ಮಾತ್ರ. ಸಂಶೋಧಿತ ವಿಶುದ್ಧ ಪ್ರತಿ ಬರದತನಕ ಕುಮಾರವ್ಯಾಸನ ನಿಜಸ್ವರೂಪದ ಸಂಪೂರ್ಣದರ್ಶನವಾಗುವುದಿಲ್ಲ, ಹಾಗೆ ಮಾಡಲು ಅತ್ಯಂತ ಪ್ರಾಚೀನವಾದ ಹಾಗೂ ಗದುಗಿನ ಸುತ್ತಮುತ್ತಣ ಪ್ರದೇಶದಲ್ಲಿ ದೊರೆಯಬಹುದಾದ ಪ್ರತಿಗಳನ್ನೆಲ್ಲಾ ಸಂಗ್ರಹಿಸಬೇಕು. 14–15ನೆ ಶತಮಾನದ ಶಾಸನಗಳನ್ನೆಲ್ಲಾ ಸಂಗ್ರಹಿಸಿ ಅಭ್ಯಸಿಸಬೇಕು. ಇದು ಒಂದೆರಡು ದಶಕದ ನಾಲ್ಕಾರು ವಿದ್ವಾಂಸರ ಕೆಲಸ". ಹಾಗೆಯೇ ವೈ.ಸಿ ಭಾನುಮತಿಯವರು ಹೇಳಿರುವಂತೆ "ಕುಮಾರವ್ಯಾಸ ಭಾರತಕ್ಕೆ ಸಂಬಂಧಿಸಿದಂತೆ ಹಸ್ತಪ್ರತಿಗಳ ಸಂಗ್ರಹಕಾರ್ಯ

ಕರ್ನಾಟಕದಾದ್ಯಂತ ನಡೆಯಬೇಕಾಗಿದೆ. ಹೊಸ ಪ್ರತಿಗಳು ಸಿಕ್ಕಿದ ಹಾಗೆಲ್ಲ ಪಾಠಗಳಲ್ಲಿನ ಉತ್ತಮಿಕೆಯನ್ನು ಸಾಧಿಸಲು ಅವಕಾಶವಾಗುತ್ತದೆ. ಲಭ್ಯವಾಗುವ ಹಸ್ತಪ್ರತಿಗಳನ್ನೆಲ್ಲ ಸಂಗ್ರಹಿಸಬೇಕು. ಸೂಕ್ತಂಕರ್, ಎಡ್ಗರ್ಟನ್ ಮೊದಲಾದ ವಿದ್ವಾಂಸರ ಮಾರ್ಗವನ್ನನುಸರಿಸಿ ಹಸ್ತಪ್ರತಿಗಳನ್ನು ಪ್ರಾದೇಶಿಕವಾಗಿ ವಿಂಗಡಿಸಿಕೊಳ್ಳಬೇಕು. ಉಪಲಬ್ಧ ಹಸ್ತಪ್ರತಿಗಳಲ್ಲಿ ಕಾಣಸಿಗುವ ಪಾಠಬೇಧಗಳನ್ನೆಲ್ಲ ದಾಖಲಿಸುವುದು ಅತ್ಯಂತ ಜರೂರಾದುದು. ಈ ಬಗೆಯ ಪೂರ್ವಸಿದ್ದತೆಗಳ ಬಳಿಕವೇ ಕುಮಾರವ್ಯಾಸ ಭಾರತದಲ್ಲಿನ ಪ್ರಕ್ಷೇಪ, ಕ್ಲೀಷ್ಟಪಾಠಗಳ ಬಗ್ಗೆ ಖಚಿತ ನಿಷ್ಕರ್ಷೆ ಸಾಧ್ಯವಾಗುತ್ತದೆ." ಈ ರೀತಿಯ ಕೆಲಸಗಳಾಗದ ಹೊರತು ಕುಮಾರವ್ಯಾಸನ ಕಾಲದ ಬಗ್ಗೆಯಾಗಲಿ, ಕುಲದ ಬಗ್ಗೆಯಾಗಲಿ, ಕೃತಿಯ ಬಗ್ಗೆಯಾಗಲಿ ಸ್ಪಷ್ಟ ತಿರ್ಮಾನಕ್ಕೆ ಬರಲು ಸಾಧ್ಯವಾಗುವುದಿಲ್ಲ.

ಕಾಲ ನಿರ್ಣಯ ಮಾಡಲು ವಿಜ್ಞಾನ ಮತ್ತು ಪುರಾತತ್ವ ಜ್ಞಾನ ಶಿಸ್ತುಗಳಲ್ಲಿ ತಂತ್ರಜ್ಞಾನ ಮುಂದುವರೆದಷ್ಟು ಸಾಹಿತ್ಯ ಕ್ಷೇತ್ರದಲ್ಲಿ ಆಗಿಲ್ಲ. ರೇಡಿಯೋ ಕಾರ್ಬನ್ ಪದ್ದತಿಯ ಮೂಲಕ ಒಂದು ಮರ ಯಾವ ಕಾಲದ್ದು ಎಂದು ನಿರ್ಧರಿಸುವ ಹಾಗೆ ಕನ್ನಡದಲ್ಲಿ ಹಸ್ತಪ್ರತಿಗಳನ್ನು ಸ್ಕ್ಯಾನ್ ಮಾಡಿದ ನಂತರ ಆ ಹಸ್ತಪ್ರತಿ ಯಾವ ಕಾಲದ್ದು ಎಂದು ಹೇಳುವ ಯಾವ ತಂತ್ರಾಂಶವೂ ಇಲ್ಲ. ಸದ್ಯಕ್ಕೆ ಕುಮಾರವ್ಯಾಸನ ಕಾಲವನ್ನು ನಿರ್ಣಯಿಸಲು ಈವರೆಗೂ ಬಳಸಿಕೊಂಡಿರುವ ಆಧಾರಗಳು ಹೀಗಿವೆ. 1) ಕುಮಾರವ್ಯಾಸನ ಕಾವ್ಯದಲ್ಲಿನ ಪೂರ್ವಕವಿಗಳ ಅನುಸರಣೆ ಮತ್ತು ಇತರ ಕವಿಗಳ ಮೇಲೆ ಕುಮಾರವ್ಯಾಸ ಭಾರತದ ಪ್ರಭಾವ 2) ಶಾಸನ ಆಧಾರಗಳು 3) ವೀರಶೈವ ಗ್ರಂಥಗಳಲ್ಲಿನ ಚರಿತ್ರೆ 4) ಗ್ರಂಥದ ಅಂತರ್ ಸಾಕ್ಷ್ಯಗಳು 5) ಗ್ರಂಥದ ಭಾಷಿಕ ಅಂಶಗಳು 6) ಕೋಳಿವಾಡದ ಕಾಗದ ಪತ್ರಗಳು. ಇಷ್ಟೆಲ್ಲ ಸಾಕ್ಷ್ಯಗಳನ್ನು ಬಳಸಿಕೊಂಡು ಸಂಶೋಧನೆ, ಚರ್ಚೆಗಳು ನಡೆದಿದ್ದರೂ ಕಾಲ ನಿಷ್ಪನ್ನ ಸ್ಪಷ್ಟವಾಗಿಲ್ಲ.

ಕಾಲ ನಿರ್ಣಯ ಮಾಡಬೇಕಾದರೆ ಒಂದೋ ಕವಿಯೇ ತನ್ನ ಕೃತಿಯಲ್ಲಿ ಸ್ವಯಂ ವಿವರಣೆ ನೀಡಿರಬೇಕು ಪಂಪನ ತರ. ಇಲ್ಲವೇ ಕವಿಯ ಸಮಕಾಲೀನರಾಗಲೀ ಅಥವಾ ನಂತರದವರಾಗಲೀ ಅವರ ಕೃತಿಗಳಲ್ಲಿ ಅಥವಾ ಶಾಸನಗಳಲ್ಲಿ ದಾಖಲಿಸಿರಬೇಕು. ಇಲ್ಲದಿದ್ದರೆ ಕಾಲ ನಿರ್ಣಯ ಸಾಧ್ಯವಾಗುವುದಿಲ್ಲ. ಕವಿಯು ತನ್ನ ಕಾವ್ಯದಲ್ಲಿ ಬಳಸಿರುವ ಭಾಷೆಯಿಂದಾಗಲಿ, ಭಾಷೆಯ ಸ್ವರೂಪದಿಂದಾಗಲಿ ಮತ್ತು ಸಮಕಾಲೀನ ತತ್ವಗಳಿಂದಾಗಲಿ ಸ್ಪಷ್ಟವಾದ ತಿರ್ಮಾನಕ್ಕೆ ಬರಲು ಸಾಧ್ಯವಿಲ್ಲ. ಒಂದು ವೇಳೆ ಸಾಧ್ಯವಾದರೂ 1300 ರಿಂದ 1400ರ ಗಡಿಯಲ್ಲಿ ಬಂದಿರಬಹುದು ಎಂಬಂತಹ ಅಭಿಪ್ರಾಯಗಳಿಗೆ ಬರಬಹುದು ಅಷ್ಟೆ. ಇನ್ನು ಸಮಕಾಲೀನ ಅಥವಾ ನಂತರದ ಕವಿಗಳ ಉಲ್ಲೇಖಗಳಿಂದಲೂ ಸ್ಪಷ್ಟವಾದ ತಿರ್ಮಾನಕ್ಕೆ ಬರಲು ಸಾಧ್ಯವಿಲ್ಲ. ಉದಾ: ಕುಮಾರವಾಲ್ಮೀಕಿ, ತಿಮ್ಮಣ್ಣ ಕವಿ (ಕ್ರಿ.ಶ.1510) ಮತ್ತು ಅಚ್ಯುತರಾಯನ (ಕ್ರಿ.ಶ 1539) ಶಾಸನಗಳಲ್ಲಿ ಕುಮಾರವ್ಯಾಸನ ಉಲ್ಲೇಖವಿದೆ. ನಂತರದ ಸಾಕಷ್ಟು ಕವಿಗಳೂ ಉಲ್ಲೇಖಿಸಿದ್ದಾರೆ ಆದರೆ ಕುಮಾರವ್ಯಾಸನ ಕಾಲದ ಮೇಲಿನ ಗಡುವು ತಿಮ್ಮಣ್ಣ ಕವಿಯ ಉಲ್ಲೇಖವಾಗಿರುವುದರಿಂದ ಇಲ್ಲಿ ಇಷ್ಟು ಸಾಕು. ಇದರಿಂದ ಕುಮಾರವ್ಯಾಸ ಮೇಲಿನ ಉಲ್ಲೇಖಗಳ ಸಮಕಾಲೀನವಾಗಿರಲು ಸಾಧ್ಯವಿರಬಹುದು. ಅಥವಾ ಅದಕ್ಕಿಂತ ಮುನ್ನ ಇದ್ದಿರಬೇಕು. ಸಮಕಾಲೀನನಾದರೆ ಎಷ್ಟು ವರ್ಷಗಳ ಸಮಕಾಲೀನ? ಅದಕ್ಕೂ ಮುನ್ನವಾಗಿದ್ದರೆ ಎಷ್ಟು ವರ್ಷ ಮುಂಚಿನವನು? ಇದನ್ನು

ನಿರ್ಧರಿಸಲು ಯಾವ ಮಾನದಂಡಗಳೂ ಇಲ್ಲ.

ಕುವೆಂಪು ಮತ್ತು ವೈ ಸಿ ಭಾನುಮತಿಯವರು ಹೇಳಿದ ರೀತಿ ಹೆಚ್ಚಿನ ಸಂಶೋಧನೆ, ಅಧ್ಯಯನಗಳು ನಡೆಯುವವರೆಗೂ ಕುಮಾರವ್ಯಾಸನ ಕಾಲದ ಬಗ್ಗೆ ಸ್ಪಷ್ಟವಾದ ತೀರ್ಮಾನಕ್ಕೆ ಬರಲು ಸಾಧ್ಯವಿಲ್ಲ. ಆದ್ದರಿಂದ ಇದಕ್ಕೆ ಪೂರಕವಾದ ಸಂಶೋಧನೆಗಳನ್ನು ಹೊರತು ಪಡಿಸಿ, ಮೇಲಿನ ರೀತಿಯಲ್ಲಿ ಸಂಶೋಧನೆಗಳು ನಡೆದರೆ ಅವುಗಳಿಂದ ಎಂಥಹ ಫಲಿತಾಂಶ ಸಿಗುತ್ತದೆ ಎಂದು ಊಹಿಸಬಹುದು. ಇಲ್ಲದಿದ್ದರೆ ಮೊದಲ ತಲೆಮಾರಿನವರಿಂದ ಸೃಷ್ಟಿಯಾದ 13ರಿಂದ 15ನೇ ಶತಮಾನವೆಂಬ ಕುಮಾರವ್ಯಾಸನ ಕಾಲದ ಊಯ್ಯಾಲೆಯನ್ನು ಎಲ್ಲರೂ ತೂಗುತ್ತಲೇ ಇರುತ್ತಾರೆ.

ಸಾಹಿತ್ಯದಲ್ಲಿ ಕವಿಯ ಕಾಲ ವಿಚಾರ ಅಗತ್ಯ ಮತ್ತು ಮಹತ್ವದ್ದು. ಕಾಲದಿಂದ ಕವಿಯ ಐತಿಹಾಸಿಕ, ಧಾರ್ಮಿಕ ಮುಖ್ಯವಾಗಿ ಸಾಂಸ್ಕೃತಿಕ ಅಂಶಗಳು ನಿರ್ಧಾರವಾಗುತ್ತವೆ. ಸಮಕಾಲೀನ ಸಂಸ್ಕೃತಿಗೆ ಕವಿಯ ಪ್ರತಿಸ್ಪಂದನೆ ಮತ್ತು ಆ ಸಂಸ್ಕೃತಿಯಲ್ಲಿ ಕವಿಯ ಒಳಗೊಳ್ಳುವಿಕೆಯನ್ನು ಗುರುತಿಸಬಹುದು. ಅಲ್ಲದೆ ಕೃತಿಯ ವಸ್ತು, ಭಾಷೆ, ಮತ್ತು ಸಾಂಸ್ಕೃತಿಕ ಅಂಶಗಳು ಸಮಕಾಲೀನ ಒತ್ತಡಗಳಿಂದ ಸ್ಫೂರ್ತಿಗೊಂಡಿರುತ್ತವೆ. ಈ ಎಲ್ಲಾ ಕಾರಣಗಳಿಂದ ಕಾಲ ನಿರ್ಣಯ ಅತೀ ಮುಖ್ಯವಾಗುತ್ತದೆ. ಇದುವರೆಗಿನ ಸಾಂಪ್ರದಾಯಿಕ ಸಂಶೋಧನಾ ವಿಧಾನಗಳಿಂದ ಕುಮಾರವ್ಯಾಸನಂತೆ ಹಲವು ಕವಿಗಳ ಕಾಲ ನಿರ್ಧಾರವಾಗಿಲ್ಲ. ಆದ್ದರಿಂದ ಸಾಂಪ್ರಾದಾಯಿಕ ವಿಧಾನದ ಜೊತೆಗೆ ಹೊಸ ವೈಜ್ಞಾನಿಕ ಮಾದರಿಯ ವಿಧಾನಗಳ ಅವಶ್ಯಕತೆಯಿದೆ. ಕನ್ನಡ ಸಾಹಿತ್ಯದಲ್ಲಿ ಹಸ್ತಪ್ರತಿಗಳು ಜ್ಞಾನ ಬಂಡಾರಗಳಂತೆ ಅವುಗಳನ್ನು ಸಂಶೋಧಿಸುವ ಮತ್ತು ಸಂರಕ್ಷಿಸುವ ಅಗತ್ಯವಿರುವುದರಿಂದ ತಂತ್ರಜ್ಞಾನದ ಬಳಕೆಯೂ ಅತ್ಯವಶ್ಯಕವಾಗಿದೆ. ಈ ನಿಟ್ಟಿನಲ್ಲಿ ಮುಂದಿನ ಸಂಶೋಧನೆಗಳು ಸಾಗಬೇಕಾಗಿರುವುದು ಸೂಕ್ತವೆನಿಸುತ್ತದೆ.

ಪರಾಮರ್ಶನ ಗ್ರಂಥಗಳು

1. ಭಾನುಮತಿ ವೈ.ಸಿ, 2004, ಗ್ರಂಥಸಂಪಾದನಾ ಸಂಕಥನ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾನಿಲಯ ಹಂಪಿ
2. ದೇವೀರಪ್ಪ ಹೆಚ್, 2018, ಸಂಶೋಧನ ಸಂಪುಟ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು
3. ಧನಂಜಯ ಕುಂಬ್ಳೆ, 2012, ಕುಮಾರವ್ಯಾಸ ಭಾರತದ ಕಾಲನಿರ್ಣಯ ಹೊಸಬೆಳಕು, ಚಿನಂತನ ಬಯಲು
   ಪ್ರಕಾಶನ, ಬಂಟ್ವಾಳ ದಕ್ಷಿಣ ಕನ್ನಡ
4. ಗೋವಿಂದರಾಜು ಗಿರಡ್ಡಿ (ಸಂ) ಕಿರ್ತಿನಾಥ ಕುರ್ತಕೋಟಿ ಕುಮಾರವ್ಯಾಸ ವಿಮರ್ಶೆ ಸಂಪುಟ 3, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು
5. ಕೀರ್ತಿನಾಥ ಕುರ್ತಕೋಟಿ, 2016, ಕನ್ನಡ ಸಾಹಿತ್ಯ ಸಂಗಾತಿ, ಕುರ್ತಕೋಟಿ ಮೆಮೊರಿಯಲ್ ಟ್ರಸ್ಟ್, ಧಾರವಾಡ.
6. ಕುವೆಂಪು ಮತ್ತು ಮಾಸ್ತಿ ವೆಂಕಟೇಶ ಅಯ್ಯಂಗಾರ್, 2000, ಕರ್ನಾಟ
7. ಮುಗಳಿ ರಂ. ಶ್ರೀ. 2016, ಕನ್ನಡ ಸಾಹಿತ್ಯ ಚರಿತ್ರೆ, ಗೀತಾ ಬುಕ್ ಹೌಸ್, ಮೈಸೂರು

8. ನರಸಿಂಹಚಾರ್ಯ ಆರ್, 2015, ಕರ್ಣಾಟಕ ಕವಿಚರಿತೆ ಸಂಪುಟ 2, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು
9. ಸೀತಾರಾಮ ಜಾಗೀರುದಾರ, 1998, ಕುಮಾರವ್ಯಾಸ : ಒಂದು ಅಧ್ಯಯನ, ಶ್ರೀವೆಂಕಟೇಶ್ವರ ಪ್ರಕಾಶನ, ಬೆಂಗಳೂರು
10. ಸೀತಾರಾಮಯ್ಯ ವಿ, 2012, ಕುಮಾರವ್ಯಾಸ, ಸಪ್ನ ಬುಕ್ ಹೌಸ್, ಬೆಂಗಳೂರು
11. ಸುಜನಾ, 2002 , ಸಂವಹನ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು
11. ವೆಂಕಟಾಚಲ ಶಾಸ್ತ್ರಿ ಟಿ.ವಿ, 2005, ಸಾಹಿತ್ಯಶೋಧ (ಶಾಸ್ತ್ರೀಯ ಸಂ–6), ಸಪ್ನ ಬುಕ್ ಹೌಸ್, ಬೆಂಗಳೂರು
13. ವಿವಿಧ ಲೇಖಕರು, 1999, ಕುಮಾರವ್ಯಾಸ ಪ್ರಶಸ್ತಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

❖❖❖

ನೆಲದೆದೆಯಲ್ಲಿದೆ
ಜಲದ ಕಣ್ಣು
ಜಲದೆದೆಯಲ್ಲಿದೆ
ಮರಳು ಮಣ್ಣು

ತುಳುನಾಡು–ವಾಸ್ತವ್ಯದ ವಾರಸುದಾರಿಕೆ

ಡಾ. ನವೀನ್
ಸಹ ಪ್ರಾಧ್ಯಾಪಕರು, ರಥಬೀದಿ, ಮಂಗಳೂರು

ಚರಿತ್ರೆಯು ನಿರಂತರವಾಗಿ ಪುನರ್ವ್ಯಾಖ್ಯಾನ, ಪುನರ್ಪರಿಶೀಲನೆ, ವಿಶ್ಲೇಷಣೆ ಹಾಗೂ ಅರ್ಥೈಸುವಿಕೆಗಳಿಗೆ ಒಳಪಟ್ಟ ಪುನರ್–ರಚನೆಗೊಳ್ಳುವ ಅಧ್ಯಯನ ವಿಷಯವಾಗಿ ರೂಪುಗೊಂಡಿದೆ. ಈ ಪ್ರಕ್ರಿಯೆಯಲ್ಲಿ ಕಾಲ, ಯುಗ, ಸಂದರ್ಭ ಹಾಗೂ ಪ್ರದೇಶಗಳೊಂದಿಗೆ ವ್ಯವಹರಿಸುವುದರಿಂದ ಅಲ್ಲಿ ಕಂಡುಬರುವ ಪ್ರತಿಯೊಂದು ವಿಚಾರಗಳು ತನ್ನದೇ ನೆಲೆ ಹಾಗೂ ದೃಷ್ಟಿಕೋನಗಳಿಗನುಗುಣವಾಗಿ ಅರ್ಥೈಸಿಕೊಳ್ಳುವ, ವಿಶ್ಲೇಷಿಸುವ, ಸತ್ಯವನ್ನು ತೀರ್ಮಾನಿಸುವ ಪ್ರಯತ್ನ ಮಾಡುತ್ತವೆ. ಚರಿತ್ರೆಯಲ್ಲಿ ಅಂತಿಮ ತೀರ್ಮಾನ ಇಲ್ಲವೇ ಅಂತಿಮ ಸತ್ಯವಿಲ್ಲದಿರುವುದರಿಂದ ಅದನ್ನು ಪ್ರಕಟಿಸುವ ನಿಲುವು ಚರಿತ್ರೆಯ ಒಂದೊಂದು ಭಾಗವಾಗಿ ಮುಂದುವರೆಯುತ್ತದೆ. ಈ ನಿಲುವುಗಳಿಗೆ ಸಹಮತ ವ್ಯಕ್ತಪಡಿಸುವ ಇಲ್ಲವೇ ಅದರಿಂದ ಭಿನ್ನವಾಗಿ ಕಾಣಿಸಿಕೊಳ್ಳುವ ರಚನೆಗಳು ಅದರೊಂದಿಗೆ ಬೆಸೆದುಕೊಂಡಿರುತ್ತವೆ. ಆದ್ದರಿಂದ ರಚನೆಯ ಅಥವಾ ನಿಲುವುಗಳ ಮಿತಿಗಳನ್ನು, ಅವುಗಳು ರೂಪಿಸಲ್ಪಟ್ಟ ಸನ್ನಿವೇಶಗಳು ಹಾಗೂ ಅವುಗಳ ಪರವಾಗಿರುವ ವಿಮರ್ಶಾತ್ಮಕ ವಿಶ್ಲೇಷಣೆಗಳಿಗೆ ಒಳಪಡಿಸಿ ಪರ್ಯಾಯ ಚರಿತ್ರೆ ನಿರ್ಮಾಣ ಮಾಡುವ ಅವಕಾಶಗಳನ್ನು ಕಂಡುಕೊಳ್ಳುವ ಪ್ರಯತ್ನಗಳನ್ನು ಸಂಶೋಧನೆಗಳು ಮಾಡಬೇಕಾಗುತ್ತದೆ.

ದಕ್ಷಿಣ ಕನ್ನಡ, ಉಡುಪಿ, ಕಾಸರಗೋಡು ಜಿಲ್ಲೆಗಳನ್ನು ಒಳಗೊಂಡ ಸಾಂಸ್ಕೃತಿಕ ಪ್ರದೇಶವನ್ನು ಪರಂಪರಾಗತವಾಗಿ ತುಳುನಾಡು ಎಂದು ಕರೆಯಲಾಗುತ್ತಿದ್ದು, ಈ ಪ್ರದೇಶದ ವಾಸ್ತವ್ಯದ ವಾರಸುದಾರಿಕೆಯ ಆಯಾಮಗಳನ್ನು ಅಧ್ಯಯನಕ್ಕೊಳಪಡಿಸುವ ಪ್ರಯತ್ನಗಳನ್ನು ಮಾಡಲಾಗಿದೆ. ತುಳುನಾಡು, ತುಳುದೇಶ, ತುಳುರಾಜ್ಯ, ತುಳುವ, ತೌಳವ, ತುಳುವಿಷಯ ಮುಂತಾದ ಹೆಸರುಗಳಿಂದ ಕರೆಯಲ್ಪಡುವ ಈ ಪ್ರದೇಶ ರಾಜಕೀಯವಾಗಿ ಇಲ್ಲವೇ ಆಡಳಿತಾತ್ಮಕವಾಗಿ ವಿಸ್ತಾರವಾದ ಭೂಪ್ರದೇಶವನ್ನು ಹೊಂದಿದೆ. ತುಳುನಾಡು ಭಿನ್ನ ಸಂಸ್ಕೃತಿಗಳ ಕೂಡುವಿಕೆಯಿಂದಾದ ಸಾಂಸ್ಕೃತಿಕ ಘಟಕವಾಗಿದ್ದು, ಬಹುಭಾಷಿಕ ನೆಲೆಯಾಗಿ ರೂಪುಗೊಂಡ ಪ್ರದೇಶವಾಗಿದೆ.

ಅಧ್ಯಯನದಲ್ಲಿ ವಾರಸುದಾರಿಕೆಯನ್ನು ಪರಂಪರೆ ಎಂಬ ಅರ್ಥದಲ್ಲಿ ಪರಿಭಾವಿಸುವುದರ ಜೊತೆಗೆ ವಾರಸುದಾರಿಕೆಯನ್ನು ಹೆರಿಟೇಜ್, ಲೆಗೆಸಿ ಅಂದರೆ ಸಾಂಸ್ಕೃತಿಕ ಬಳುವಳಿ ಎಂಬರ್ಥದಲ್ಲಿ ಅನುಭಾವಿಸುವುದರ ಜೊತೆಗೆ ಸಾಮಾಜಿಕ ಪ್ರಕ್ರಿಯೆಯ ಭಾಗವಾಗಿ ನೋಡಬೇಕಾಗುತ್ತದೆ. ತುಳುನಾಡಿನ ವಾಸ್ತವ್ಯದ ವಾರಸುದಾರಿಕೆಗೆ ಸಂಬಂಧಿಸಿದಂತೆ ಸಮುದಾಯಗಳ ವಾಸ್ತವ್ಯ, ಸಾಮಾಜಿಕ ರಚನೆ, ಸಾಮಾಜಿಕ ರಚನೆಯ ಸುತ್ತ ಇರುವ ಅನುಸಂಧಾನಗಳು, ಸಮಾಜಗಳ ಸಮಕಾಲೀನ ದತ್ತ ಮಾಹಿತಿಗಳು, ಸಾಮಾಜಿಕ ರಚನೆಗೆ ಪೂರಕವಾಗಿರುವ ಮಾನವ ನಿರ್ಮಿತ ವಸ್ತುಗಳು, ಸಾಮಾಜಿಕ ರಚನೆಯ ಹರವುಗಳನ್ನು ಶಬ್ದೀಕರಿಸುವ

ವ್ಯವಸ್ಥಿತ ಕಾರ್ಯಕ್ಷೇತ್ರ, ಅನುಭವ ಜ್ಞಾನ ಮುಂತಾದವುಗಳ ಜಾಡಿನ ಆಧಾರದಲ್ಲಿ ಮಾನವನ ವಾಸ್ತವ್ಯದ ಹೆಜ್ಜೆಗಳನ್ನು ಗುರುತಿಸಲು ಸಹಾಯಕ ಎಂಬ ಆಶಯವನ್ನು ಮನನ ಮಾಡಬೇಕಾಗುತ್ತದೆ. ಪ್ರಸ್ತುತ ಈ ಲೇಖನ ವಾಸ್ತವ್ಯದ ವಾರಸುದಾರಿಕೆಗೆ ಸಂಬಂಧಪಟ್ಟಿರುವುದರಿಂದ ತುಳುನಾಡಿನಲ್ಲಿ ವಾಸ್ತವ್ಯ ಹೇಗೆ ಪ್ರಾರಂಭವಾಯಿತು ಎನ್ನುವುದರ ಬಗೆಗಿನ ಚರ್ಚೆಯಿಂದ ಆರಂಭವಾಗುತ್ತದೆ.

ತುಳುನಾಡಿನಲ್ಲಿ ಮಾನವನ ವಾಸ್ತವ್ಯದ ಚಾರಿತ್ರಿಕ ಬೆಳವಣಿಗೆಗಳನ್ನು ಅವಲೋಕಿಸಿದಾಗ ಸಾಮಾಜಿಕ, ಆರ್ಥಿಕ, ರಾಜಕೀಯ, ಧಾರ್ಮಿಕ, ಸಾಂಸ್ಕೃತಿಕ ನೆಲೆಗಟ್ಟುಗಳು ಪರಸ್ಪರ ಸಹಬಾಳ್ವೆಯ ಸ್ವರೂಪದವುಗಳು ಎಂದು ಜಾನಪದ ಹೆಚ್ಚು ಪ್ರಾಮಾಣಿಕ ಮತ್ತು ಪ್ರಾತಿನಿಧಿಕವಾಗಿ ಸ್ಪಷ್ಟಪಡಿಸಿರುವುದು ಒಂದೆಡೆಯಾದರೆ, ಇನ್ನೊಂದೆಡೆ ತುಳುನಾಡಿನ ಸಂದರ್ಭದ ಸಮಾಜ ಶ್ರೇಣಿಕೃತವಾಗಿದ್ದು, ಏಕರೂಪತೆಯನ್ನು ಪಡೆದುಕೊಂಡಿರಲಿಲ್ಲ ಎಂಬುವುದು ವಾಸ್ತವ್ಯದ ವಾರಸುದಾರಿಕೆಯ ಸಂದರ್ಭದಲ್ಲಿ ಮುಖ್ಯವಾಗುತ್ತದೆ. ಮುಂದುವರೆದು ತುಳುನಾಡಿನ ವಾಸ್ತವ್ಯದ ವಾರಸುದಾರಿಕೆಯ ಆಯಾಮಗಳು ಸಮಾಜದ ರಚನೆಯೊಂದಿಗೆ ರೂಪುಗೊಂಡಿದ್ದರಿಂದ ವಿಭಿನ್ನತೆಗಳಿಂದಲೂ ಕೂಡಿರುವುದು ವಿಶೇಷಣವಾಗಿದೆ. ತುಳುನಾಡಿನಲ್ಲಿ ಆದ ಸಮುದಾಯಗಳ ಸಂಚಲನೆ, ಊಳಿಗಮಾನ್ಯ ವ್ಯವಸ್ಥೆಯ ಕಟಿಬದ್ಧತೆ, ಜೈನ–ಬ್ರಾಹ್ಮಣ–ಒಕ್ಕಲು ಮುಂತಾದ ಸಮುದಾಯಗಳ ಪ್ರಾಬಲ್ಯ ಮುಂತಾದವುಗಳು ಇಲ್ಲಿನ ವಾಸ್ತವ್ಯದ ವಾರಸುದಾರಿಕೆಯ ಸ್ವರೂಪವನ್ನು ಬದಲಾಯಿಸಿದ ಬಗ್ಗೆ ವಿದ್ವಾಂಸರು ಚರ್ಚಿಸಿದ್ದು, ಅವರ ಪ್ರಕಾರ ಬ್ರಾಹ್ಮಣರ ವಾಸ್ತವ್ಯ ಕೃಷಿ–ಸಾಮಾಜಿಕ ವ್ಯವಸ್ಥೆಯ ಹರವನ್ನು ವಿಸ್ತಾರಗೊಳಿಸಿತು. ಭತ್ತದ ಕೃಷಿ, ಕೃಷಿ–ಪ್ರಣೀತ ಆರ್ಥಿಕತೆಯನ್ನು ಬಲಿಷ್ಠಗೊಳಿಸಿ, ಸ್ಥಳೀಯ ಶ್ರೇಣಿಕೃತ ಕೃಷಿ ಅಧಿಕಾರದ ಸ್ತರಗಳಲ್ಲಿ ಪ್ರಧಾನ ಭೂಮಿಕೆ ವಹಿಸಿತು. ಬ್ರಾಹ್ಮಣರ ಪ್ರಭಾವದಿಂದಾಗಿ ಇಲ್ಲಿನ ಸಮುದಾಯಗಳ ಸಾಮಾಜಿಕ ನಿಯಮಗಳು ಹೊಸತಾಗಿ ವ್ಯಾಖ್ಯಾನಿಸಲ್ಪಟ್ಟವು. ಭತ್ತದ ಕೃಷಿ ವಿಸ್ತರಣೆಗೊಂಡಂತೆಲ್ಲ ಅದಕ್ಕೆ ಪೂರಕವಾಗಿರುವ ವೃತ್ತಿಪರಿಣಿತ ಹಾಗೂ ಶ್ರಮಾಧಾರಿತ ಸಮುದಾಯಗಳು ಜಾತಿ ಆಧಾರಿತವಾಗಿ ನೆಲೆಗೊಂಡು ಸಾಮಾನ್ಯಶಕೆ 9, 10ನೇಯ ಶತಮಾನಗಳಲ್ಲಿ ಬಹುರೂಪ ಪಡೆದುಕೊಂಡಿತು. ಈ ಬೆಳವಣಿಗೆ ವಾರಸುದಾರಿಕೆಯ ಕಲ್ಪನೆಗೆ ಹೊಸ ಆಯಾಮ ನೀಡಿತ್ತಲ್ಲದೇ, ಸಮುದಾಯಗಳನ್ನು ನಿಯಂತ್ರಣ ಮಾಡುವ ಅಂತರ್ಗತ ವ್ಯವಸ್ಥೆ ಹಾಗೂ ಸಾಮುದಾಯಿಕ ಸ್ವರೂಪಗಳು ಮರುವ್ಯಾಖ್ಯಾನಗೊಂಡವು.

ತುಳುನಾಡಿನ ವಾಸ್ತವ್ಯದ ವಾರಸುದಾರಿಕೆಗೆ ಸಂಬಂಧಿಸಿ ಮೌಖಿಕ ಆಕರಗಳು ಮತ್ತು ಜಾನಪದ ಅಧ್ಯಯನಗಳು ಲಭ್ಯವಿದ್ದರೂ, ಅವು ಕೇವಲ ಸಾಹಿತ್ಯ ಅಧ್ಯಯನಗಳಿಗೆ ಸೀಮಿತವಾಗಿದ್ದರಿಂದ ಅಲಕ್ಷಿತ ವರ್ಗದ ಚರಿತ್ರೆಯನ್ನು ಪುನರ್ನಿರ್ಮಿಸುವಲ್ಲಿ ಚಾರಿತ್ರಿಕ ಸಂಗತಿಗಳಿದ್ದರೂ ಚರಿತ್ರೆಯಾಗಿ ಮಾನ್ಯಗೊಳ್ಳುವಲ್ಲಿ ಅವುಗಳು ಅಲಕ್ಷ್ಯಕ್ಕೆ ಒಳಗಾಗಿವೆ. ಪುರಾತತ್ವ ಆಧಾರಗಳನ್ನು ಲಕ್ಷಿಸಿಕೊಂಡು ಮೌಖಿಕ ಚಿಂತನೆಗಳನ್ನು ಪರಿಸ್ಫುಟಗೊಳಿಸಿದಾಗ ವಾಸ್ತವ್ಯಕ್ಕೆ ಹೊಂದಿಕೊಂಡ ನೈಜಚರಿತ್ರೆಗಳು ಅನಾವರಣಗೊಳ್ಳುವ ಸಾಧ್ಯತೆಗಳು ಹೆಚ್ಚು. ತುಳುನಾಡಿನಲ್ಲಿ ಬೇಟೆ, ಆಹಾರ ಸಂಗ್ರಹಣೆ, ಮೀನುಗಾರಿಕೆ, ಪಶುಸಂಗೋಪನೆ, ಸ್ಥಳಾಂತರ ಬೇಸಾಯ, ಒದ್ದೆ ಮಣ್ಣಿನ ಕೃಷಿ, ಉಪ್ಪು ತಯಾರಿಕೆ, ಕರಕುಶಲ ಉತ್ಪಾದನೆ ಇತ್ಯಾದಿ ಚಟುವಟಿಕೆಗಳು ಆರಂಭಗೊಂಡು,

ವಿವಿಧ ಮಾದರಿಯ ವ್ಯವಸ್ಥೆಗಳು ಸ್ಥಾಪಿಸಲ್ಪಟ್ಟು, ಅದರ ಆಧಾರದ ಮೇಲೆ ಮಾನವನ ವಾಸ್ತವ್ಯದ ಬಗ್ಗೆ ಸುಲಭವಾಗಿ ತಿಳಿದುಕೊಳ್ಳಬಹುದಾದರೂ ತುಳುನಾಡಿನ ಭೌಗೋಳಿಕ ವ್ಯವಸ್ಥೆಗೆ ಅನುಗುಣವಾಗಿ ಮಾನವನ ವಾಸ್ತವ್ಯದ ಜಾಡುಗಳನ್ನು ಗುರುತಿಸುವುದು ಸಂಕೀರ್ಣ ಕಾರ್ಯವೆಂದೇ ತಿಳಿಯಬಹುದು.

ತುಳುನಾಡಿನ ಸಮಾಜ ಮತ್ತು ಸಾಂಸ್ಕೃತಿಕ ಅಧ್ಯಯನದಲ್ಲಿ ಪುರಾತತ್ವ ಅಧ್ಯಯನಗಳು ಹೆಚ್ಚು ಕೆಲಸ ಮಾಡದಿದ್ದರೂ ಇತ್ತೀಚೀನ ಅಧ್ಯಯನಗಳು ಮಾನವನ ವಾಸ್ತವ್ಯದ ಬಗ್ಗೆ ಮಹತ್ವದ ಸಂಶೋಧನೆಗಳನ್ನು ನಡೆಸುವಲ್ಲಿ ಸಹಕಾರಿಯಾಗಿದೆ. ಭೌಗೋಳಿಕ ಮತ್ತು ಹವಾಮಾನದ ದೃಷ್ಟಿಯಿಂದ ತುಳುನಾಡಿಗೂ ಕೊಂಕಣ ಗೋವಾ ಕರಾವಳಿಗೂ ಹೆಚ್ಚಿನ ವ್ಯತ್ಯಾಸ ಕಂಡುಬರುವುದಿಲ್ಲವಾದುದರಿಂದ ಪಶ್ಚಿಮ ಕರಾವಳಿಯಲ್ಲಿ ಪುರಾತನ ಮಾನವ ನೆಲೆಸಿದ್ದ ಎಂದಾದ್ದಲ್ಲಿ ತುಳುನಾಡಿನ ಮಾನವನ ವಾಸ್ತವ್ಯದ ಚರಿತ್ರೆಯ ಗುರುತಿಸುವಿಕೆ ಪೂರ್ವೇತಿಹಾಸ ಕಾಲದಲ್ಲಿ ಆಗಿವೆ ಎಂಬುವುದನ್ನು ಸ್ಪಷ್ಟಪಡಿಸಬಹುದು. ಪುರಾತತ್ವ ಸಮರ್ಥನೆಗಳ ಪ್ರಕಾರ ತುಳುನಾಡಿನಲ್ಲಿ ಮಾನವನ ವಾಸ್ತವ್ಯವು ಹಳೆಯ ಶಿಲಾಯುಗದಿಂದ ಪ್ರಾರಂಭಗೊಂಡು ನಂತರದ ಕಾಲಾವಧಿಯಲ್ಲಿ ಸಾಂದ್ರಗೊಂಡು ವ್ಯವಸ್ಥಿತ ಸ್ವರೂಪ ಪಡೆಯುವ ವರೆಗೆ ಸಾಗಿತು. ತುಳುನಾಡಿನಲ್ಲಿ ಕ್ರಮಬದ್ಧವಾದ ವಾಸ್ತವ್ಯದ ಕುರುಹು ಸಾಮಾನ್ಯ ಶಕೆಯ ಪೂರ್ವದಿಂದ ಗುಹಾಸಮಾಧಿ, ಬೃಹತ್ ಶಿಲಾ ಸಮಾಧಿ, ಕಬ್ಬಿಣ ಮುಂತಾದ ಲೋಹಗಳ ಉಪಯೋಗ ಮಾನವನ ವಾಸ್ತವ್ಯಕ್ಕೆ ಸಂಬಂಧಿಸಿ ಸಾಂದರ್ಭಿಕ ಮಾಹಿತಿಯನ್ನು ನೀಡುತ್ತದೆ. ಕಬ್ಬಿಣದ ಉಪಯೋಗವು ಕ್ರಮಬದ್ಧ ಕೃಷಿ ವಸ್ಥೆಯೊಂದರ ಆರಂಭಕ್ಕೆ ತಳಹದಿಯಾಗಿ ಸಾಮಾಜಿಕ ಬದಲಾವಣೆಗೆ ಕಾರಣೀಭೂತವಾಯಿತು ಎಂದು ಪ್ರತಿಪಾದಿಸುವವರಿದ್ದಾರೆ.

ಬೇಟೆ ಮತ್ತು ಆಹಾರ ಸಂಗ್ರಹಣೆಯ ಮೂಲಕ ತೌಳವ ಪ್ರದೇಶದಲ್ಲಿ ವಾಸ್ತವ್ಯದ ವಾರಸುದಾರಿಕೆಯನ್ನು ಚರ್ಚಿಸಿದಾದ್ದಲ್ಲಿ ಡಾ. ಭಾಸ್ಕರ ಆನಂದ ಸಾಲೆತ್ತೂರರ ತುಳುವರ ಮೂಲವನ್ನು ತೂಳ್ ಎಂಬ ಶಬ್ದದ ಮೂಲಕ ನೋಡಬೇಕಾಗುತ್ತದೆ. ತೂಳ್ ಎಂಬ ಶಬ್ದ ಹಳೆಗನ್ನಡದಲ್ಲಿ ಹೊಡೆದಾಡುವುದು ಎಂದಾದಲ್ಲಿ ತುಳುವರ ವಾಸ್ತವ್ಯದ ಕಾರ್ಯಯೋಜನೆಗಳು ಯುದ್ಧಸನ್ನದ್ಧತೆಯಂತೆ ತೋರುವುದು ಸಹಜ. ಮುಂದುವರೆದು ವ್ಯವಸ್ಥಿತವಾಗಿ ಬೇಸಾಯ ಪ್ರಾರಂಭವಾಗದಿರುವ ಸಂದರ್ಭ ಆಹಾರ ಸಂಗ್ರಹಿಸುವ ಕಾರ್ಯಯೋಜನೆಯಲ್ಲಿ ಜನರ ವರ್ತನೆ ಯುದ್ಧಸನ್ನದ್ಧಂತೆಯಂತೆ ತೋರುವುದಾದರೂ ಅದು ಅದಕ್ಕಿಂತ ಭಿನ್ನವಾದ, ಸ್ಪರ್ಧಾತ್ಮಕ ನೆಲೆಗಟ್ಟಿನ ಮನೋಭಾವ, ಅದಾಗ್ಯೂ ಪ್ರಾಚೀನ ಇಲ್ಲವೇ ಮೂಲನಿವಾಸಿ ಸಮುದಾಯದ ವಾಸ್ತವ್ಯದ ನೆಲೆಗಳಲ್ಲಿ ಯುದ್ಧಸನ್ನದ್ಧತೆಯ ಪರಿಸ್ಥಿತಿ ಸಾಮಾನ್ಯವಾಗಿ ಕಂಡುಬರುತ್ತಿದ್ದು, ಅದು ಆತ್ಮರಕ್ಷಣೆಯ ವಿಚಾರವನ್ನು ಒಳಗೊಂಡಿತ್ತು. ಉದಾಹರಣೆಗೆ ಸ್ವರಕ್ಷಣೆಗಾಗಿ ಪ್ರಾಣಿಗಳಿಂದ ದೂರವಿದ್ದು, ಯುದ್ಧಸನ್ನಧ್ಧತೆಯಂತೆ ಇರುವುದು. ಇದಕ್ಕೆ ಸಂವಾದಿಯಾಗಿ ತುಳುನಾಡಿನ ಜಾನಪದ ಆಟಗಳಾದ ಅಜಕಾಯಿ ದರ್ಪುನಿ, ತಪ್ಪಂಗಾಯಿ, ಅಂಬೋಡಿ ತೂಟೆಧಾರ ಮುಂತಾದವುಗಳು ಯುದ್ಧಸನ್ನದಂತೆಯಂತೆ ಭಾಸವಾದರೂ ಇವೆಲ್ಲ ಪ್ರಸ್ತುತ ಮನರಂಜನೆಯ ಆಟಗಳಾಗಿವೆ. ಈ ಆಟಗಳು ಪ್ರಸ್ತುತ ತುಳುನಾಡಿನ ಪ್ರಮುಖ ದೇವಸ್ಥಾನ, ದೈವಸ್ಥಾನಗಳ ಆಚರಣೆಯಲ್ಲಿ ಕಟ್ಟುಪಾಡುಗಳಾಗಿ ಇಂದಿಗೂ ಮಹತ್ವ ಪಡೆದಿದೆ. ಉದಾಹರಣೆಗೆ ಪೋಳಲಿಯ ಚೆಂಡು, ಕವತ್ತಾರಿನಲ್ಲಿ

ನಡೆಯುವ ಅಂಬೊಡಿ ಕಾಳಗ, ಕಟೀಲಿನ ಜಾತ್ರಾ ಸಂದರ್ಭದಲ್ಲಿ ನಡೆಯುವ ತೂಟೆದಾರ, ಗ್ರಾಮ ದೇವಸ್ಥಾನಗಳಲ್ಲಿ ನಡೆಯುವ ತಪ್ಪಂಗಾಯಿ, ಬೋಂಟೆ ಮುಂತಾದವುಗಳು. ಇವುಗಳನ್ನು ಚಾರಿತ್ರಿಕವಾಗಿ ಅರ್ಥೈಸಿಕೊಂಡರೆ ಪುರಾತನ ಕಾಲದ ವಾಸ್ತವ್ಯದ ಪರಿಕಲ್ಪನೆ ಹಾಗೂ ಅದರಲ್ಲಿ ಅಡಗಿರುವ ಗೂಡಾರ್ಥ ಸ್ಪಷ್ಟವಾಗುತ್ತದೆ. ಅಂತೆಯೇ ವಿಕಾಸದ ಹಂತಗಳನ್ನು ದಾಟುವ ಸಂದರ್ಭಗಳಲ್ಲಿ ಹಿಂದಿನ ಆಚಾರ–ವಿಚಾರಗಳನ್ನು ಕಟ್ಟುಪಾಡುಗಳ ರೀತಿಯಲ್ಲಿ ಮುಂದುವರೆಸಿರುವ ಸಾಧ್ಯತೆಗಳು ಸಹ ಈ ಆಚರಣೆಗಳಲ್ಲಿ ಅಂತರ್ಗತವಾಗಿರಬಹುದು. ಈ ಆಟ ಆಚರಣೆಗಳು ಕೆಲವೊಂದು ಕೆಲವು ಸಮುದಾಯಗಳಿಗೆ ಸೀಮಿತವಾಗಿರುವುದರಿಂದ ಆ ವರ್ಗದ ಭಾಗವಹಿಸುವಿಕೆ ಆ ಸಮಾಜದ ನೆಲೆಗಟ್ಟನ್ನು ಸಂಕೇತಿಸುತ್ತದೆ. ಪ್ರಸ್ತುತ ಆಚರಣೆಗಳಲ್ಲಿ ಭಾಗವಹಿಸುವ ಸಮುದಾಯಗಳಲ್ಲಿ ಬುಡಕಟ್ಟಿನ ಮೂಲಾಂಶಗಳಿರುವುದರಿಂದ ಸಮಾನ ಸಂಬಂಧಗಳನ್ನು ಹೊಂದಿಕೊಂಡ ಸಮಾಜಗಳ ವಾಸ್ತವ್ಯ ಈ ಪ್ರದೇಶಗಳಲ್ಲಿ ಆಗಿರುವ ಸಾಧ್ಯತೆಗಳಿವೆ. ಉದಾಹರಣೆಗೆ ಕೊರಗ, ಮಾಯಿಲ, ಮುಗರ, ಬಿಲ್ಲವ, ಮುಂಡಾಲ, ಮೊಗೇರ, ಬಕ್ಕ, ಬಾಕುಡ ಮುಂತಾದವರು ಈ ಪ್ರದೇಶಗಳ ಮೂಲನಿವಾಸಿಗಳೆಂಬ ಗುರುರಾಜ ಭಟ್ಟರ ಸಮರ್ಥನೆಯನ್ನು ಒಪ್ಪಿಕೊಳ್ಳಬಹುದು.

ಡಾ ಗುರುರಾಜ ಭಟ್ಟರು ತುಳುನಾಡಿನ ಮೂಲನಿವಾಸಿಗಳ ಬಗ್ಗೆ ವಾದಗಳನ್ನು ಪ್ರಸ್ತಾಪಿಸಿದ್ದು, ಅವುಗಳ ಬಗ್ಗೆ ಅಧ್ಯಯನಿಸಿ ತನ್ನ ಸಮರ್ಥನೆಗಳನ್ನು ಪ್ರತಿಪಾದಿಸುತ್ತಾ ಈ ಪ್ರದೇಶವನ್ನು ಸಾಂಪ್ರಾದಾಯಿಕ ಚರಿತ್ರೆಗಳಲ್ಲಿ ಗೋಪರಾಷ್ಟ್ರ, ಗೋರಾಷ್ಟ್ರ ಎಂದು ಗುರುತಿಸಿವೆ ಎಂದು ಸ್ಪಷ್ಟೀಕರಿಸುತ್ತಾರೆ. ಚರಿತ್ರಾಕಾರರ ಪ್ರಕಾರ ತುಳು ಎಂಬುವುದು ದೇಶವಾಚಕವೂ ಅಲ್ಲ ಭಾಷಾವಾಚಕವೂ ಅಲ್ಲ ಬದಲಾಗಿ ತುರು ಎಂಬುವುದರ ಪರ್ಯಾಯ ಪದ. ತುಳುವರೆಂದರೆ ತುರುಕಾರರು, ಗೋಪರು ಎಂಬ ತೀರ್ಮಾನಕ್ಕೆ ಒಪ್ಪುತ್ತಾರೆ. ಮುಂದುವರೆದು ತುಳಾಪಿನಿ ಶಬ್ದಾರ್ಥ ದೋಣಿ ನಡೆಸುವವರು, ಮುದ್ಗರರು ಇಲ್ಲವೇ ಮೊಗವೀರರು ಎಂಬ ಸಮರ್ಥನೆ. ತುಳುನಾಡಿನ ಕರಾವಳಿಯಲ್ಲಿ ಮೀನುಗಾರಿಕೆ ಇಲ್ಲವೇ ಅಂಬಿಗವೃತ್ತಿಯ ಸಮುದಾಯಗಳು ವಾಸ್ತವ್ಯ ಹೂಡಿತ್ತೆಂದು ಸಮರ್ಥಿಸುತ್ತವೆ. ಮಾತ್ರವಲ್ಲ ತಲವೇರ್ ಎಂಬುವುದು ನೀರು ನಿಂತ ಜಾಗದಲ್ಲಿ ಬೇಸಾಯ ಮಾಡುವುದು ಎಂಬರ್ಥದಲ್ಲಿರುವುದರಿಂದ, ಒದ್ದೆ ಮಣ್ಣಿನಲ್ಲಿ ಕೃಷಿ ನಿರತ ಸಮುದಾಯದವರು ಈ ಭಾಗದಲ್ಲಿ ವಾಸ್ತವ್ಯ ಹೂಡಿರುವ ಸಾಧ್ಯತೆಗಳನ್ನು ಒಪ್ಪಿಕೊಳ್ಳಬೇಕಾಗುತ್ತದೆ. ತುಳು ಎಂಬ ಪದವು ಕೋಮಲ, ನಮ್ರ, ಮೃದು ಎಂಬ ಶಬ್ದಗಳನ್ನು ಪ್ರತಿನಿಧಿಸಿರುವುದರಿಂದ ತುಳುವರು ಮೃದು ಸ್ವಭಾದವರು ಎಂದು ಅರ್ಥೈಸಿಕೊಳ್ಳಬಹುದು. ಹೀಗೆ ಗುರುರಾಜ ಭಟ್ಟರು ತುಳುನಾಡಿನ ಜನರ ವಾಸ್ತವ್ಯದ ಪ್ರಗತಿಯ ಮೂರು ಹಂತಗಳನ್ನು ವಿವರಿಸಿದ್ದಾರೆ. ಅವೇ ಪಾಡು, ಕುಡು ಮತ್ತು ನಾಡು. ಇದಕ್ಕೆ ಸಂವಾದಿಯಾಗಿ ಕೆಮ್ತೂರು ರಘುಪತಿಯವರ ಸ್ಥಳನಾಮ ಅಧ್ಯಯನಗಳಲ್ಲಿನ ಪಾಡಿಯಿಂದ ಅಂತ್ಯವಾಗುವ ಹೆಚ್ಚಿನ ಹೆಸರುಗಳು ಹಟ್ಟಿಕಾರರ ವಾಸ್ತವ್ಯದ ಎಡೆಗಳು ಅರ್ಥಾತ್ ಊರು, ಹಳ್ಳಿ ಎಂಬ ಸಾಮಾನ್ಯ ಅರ್ಥವನ್ನು ಪ್ರಕಟಪಡಿಸಿವೆ. ತುಳುನಾಡಿನ ಸ್ಥಳನಾಮಗಳ ಅಧ್ಯಯನದಲ್ಲಿ ವಾಸ್ತವ್ಯದ ವಾರಸುದಾರಿಕೆಗೆ ಹೊಂದಿಕೊಂಡು ಇನ್ನಷ್ಟು ಸಮುದಾಯಗಳು ಈ ಭಾಗದಲ್ಲಿ ವಾಸ್ತವ್ಯ ಹೂಡಿರುವ ವಿಚಾರಗಳು ಚರ್ಚಿಸಲ್ಪಟ್ಟಿವೆ. ಉದಾಹರಣೆಗೆ ಕೋಲರು, ಮುಂಡರು, ಬಿಲ್ಲರು, ಕಣ್ಣರು, ಫಣಿಗಳು, ಶಂಖಕುಲದ ನಾಗರು, ತುರುಕಾರ ಮುಂತಾದವರು.

ಈ ಎಲ್ಲಾ ವಸ್ತುನಿಷ್ಠ ಅಧ್ಯಯನಗಳು ತುಳುನಾಡಿನ ವಾಸ್ತವ್ಯದ ವಾರಸುದಾರಿಕೆಯ ಬಗ್ಗೆ ಮಾಹಿತಿಯನ್ನು ನೀಡಿದರೂ ಮಾರ್ಗಪರಂಪರೆಯ ಸಾಹಿತ್ಯಗಳು, ಕಲ್ಬರಹಗಳು ತುಳುನಾಡಿನ ವಾಸ್ತವ್ಯದ ವಾರಸುದಾರಿಕೆಯ ಬಗ್ಗೆ ಭಿನ್ನ–ಭಿನ್ನವಾದ ವಿಚಾರಗಳನ್ನು ಪ್ರಸ್ತುತ ಪಡಿಸಿವೆ. ಸ್ಕಂದ ಪುರಾಣದ ಸಹ್ಯಾದ್ರಿ ಖಂಡದಲ್ಲಿ ಉಲ್ಲೇಖಿತಗೊಂಡಿರುವ ಪ್ರಕಾರ ತುಳುನಾಡು ಪರಶುರಾಮನ ಸೃಷ್ಟಿ ಎಂಬುವುದಾಗಿ ಪ್ರಸಿದ್ಧಿತಿಯನ್ನು ಪಡೆದಿದೆ. ಕದಂಬರ ಆಡಳಿತದ ಅವಧಿಯಲ್ಲಿ ಪರಶುರಾಮ ಸೃಷ್ಟಿಗೆ ಹೆಚ್ಚು ಪ್ರಾತಿನಿಧ್ಯ ದೊರಕಿರುವುದನ್ನು ಮನಗಂಡಾಗ ಈ ಭಾಗದಲ್ಲಿ ರಾಜಕೀಯ ಬೆಳವಣಿಗೆಯೊಂದು ವಾಸ್ತವ್ಯದ ವಾರಸುದಾರಿಕೆಯ ಬದಲಾವಣೆಗೆ ಸಂಬಂಧಿಸಿರುವುದು ಸ್ಪಷ್ಟ. ತುಳುನಾಡಿನ ದಕ್ಷಿಣಭಾಗದಲ್ಲಿ ಮೂಲನಿವಾಸಿಗಳೆಂದೆನಿಸಿಕೊಂಡವರ ಕೆಡವಿ ಬಿದ್ದ ಕೋಟೆಗಳ ಪಳಿಯುಳಿಕೆಗಳು ಮಧೂರು, ಕಾಟುಕುಕ್ಕೆ, ಮಂಜೇಶ್ವರ ಮುಂತಾದೆಡೆ ಗೋಚರಕ್ಕೆ ಬಂದಿರುವುದು, ಪುತ್ತೂರಿನ ಸುತ್ತುಮುತ್ತು ಕಂಡುಬರುವ ಮಣ್ಣಿನ ಮದಿಲುಗಳು ಮೂಲನಿವಾಸಿಗಳ ವಾಸ್ತವ್ಯದ ಕುರುಹುಗಳೆಂದು ಮಾನ್ಯಮಾಡಬಹುದಾಗಿದೆ. ವಾಸ್ತವದಲ್ಲಿ ಈ ಪ್ರದೇಶ ತುಳುನಾಡಿನ ಮೂಲನಿವಾಸಿಗಳೆಂದೆನಿಸಿದ ಸಮುದಾಯಗಳ ನೆಲೆವೀಡಾಗಿತ್ತು ಎಂಬುವುದು ಚರಿತ್ರಾಕಾರರ ಅಭಿಪ್ರಾಯ. ಜೊತೆಗೆ ಕನ್ಯಾನ, ಬಡಾಜೆ, ಪಟ್ಟದಮೊಗರುವಿನಲ್ಲಿರುವ ಕಟ್ಟಡದ ರಚನೆಯ ಪಳಿಯುಳಿಕೆಗಳು ಮಾಯಿಲರ ಕೋಟೆಗಳೆಂದೇ ಜನಜನಿತವಾಗಿದೆ. ಈ ವಿಚಾರಗಳನ್ನು ಸಮರ್ಥನೆಯಾಗಿ ಮುಂದಿಟ್ಟಾಗ ತುಳುನಾಡಿನ ಮೇಲೆ ಅಧಿಕಾರ ಚಲಾಯಿಸಿದ "ಹುಬಸಿಗ"ನ ಐತಿಹ್ಯವನ್ನು ಪರಾಮರ್ಶಿಸಬೇಕಾಗುತ್ತದೆ. ಪರಶುರಾಮ ಬ್ರಾಹ್ಮಣರಿಗೆ ಭೂಮಿಯನ್ನು ದಾನವಾಗಿ ನೀಡುವ ಪೂರ್ವದಲ್ಲಿ ಇಲ್ಲಿನ ಮೂಲನಿವಾಸಿ ಸಮುದಾಯಗಳನ್ನು ಪ್ರತಿನಿಧಿಸುತ್ತಿದ್ದ ಕೊರಗ ಇಲ್ಲವೇ ಮುಗೇರರ ದೊರೆ ಹುಬಸಿಗನೆಂಬವನು ಆಳುತ್ತಿದ್ದನು. ಚರಿತ್ರಾಕಾರರ ಪ್ರಕಾರ ಹುಬಸಿಗನ ನಾಯಕತ್ವದಲ್ಲಿ ತುಳುನಾಡಿನ ನೀರಾಶ್ರಯ ಹೊಂದಿರುವ 32 ಗ್ರಾಮಗಳು ಮೂಲನಿವಾಸಿಗಳ ಆಶ್ರಯ ತಾಣವಾಗಿತ್ತು. ಇವರೆಲ್ಲ ಸಮೂಹ ಸಂಸ್ಕೃತಿಯ ಸಮುದಾಯದವರಾಗಿದ್ದವರು. ಈ ವಾದ ವಸಾಹತುಶಾಹಿಗಳ ಆರ್ಯ–ದ್ರಾವಿಡ ಪರಿಕಲ್ಪನೆಗೆ ಹತ್ತಿರವಾಗಿದ್ದು, ಚರಿತ್ರಾಕಾರರಾದ ಗುರುರಾಜ ಭಟ್ಟರ ಹುಬಸಿಗ ಮತ್ತು ಅವನ ಅನುಯಾಯಿಗಳು ಮೂಲಸಂಸ್ಕೃತಿಯ ಜನವೆಂದಿದ್ದರೂ ತುಳುನಾಡಿನಲ್ಲಿ ಆರಂಭದ ವಾಸ್ತವ್ಯ ಯಾರಿಂದ ಪ್ರಾರಂಭವಾಗಿದೆ ಎನ್ನುವುದಕ್ಕೆ ಭಿನ್ನಮತ ಇಲ್ಲದಿಲ್ಲ.

ಸಾಂಪ್ರದಾಯಿಕ ಚರಿತ್ರೆಗಳು ಬ್ರಾಹ್ಮಣರು ಈ ಭಾಗದ ಮೂಲನಿವಾಸಿಗಳು ಎಂದಿದೆಯಲ್ಲದೇ, ಅಧಿಕಾರದ ಏಣಿಶ್ರೇಣಿಯಲ್ಲೂ ಬ್ರಾಹ್ಮಣರು ಮುಂಚೂಣಿ ಯಲ್ಲಿರುವುದನ್ನು ಕಾಣಬಹುದಾಗಿದೆ. ಶಾಸನಗಳಲ್ಲಿ ಬ್ರಾಹ್ಮಣ ವಾಸ್ತವ್ಯದ ವಾರಸುದಾರಿಕೆಯ ಬಗ್ಗೆ ಮಹತ್ವದ ಚಿತ್ರಣಗಳಿದ್ದು, ಸುಮಾರು 4ನೇ ಶತಮಾನದಿಂದ ಉತ್ತರ ಭಾಗದಿಂದ ವಲಸೆ ಬಂದಿರುವ ಬಗ್ಗೆ ಮಾಹಿತಿಯನ್ನು ನೀಡುತ್ತವೆ. ಮುಂದುವರೆದು ಬ್ರಾಹ್ಮಣರ ಚಲನೆ ನಿರಂತರವಾಗಿ 14ನೇ ಶತಮಾನದ ವರೆಗೂ ಮುಂದುವರೆದಿತ್ತಲ್ಲದೇ, ಈ ಸಂದರ್ಭದ ಶಾಸನಗಳಲ್ಲೂ ಪರಶುರಾಮನ ಸೃಷ್ಟಿಯ ಕಥಾನಕಗಳು ಮಹತ್ವವನ್ನು ಪಡೆದುಕೊಂಡವಲ್ಲದೇ, ಕೃಷಿ ಭೂಮಿ ವ್ಯವಸ್ಥಿತವಾಗಿ ಸಾಂಸ್ಥೀಕರಣಗೊಂಡು ಸಮುದಾಯಗಳ ವಾಸ್ತವ್ಯದ ಪರಿಕಲ್ಪನೆಯಲ್ಲಿ ಅಮೂಲಾಗ್ರ ಬದಲಾವಣೆಗೆ ಅವಕಾಶ ಮಾಡಿರಬಹುದೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ.

ತುಳುನಾಡಿನಲ್ಲಿ ಬ್ರಾಹ್ಮಣರು ಪರಶುರಾಮನಿಂದ ಭೂಮಿಯನ್ನು ದಾನವಾಗಿ ಪಡೆಯುವ ಕಾರ್ಯಯೋಜನೆಗಳನ್ನು ಪರಶುರಾಮನ ಐತಿಹ್ಯದೊಂದಿಗೆ ಸಮೀಕರಿಸಿದಲ್ಲಿ ಬ್ರಾಹ್ಮಣರ ವಾಸ್ತವ್ಯದ ವಾರಸುದಾರಿಕೆಯನ್ನು ವಿಶ್ಲೇಷಣೆಗೆ ಒಳಪಡಿಸಬೇಕಾಗುತ್ತದೆ. ಇದಕ್ಕೆ ಸಂವಾದಿಯಾಗಿ ಕೊರಗ ಜನಾಂಗದಲ್ಲಿ ಉಪಲಬ್ದವಿರುವ ಕಥೆಯೊಂದರ ಪ್ರಕಾರ ಸೃಷ್ಟಿಯ ಆದಿಯಲ್ಲಿ ನೀರೆ ತುಂಬಿದ್ದು, ಅಲ್ಲೊಂದು ಡೋಲು ಕಾಣಿಸಿಕೊಂಡಿತು. ಆ ಕಾಲಘಟ್ಟದಲ್ಲಿ ವಲಸೆ ಬಂದವರಿಗೆ ಡೋಲು ಅವ್ಯವಸ್ಥೆಯ ಸಂಕೇತವಾಗಿ, ಅದನ್ನು ವ್ಯವಸ್ಥೆಗೆ ತರುವ ಕೆಲಸವಾಗಿ ಪರಿಗಣಿಸಿರುವ ಸಾಧ್ಯತೆಗಳನ್ನು ಅಲ್ಲಗಳೆಯುವಂತಿಲ್ಲ. ಇದಕ್ಕೆ ಸಂವಾದಿಯಾಗಿ ಪರಶುರಾಮನ ಸೃಷ್ಟಿಯ ಕಥೆಯ ಪ್ರಕಾರ ಎಲ್ಲೆಲ್ಲೂ ನೀರು ತುಂಬಿದ ಜಾಗವನ್ನು ಕೊಡಲಿ ಎಸೆದು ದೂರ ಮಾಡಿ ಭೂಭಾಗವನ್ನು ಪರಿವರ್ತಿಸಿದ ಸಂಕೇತವೇನೆಂದರೆ, ಅವ್ಯವಸ್ಥೆಯನ್ನು ವ್ಯವಸ್ಥಿಗೊಳಿಸುವುದು. ಬ್ರಾಹ್ಮಣರ ವಲಸೆಯ ಪೂರ್ವದಲ್ಲಿ ಅವ್ಯವಸ್ಥಿತವಾದ ತುಳುನಾಡು ಬ್ರಾಹ್ಮಣರ ವಾಸ್ತವ್ಯದೊಂದಿಗೆ ವ್ಯವಸ್ಥಿತಗೊಂಡಿದೆ ಎಂಬುವುದು ಇಲ್ಲಿಯ ವಾದ.

ತುಳುನಾಡಿನ ಚರಿತ್ರೆಯನ್ನು ಅವಲೋಕಿಸಿದಾಗ ಬ್ರಾಹ್ಮಣರಿಗೆ ಭೂಮಿಯನ್ನು ದಾನವಾಗಿ ನೀಡುವ ಸಂಪ್ರದಾಯಗಳು ಸಾಮಾನ್ಯಶಕೆ ಏಳನೇ ಶತಮಾನದಲ್ಲಿ ಆರಂಭಗೊಂಡವು. ವಿಜಯನಗರದ ಆಡಳಿತದ ಕಾಲಾವಧಿಯಲ್ಲಿ ಭೂಮಿಯ ದಾನದ ಪ್ರಕ್ರಿಯೆಗಳು ಹೆಚ್ಚು ಮಹತ್ವವನ್ನು ಪಡೆದವು. ಭೂಮಿಯ ಮೇಲಿನ ಬ್ರಾಹ್ಮಣರ ಒಡೆತನ ವಾಸ್ತವ್ಯದ ವಾರಸುದಾರಿಕೆಯ ಮೇಲೆ ಪರಿಣಾಮ ಬೀರಿತ್ತಲ್ಲದೇ, ಮೂಲವಾಸ್ತವ್ಯದ ವಾರಸುದಾರಿಕೆ ಬದಲಾವಣೆಗೆ ಒಳಪಟ್ಟಿರುವ ಸಾಧ್ಯತೆಗಳ ಬಗ್ಗೆ ಪರಿಶೀಲನೆ ಅಗತ್ಯ. ವಾಸ್ತವ್ಯವದ ವಾರಸುದಾರಿಕೆಯನ್ನು ಅವಲೋಕಿಸಿದಾಗ ಬ್ರಾಹ್ಮಣರು ತುಳುನಾಡಿನಲ್ಲಿ ವಾಸ್ತವ್ಯ ಹೂಡುವುದಕ್ಕೂ ಮುಂಚೆಯೂ, ನಂತರವೂ ಹಲವಾರು ಸಮುದಾಯಗಳು ಪರಸ್ಪರ ಜೀವನ ನಡೆಸಿದ ಸಂದರ್ಭಗಳು ಮೌಖಿಕವಾಗಿ ಪ್ರತಿಪಾದಿಸಲ್ಪಟಿದ್ದೆಯಲ್ಲದೇ, ಅಕರಗಳ ಸಮರ್ಥನೆಗಳೊಂದಿಗೆ ಚರಿತ್ರೆಯಲ್ಲೂ ಪ್ರಸ್ತಾಪಗೊಂಡಿದೆ. ಕೆಲವು ಪಾಡ್ದನಗಳು ಬಿಲ್ಲವರು, ಮೊಗವೀರರು, ಒಕ್ಕಲ್ಮರು ಅಕ್ಕ ತಂಗಿಯರ ಮಕ್ಕಳು ಎಂಬ ನಂಬಿಕೆಯನ್ನು ಹೊಂದಿದ್ದಾರೆ. ಇದಲ್ಲದೇ ತುಳುನಾಡಿನ ಮೂಲವಾಸ್ತವ್ಯ ಹೊಂದಿರುವ ಸುಮಾರು 42 ಸಮುದಾಯಗಳು ಸಮಾನ ಬಳಿಗಳನ್ನು ಹಂಚಿಕೊಂಡಿರುವುದರಿಂದ ಸಾಮಾನ್ಯವಾದ ಒಂದು ಮೂಲಸ್ಥಾನ ಇರಬಹುದೆಂಬ ಅಭಿಪ್ರಾಯವಿದೆ. ತುಳುನಾಡಿಗೆ ಜೈನರ ಪ್ರವೇಶಿಕೆ ಇಲ್ಲಿನ ವಾಸ್ತವ್ಯದ ವಾರಸುದಾರಿಕೆಗೆ ಹೊಸ ಆಯಾಮ ಒದಗಿಸಿತ್ತಲ್ಲದೇ, ಸುಮಾರು ಸಾಮಾನ್ಯಶಕೆ 10ನೇ ಶತಮಾನದಿಂದ ಪ್ರಾರಂಭಿಸಿ 19ನೇ ಶತಮಾನದ ಪೂರ್ವಾರ್ಧದ ವರೆಗೂ ತುಳುನಾಡು ಒಂದು ವಿಶಿಷ್ಟ ಸಾಂಸ್ಕೃತಿಕ ವಲಯವಾಗಿ ರಾಜಕೀಯದ ಮೂಲರಚನೆಯ ಸ್ವರೂಪದಲ್ಲಿ ಅಮೂಲಾಗ್ರ ಬದಲಾವಣೆಗೆ ಅವಕಾಶ ಮಾಡಿರುವುದು ಸ್ಪಷ್ಟ. ಹೀಗೆ ಬ್ರಾಹ್ಮಣರ ವಲಸೆ ಪ್ರಕ್ರಿಯೆಯಿಂದ ಪ್ರಾರಂಭಿಸಿ ಜೈನರ ರಾಜಕೀಯ ಉತ್ಕರ್ಷದ ಸಂದರ್ಭದಲ್ಲಿ ಭೂಒಡೆತನವನ್ನು ಹೊಂದಿದ್ದ ಕೆಲವೊಂದು ಮೂಲನಿವಾಸಿ ಪ್ರಭಾವಿಗಳು ಬ್ರಾಹ್ಮಣ–ಜೈನರೊಂದಿಗೆ ರಾಜಕೀಯ ಸಮೀಕರಣದ ನೆಲೆಯಲ್ಲಿ ಕೈಜೋಡಿಸಿ ಇಲ್ಲವೇ ಸಹಕಾರ, ಸಂಬಂಧವನ್ನು ಬೆಳೆಸಿಕೊಂಡು ಈ ಭಾಗದ ವಾಸ್ತವ್ಯದ ವಾರಸುದಾರಿಕೆಯ ಪರಿಕಲ್ಪನೆಗೆ ಹೊಸ ಆಯಾಮವೊಂದನ್ನು ಜೋಡಿಸಿದರು. ಮುಂದುವರೆದು ತುಳುನಾಡಿಗೆ ಇಸ್ಲಾಂ ಮತದ ಪ್ರವೇಶ, ಮಹಾರಾಷ್ಟ್ರ,

ಗೋವಾ ಮುಂತಾದ ಕಡೆಯಿಂದಾದ ಸಮುದಾಯಗಳ ವಲಸೆ ಪ್ರಕಿಯೆಗಳು, ಕ್ಯಾಥೋಲಿಕ್, ಬಾಸೆಲ್ ಮುಂತಾದ ಕ್ರೈಸ್ತಮತ ಚಿಂತನೆಗಳ ಹರಡುವಿಕೆ ಇಲ್ಲವೇ ಅವರ ಸಾಮಾಜಿಕ ಪರಿವರ್ತನೆ (ಮತಾಂತರ) ಹೊಸ ಆಯಾಮವನ್ನು ನೀಡಿತ್ತಲ್ಲದೇ, ವಾಸ್ತವ್ಯದ ವಾರಸುದಾರಿಕೆಯ ವಿಕಾಸದಲ್ಲಿ ತುಳುನಾಡು ಒಂದು ವಿಭಿನ್ನ ಪ್ರದೇಶವಾಗಿ ಗುರುತಿಸಿಕೊಂಡಿತು ಎನ್ನಲಡ್ಡಿಯಿಲ್ಲ.

ಪರಾಮರ್ಶನ ಗ್ರಂಥಗಳು

1. ಅಮೃತ ಸೋಮೇಶ್ವರ (ಸಂಪಾದಿತ) ತುಳು ಪಾಡ್ದನ ಸಂಪುಟ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾನಿಲಯ ಹಂಪಿ, 1997
2. ಅಮೃತ ಸೋಮೇಶ್ವರ ತುಳುವ ಜಾನಪದ : ಕೆಲವು ನೋಟಗಳು, ಪ್ರಸಾರಂಗ, ಕನ್ನಡ ವಿಶ್ವವಿದ್ಯಾನಿಲಯ ಹಂಪಿ, 2007
3. ಆಶಾಲತಾ ಸಿ.ಕೆ, ತುಳುವರ ಬಳಿ ಪದ್ಧತಿ–ಸ್ವರೂಪ ಮತ್ತು ಅನ್ವಯಿಕತೆ, ಅಪ್ರಕಟಿತ ಸಂಶೋಧನಾ ಪ್ರಬಂಧ, ಮಂ.ವಿ.ವಿ 2010
4. ಗಣಪಯ್ಯ ಭಟ್, ಪಿ. ತೌಳವ, ಸಿಂಧೂರ ಪ್ರಕಾಶನ ಮೂಡಬಿದ್ರಿ, 1997.
5. ಗುರುರಾಜ ಭಟ್ ಪಾದೂರು, ತುಳುನಾಡು, ಡಾ. ಪಾದೂರು ಗುರುರಾಜ ಭಟ್ ಮೆಮೋರಿಯಲ್ ಟ್ರಸ್ಟ್ (ರಿ) ಉಡುಪಿ, 2009.
6. ಗುರುಕ್ಕಳ್ ರಾಜನ್, ಟ್ರೈಬ್ಸ್, ಫಾರೆಸ್ಟ್ ಎಂಡ್ ಸೋಷಲ್ ಪಾರ್ಮೇಷನ್ ಇನ್ ಅರ್ಲಿ ಸೌತ್ ಇಂಡಿಯಾ (ಸಂಪಾದಿತ) ಬಿ.ಬಿ. ಚೌಧರಿ,
   ಅರುಣ್ ಬಂಡೋಪಾಧ್ಯಾಯ, ಐ.ಎಚ್.ಸಿ 2004
7. ಕೇಶವನ್ ವೇಲುತಾಟ್, ದ ಅರ್ಲಿ ಮಿಡಿವಲ್ ಸೌತ್ ಇಂಡಿಯಾ, ಅಕ್ಸ್ಫರ್ಡ್ ಯುನಿವರ್ಸಿಟಿ ಪ್ರೆಸ್ ನವದೆಹಲಿ, 2009
8. ಮೋಹನಕೃಷ್ಣ ರೈ.ಕೆ, ತುಳುನಾಡು ಕನ್ನಡನುಡಿ: ತುಳು ಕರ್ನಾಟಕದ ನಾಡು–ನುಡಿ ಚಿಂತನೆ, ಪ್ರಸರಾಂಗ ಕ.ವಿ.ವಿ ಹಂಪಿ 2012.
9. ಮೋಹನ ಕೃಷ್ಣ ರೈ.ಕೆ, ತುಳು ಸಂಸ್ಕೃತಿ ಚತುರ್ಮುಖಿ ಅಧ್ಯಯನ, ಪ್ರಸರಾಂಗ ಕನ್ನಡ ವಿಶ್ವವಿದ್ಯಾನಿಲಯ ಹಂಪಿ, 1999.
10. ಡಾ. ನವೀನ್, ತುಳುನಾಡಿನಲ್ಲಿ ವಾರಸುದಾರಿಕೆಯ ಆಯಾಮಗಳು–ವಸಾಹತುಷಾಹಿ ಆಡಳಿತ, ಅಪ್ರಕಟಿತ ಪಿ.ಎಚ್.ಡಿ ಪ್ರಬಂಧ, ಹಂಪಿ ವಿಶ್ವವಿದ್ಯಾನಿಲಯ ಕಮಲಾಪುರ, 2015.
11. ನಾಗೇಂದ್ರ ರಾವ್, ಬ್ರಾಹ್ಮಣಾಸ್ ಆಫ್ ಸೌತ್ ಇಂಡಿಯಾ, ಕಲ್ಪಾಸ್ ಪಬ್ಲೀಕೇಷನ್ಸ್ ನವದೆಹಲಿ, 2005.
12. ಪುರುಷೋತ್ತಮ ಬಿಳಿಮಲೆ, ಕರಾವಳಿ ಜಾನಪದ, ಶಾರದಾ ಪ್ರೆಸ್ ಮಂಗಳೂರು 1990.
13. ಪುರುಷೋತ್ತಮ ಬಿಳಿಮಲೆ, ಕೊರಗರ ಸಂಸ್ಕೃತಿ, ಬೆಂಗಳೂರು, 1993.
14. ರಘುಪತಿ ಕೆಮ್ತೂರು, ತುಳುನಾಡಿನ ಸ್ಥಳನಾಮಾಧ್ಯಯನ, ಚರಿತ್ರೆ ಮತ್ತು ಪುರಾತತ್ವಶಾಸ್ತ್ರ ವಿಭಾಗ, ಎಂ.ಎಸ್, ಆರ್. ಎಸ್ ಕಾಲೇಜು, ಶಿರ್ವ, 2017
15. ರೊಮಿಲಾ ಥಾಪರ್, ದ ಹಿಸ್ಟರಿ ಆಫ್ ಅರ್ಲಿ ಇಂಡಿಯಾ, ಹೊಸದೆಹಲಿ, ಪೆಂಗ್ವಿನ್ ಪ್ರಕಾಶನ, 2002.
16. ಸಾಲೆತ್ತೂರ್ ಬಿ.ಎ, ಎನಿಶಿಯಂಟ್ ಕರ್ನಾಟಕ, ಹಿಸ್ಟರಿ ಆಫ್ ತುಳುವ, ಒರಿಯೆಂಟ್ ಬುಕ್ ಏಜೆನ್ಸಿ ಪೂನಾ. 1936.
17. ವಸಂತ ಶೆಟ್ಟಿ ಬಿ. ದಕ್ಷಿಣಕನ್ನಡದಲ್ಲಿ ನೂತನ ಶಿಲಾಯುಗ, ಇತಿಹಾಸ ದರ್ಶನ ಸಂಪುಟ 2, 1987
18. ವಾಸುದೇವನ್.ಸಿ, ದ ಕೊರಗಾಸ್, ದ ಪರ್ಗಟನ್ ಲಾಟ್, ಪ್ರಿಮಿಟಿವ್ ಟ್ರೈಬ್ಸ್ ಆಫ್ ತುಳುನಾಡು, ತ್ರಿಚೂರ್ 1998.

❖❖❖

ಯಾದವ ದೊರೆ 2ನೇ ಸಿಂಘಣದೇವನ ಅಪ್ರಕಟಿತ ಶಾಸನ

ಡಾ. ಕೆ.ಎಸ್. ಪಾಟೀಲ
ಇತಿಹಾಸ ಸಹ ಪ್ರಾಧ್ಯಾಪಕರು
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಲಘಟಗಿ, ಜಿ: ಧಾರವಾಡ

ಗದಗ ಜಿಲ್ಲೆ ಮುಂಡರಗಿ ತಾಲೂಕಿನ ಶಿಂಗಟಾರಾಯನ ಕೆರೆ ತಾಂಡಾದಿಂದ ಪಶ್ಚಿಮಕ್ಕೆ ಸುಮಾರು 2 ಕಿ.ಮೀ ಅಂತರದಲ್ಲಿ ಸಂಕಣ್ಣವರ ಬಾವಿಯ ಮೇಲೆ ದೊರೆತ ಈ ಶಾಸನವು ಯಾದವ ದೊರೆಯ 2ನೇ ಸಿಂಘಣನ ಇತಿಹಾಸಕ್ಕೆ ಹೆಚ್ಚು ಬೆಳಕನ್ನು ಚೆಲ್ಲುತ್ತದೆ. ಗದಗ ಪರಿಸರದಲ್ಲಿನ ಪ್ರಕಟಿತ ಶಾಸನಗಳಲ್ಲಿ ಸಿಂಘಣನ ದಿಗ್ವಿಜಯವನ್ನು ಕುರಿತು ವಿಷಯವನ್ನು ತಿಳಿಸುವ ಶಾಸನಗಳು ವಿರಳ ಆದರೆ ಈ ಶಾಸನದಲ್ಲಿ ಗೋವಾ ಕದಂಬ ದೊರೆ ಜಯಕೇಶಿಯನ್ನು ಬೆನ್ನತ್ತಿ (ಬೆನ್ನೊಂಡ) ಸೋಲಿಸಿದನೆಂದು ಹಾಗೂ ಮಾಳವದ ಮೇಲಿನ ವಿಜಯದ ಉಲ್ಲೇಖವಿದೆ.

ತ್ರಿಭುವನಮಲ್ಲ ಮನೋಹರ ನಭಿನವ ಚಕ್ರೇಶ
ಮೂರ್ತಿನ್ನೃಪಕುಳ ತಿಳಕಂ ವಿಭವಗುಣಾನ್ವಿತನೀತಂ
ಪ್ರಭವಿಸಿದಂ ಸಾಮರ್ಥ್ಯದಿಂದ ಸಿಂಹಣದೇವಂ
ತಲೆಗೊಂಡಂ ತೆಲುರಾಯನಾಪೊದರ್ಪಿಂ ಬಾಜಮೆತ್ತಿ
ಬಾಳ್ದಲುಗೊಂಡ ಜಯಕೇಸಿಂ ಬದರಿಂ ಬೆಂಕೊಂಡ
ಪ್ರಚಂಡಾವನೀತಳನಾಗ್ರಣಿಯಪ್ಪ ಮಾಳವನ
ರಾಜ್ಯಶ್ರೀಯನ್ ಇಳ್ಕೊಂಡನ್ ಅಸ್ಖಲಿತಂ ತಾನೆನೆ
ಮಾ ದಿಮ್ಮೆತಳೆಯೊಳಾ ಶ್ರೀಸಿಂಹಣ ಭೂಪಾಳಂ ॥

ಈ ಮೇಲಿನ ಶಾಸನದ ಸಾಲುಗಳಲ್ಲಿ ಸಿಂಘಣನ ದಿಗ್ವಿಜಯ ಸ್ಪಷ್ಟವಾಗಿದೆ. ಈ ಶಾಸನವು ಸಿಂಘಣನನ್ನು ಸಮಸ್ತಭುವನಾಶ್ರಯ, ಶ್ರೀಪೃಥ್ವಿವಲ್ಲಭ, ಮಹಾರಾಜಾಧಿರಾಜ, ಪರಮೇಶ್ವರ, ಯಾದವಕುಳತಿಳಕ ಪ್ರಥಮಚಕ್ರವರ್ತಿ ಎಂಬ ಬಿರುದುಗಳಿಂದ ವರ್ಣಿಸಿದೆ. ಸಿಂಘಣದೇವನ ಆಳ್ವಿಕೆಯ 24ನೇ ವರ್ಷದ ಅಂದರೆ ಕ್ರಿ.ಶ 1223 ಮಾರ್ಚ್ 12 ಭಾನುವಾರ ಸ್ವಭಾನು ಸಂವತ್ಸರದ ಚೈತ್ರ ಶುದ್ಧ ಉತ್ತರಾಯಣ ಸಂಕ್ರಾಂತಿ ಎಂದು ಸೂರ್ಯಗ್ರಹಣದಲ್ಲಿ ಮೂಡಗೆರೆಯ ಶ್ರೀಧರ ದೇವರಿಗೆ ಲಕ್ಕುಂಡಿಯ ಚಿನ್ನಗಣಿಕದ ಹಾಗೂ ಸಮಸ್ತ ನಖರಂಗಳು ಮುಖ್ಯವಾಗಿ ಹಿರಿಯ ಕಮ್ಮಟದಿಂದ ಅಂದರೆ ನಾಣ್ಯಗಳ ಟಂಕಶಾಲೆಯಿಂದ ಬರುವ ಉತ್ಪನ್ನವನ್ನು ಹೊಂಗನೂರ ಕೆರೆಗೆ ದಾನ ನೀಡಿದರು. ಮತ್ತು ಮೂಡಗೆರೆಯ ಊರ ಮುಂದಿನ ಹಳ್ಳದಿಂದ ದಕ್ಷಿಣಕ್ಕೆ, ಪಶ್ಚಿಮಕ್ಕೆ ಹಾಗೂ ಪೂರ್ವದ ಮೂಲೆಯ 12 ಮತ್ತರು ಭೂಮಿಯನ್ನು ಹಾಗೂ ದಕ್ಷಿಣ ದಿಕ್ಕಿನ ಹಳ್ಳದ ಬಳಿ ಇರುವ ಎರಡು ಮತ್ತರು ಭೂಮಿಯನ್ನು ಬ್ರಾಹ್ಮಣರಿಗೆ ದಾನ ಬಿಟ್ಟರು.

ಶಾಸನದ ಪ್ರಮುಖ ಅಂಶಗಳು

1. ಯಾದವ ಸಿಂಘಣ ದೇವನ ಇತಿಹಾಸಕ್ಕೆ ಹೊಸದೊಂದು ಶಾಸನ ಸೇರ್ಪಡೆ.

2. ಲೊಕ್ಕಿಗುಂಡಿಯ ಚಿನ್ನದ ವ್ಯಾಪಾರಿಗಳ ಸಮೂಹ ಹಾಗೂ ಇಲ್ಲಿನ ಠಂಕಶಾಲೆಯ ಉಲ್ಲೇಖ.
3. ಹೊಂಗನೂರು ಕೆರೆಗೆ ಬಂಗಾರದ ಹಾಗೂ ಭೂಮಿ ದಾನ ಮಾಡುವ ಉಲ್ಲೇಖ.
4. ಸಿಂಘಣನ ದಿಗ್ವಿಜಯ ಹೇಳುವ ಗದಗ ಪರಿಸರದ ಪ್ರಮುಖ ಶಾಸನ.
5. ಈ ಶಾಸನದಲ್ಲಿ ಬೆಳ್ಳಿಯ ಮಠದ ಶಿವಶಕ್ತಿ ದೇವರ ಉಲ್ಲೇಖವಿದೆ, ಆದರೆ ಈ ಬೆಳ್ಳಿಯ ಮಠ ಎಲ್ಲಿದೆ ಎಂಬುದು ಹಾಗೂ ಈ ಮಠಕ್ಕೂ ಮತ್ತು ಹಿರಿಯ ಕಮ್ಮಟಕ್ಕೆ ಬರುವ ಬೆಳ್ಳಿಯ ಭಟರ ನಡುವೆ ಯಾವ ಸಂಬಂಧ ಇತ್ತೆಂದು ತಿಳಿದು ಬರುತ್ತಿಲ್ಲ.
6. ಈ ಶಾಸನದಲ್ಲಿ ತಿಳಿಸುವ ಹಿರಿಯ ಕಮ್ಮಟ ಮತ್ತು ಅದಕ್ಕೆ ಆಗಮಿಸುತ್ತಿದ್ದ ಬೆಳ್ಳಿಯ ಭಟರ ಉಲ್ಲೇಖ ಬಹಳ ಮುಖ್ಯವಾಗಿದೆ. ಲಕ್ಕಿಗುಂಡಿ ಕಮ್ಮಟ, ಹಿರಿಯ ಕಮ್ಮಟ, ದೊಡ್ಡ ಕಮ್ಮಟ ಅಥವಾ ಪ್ರಾಚೀನ ಕಮ್ಮಟವಾಗಿತ್ತೆಂದು ಇದಕ್ಕೆ ನಾನಾ ಸ್ಥಳಗಳಿಂದ ಚಿನ್ನ ಹಾಗೂ ಬೆಳ್ಳಿಯನ್ನು ತಂದು, ಅಚ್ಚು ಹಾಕಿಸಿಕೊಂಡು ಹೋಗುತ್ತಿದ್ದರೆಂಬ ಮಹತ್ವದ ವಿಷಯ ತಿಳಿಯುತ್ತದೆ. ಹೀಗೆ ಕಮ್ಮಟಕ್ಕೆ ಬರುತ್ತಿದ್ದ ಬೆಳ್ಳಿಯ ಭಟರು ತಾವು ತಂದ ಬಂಗಾರವನ್ನು ಕೆರೆಯ ನಿರ್ಮಾಣಕ್ಕೆ ದಾನ ಬಿಟ್ಟು ವಿಷಯದ ಉಲ್ಲೇಖವಿದೆ. ಶಾಸನದಲ್ಲಿ ಉಲ್ಲೇಖವಾದ ಮೂಡಗೆರೆ ಗ್ರಾಮವೇ ಈಗಿನ ಶಿಂಗಟನರಾಯನ ಕೇರಿ ಇರಬಹುದು, ಇಲ್ಲವೇ ಸಿಂಘಣನ ಹೆಸರಿನಿಂದ ಈ ಊರಿಗೆ ಶಿಂಗಟರಾಯನ ಕೇರಿ ಎಂದು ಹೆಸರು ಬಂದಿರಬಹುದು. ಒಟ್ಟಿನಲ್ಲಿ ಈ ಶಾಸನ 2ನೇ ಸಿಂಘಣನ ಚರಿತ್ರೆಗೆ ಒಂದು ಪ್ರಮುಖ ಆಕರವಾಗಿದೆ.

ಶಾಸನದ ಪಾಠ

1. ನಮಸ್ತುಂಗ ಸಿರಸುಂ ಚಂದ್ರಚಾಮರ ಚಾರವೇತ್ರ
2. ಯಳೋಕ್ಯ ನಗರಾರಂಭ ಮೂಲ ಸ್ತಂಬಾಯ
   ಸಂಬವೇ –
3. ಶ್ರೀಭುವನಮಲ್ಲ ಮನೋಹರನಭಿನವ ಚಕ್ರೇಶ ಮೂರ್ತಿ
   ನ್ರಿಪ ಕುಳ ತಿಳಕಂ ವಿ
4. ಭವಗುಣಾನ್ವಿತ ನೀತಂ ಪ್ರಭವಿಸಿದಂ ಸಾಮರ್ಥ್ಯದಿಂದ
   ಸಿಂಹಣ ದೇವಂ
5. ತಲೆಗೊಂಡಂ ತೆಲುರಾಯನಾ ಪೊದರ್ಪಿಂ ಭಾಟ
   ಮೆತ್ತಿ ಬಾಳ್ದಲುಗೊಂಡ
6. ಜಯಕೆಸಿಂ ಬುದುರು ಬೆಂಕೊಂಡಂ ಪ್ರಚಂಡಾನ
   ನೀತಳನಾಗ್ರಣಿಯ
7. ಪ್ಪಮಾಳವನ ರಾಜ್ಯಶ್ರೀಯನಿಳ್ಕೊಂಡನಸ್ಖಳಿತಂ
   ತಾನೆನೆಮಾ
8. ದಿ ಮೈತಳೆ ಯೊಳಾ ಶ್ರೀ ಸಿಂಹಣ ಭೂಪಾಳಕಂ ಸ್ವಸ್ತಿ
9. ಸಮಸ್ತ ಭುವನಾಶ್ರಯಂ ಶ್ರೀ ಪೃಥ್ವಿವಲ್ಲಭಕಂ
   ಮಹಾರಾಜಾಧಿರಾಜಂ

10. ಪರಮೇಶ್ವರಂ ಯಾದವ ಕುಳಥಿಳಕಂ ಪ್ರತಾಪ ಚಕ್ರ
(ವ) ರ್ತಿ ಶ್ರೀ ಸಿಂ
11. ಹಣ ದೇವ ವಿಜಯ ರಾಜ್ಯಮುತ್ತರೋತ್ತರಾಭಿವೃದ್ಧಿ
ಪ್ರವರ್ಧಮಾ
12. ನಮಾಚಂದ್ರಾರ್ಕ ತಾರಂಭರಂ ಸಲುಮಿತ್ತಮಿರೆ ॥
ಸ್ವಸ್ತಿ ಯಮನಿ
13. ಯಮ ಸ್ವಾಧ್ಯಾಯಧ್ಯಾನ ಧಾರಣ ಮೋನಾನುಷ್ಟಾನ
ಪಾರಾಯಣರು ॥
14. ಶ್ರೀ ವೀರದೇವರ ಮುದದಿಂದಾರು ಗುಣನಿಧಿ . . .
15. ವಂಶ ಶ್ರೀ ಮಾಧವದೇವಂ ಎರಬೆ ಮಾಡಿಸಿ ಅ .
ಯ ನಿರುಪ .. (ನಾಣಗೆ)
16. ಲೊಕ್ಕಿಗುಂಡಿ ಪುರದೊಳು ॥ ಮಾನವ ಧರ್ಮವಿಳ
ಸಂನ್ಮಾನಂ ಗುಣ ...
17. ವೈಷ್ಣವೋತ್ತಮನದರಿಂ ಮಾನವರೊಳಧೀಕ ಪುಣ್ಯಂ
ಭೂನೂತಣಣುದ...
18. ನೆಗಳ .ಕಮದೇವಂ ಶ್ರೀವಧುವಿಂಗಗ್ಗಳ ಮೆನಲಿದು
ಚತುರ ಮಾ ..
19. ಧನಕ್ಷ್ಮಿವತಿತೆ ಕತನ ಸತಿ ಸೀಲವತಿಯನೆ ಉಂಮು ಬಾಯಿಗಂ ಪರರ
20. ಳವ ॥ ಸ್ವಸ್ತಿಯಮ ನಿಯಮ ಸ್ವಾಧ್ಯಾಯ ಧ್ಯಾನ ದಾನಧಾರಣಮೋನಾನುಷ್ಟಾನ
21. ಸಮಾಧಿ ಸೀಲಗುಣ ಸಂಪನ್ನರಪ್ಪ ಬೆಳ್ಳಿಯ ಮಠದ ಸಿವಸಕ್ತಿದೇವ.
22. ಪಾದಪಚ್ಚಕ ಮಾಡಿಕೊಟ್ಟರು ॥ ಸ್ವಸ್ತಿಶ್ರೀಮತು ಯಾದವನಾರಾಯಣಂ ಪ್ರ
23. ತಾಪ ಚಕ್ರವರ್ತಿ ಸಿಂಹಣದೇವ ವರ್ಷದ 24 ನೆಯ
ಸ್ವಭಾನು ಸಂವತ್ಸ(ರ)ದ
24. ಚೈತ್ರ ಶುದ್ಧ ಉತ್ತರಾಯಣ ಸಂಕ್ರಾಂತಿ ಭ್ಯತಿಯ ಪಾತ ಸೂರ್ಯಗ್ರಹ
25. ಣಂ ಯಾದಿವಾರದಲು ಮೂಡಗೆರೆಯಲು ಶ್ರೀಧರ ದೇವರ್ಗೆ ಲೊಕ್ಕಿಗುಂಡಿ
26. ಯ ಚನ್ನಗಣಿಕದ ಸಮಸ್ತ ನಖರಂಗಳು ಮುಖ್ಯವಾಗಿ ಹಿರಿಯ ಕಂಮ
27. ಟಕಂ ಬಹ (ಬೆಳ್ಳಿಯ) ಬಟರು ತಾವು ತಂದ
ಬಂಗಾರವಂ ಬೇಡಿದ ಹೊಂಗನೂರ
28. ಕೆರೆಗುಂ ॥ ಬಿಟ್ಟರು ಮತ್ತಮುಡುಗೆರೆಯ
ವೂರಮುಂದಣ ಹಳ್ಳದಿಂ ತೆಂಕಲು
29. ಪಡುವಲು ಬಿಟ್ಟಕೇಯಿ ಮೂಡಲಿಂ ಮೂಲೆಯ
ಬಿಟ್ಟಕೇಯಿ ಮತ್ತರು ಹಾ 12 ಬಳಾ (ಳ್ಳ)
30. ವೂರ ಮೂರು ಕೇಯಿ ತೆಂಕಣ ಹಳ್ಳದಿಂ ಬಳಯಿಂ ಮೂಡಲು ಬ್ರಾಹ್ಮಣರಿಗೆ ಬಿ
31. ಟ್ಟ ಕೇಯಿ ಮತ್ತರು ಎರಡು ಯಲಿಯ ಗದ್ದೆಯ ಪಾಲಿಸುವ

❖❖❖

ಸ್ವಾತಂತ್ರ್ಯ ಹೋರಾಟ– ಹಾಗೆಂದರೇನು?

ಅಜಕ್ಕಳ ಗಿರೀಶ ಭಟ್
ಪ್ರೊಫೆಸರ್, ಸರಕಾರಿ ಪ್ರಥಮ ದರ್ಜೆ ಕಾಲೇಜು, ಸಿದ್ಧಕಟ್ಟೆ– 574237

ನಾರಾಯಣ ಶೇವಿರೆ ಮತ್ತು ಎಂ.ಎನ್. ರವೀಂದ್ರ ಅವರು ಬರೆದಿರುವ 'ಭಾರತೀಯ ಸ್ವಾತಂತ್ರ್ಯ ಸಂಗ್ರಾಮ' ಎನ್ನುವ ಪುಸ್ತಕ ಇತ್ತೀಚೆಗೆ ಸಿಕ್ಕಿತು. (ಪ್ರ: ರಾಷ್ಟ್ರೋತ್ಥಾನ ಸಾಹಿತ್ಯ, 2023). ಪುಸ್ತಕದ ಶೀರ್ಷಿಕೆಯಷ್ಟೇ ಇರುತ್ತಿದ್ದರೆ ನಾನು ಇದನ್ನು ಆದ್ಯತೆಯಲ್ಲಿ ಓದುತ್ತಿದ್ದೆನೋ ಇಲ್ಲವೋ ಹೇಳಲಾರೆ. ಆದರೆ ಪುಸ್ತಕದ ಉಪಶೀರ್ಷಿಕೆ 'ತಾತ್ತ್ವಿಕ ಭೂಮಿಕೆ; ಸಂಘರ್ಷದ ವಾರಸಿಕೆ' ನನ್ನ ಗಮನವನ್ನು ಸೆಳೆಯಿತು. ಪುಸ್ತಕವನ್ನು ತಕ್ಷಣವೇ ಓದುವಂತೆ ಮಾಡಿತು. 116 ಪುಟಗಳ ಈ ಸಣ್ಣ ಪುಸ್ತಕ ಸ್ವಾತಂತ್ರ್ಯ, ಸ್ವತ್ವ ಮುಂತಾದ ಪರಿಕಲ್ಪನೆಗಳ ಬಗ್ಗೆ ನಮ್ಮಲ್ಲಿ ಸ್ಪಷ್ಟತೆಯನ್ನು ತರುತ್ತದೆ. ಸ್ವಾತಂತ್ರ್ಯಕ್ಕಾಗಿ ನಡೆದ ಸಂಘರ್ಷದ ವಿವಿಧ ನೆಲೆಗಳ ಸ್ಥೂಲ ಪರಿಚಯವನ್ನು ಮಾಡಿಕೊಡುತ್ತದೆ.

ಪುಸ್ತಕದ ಮೊದಲ ಭಾಗದಲ್ಲಿ ಸ್ವಾತಂತ್ರ್ಯದ ತಾತ್ತ್ವಿಕ ಭೂಮಿಕೆಯ ಬಗ್ಗೆ ಶೇವಿರೆಯವರ ಬರಹವಿದ್ದರೆ, ಎರಡನೆಯ ಭಾಗದಲ್ಲಿ ಸ್ವಾತಂತ್ರ್ಯಕ್ಕಾಗಿ ನಡೆದ ಸಂಘರ್ಷದ ವಾರಸಿಕೆಯ ಬಗ್ಗೆ ಎಂ. ಎನ್. ರವೀಂದ್ರ ಅವರು ಬರೆದ ಬರಹವಿದೆ. ಮೊದಲ ಭಾಗದಲ್ಲಿ ಹೇಳಿದುದು ನಮಗೆ ಸ್ಪಷ್ಟವಾದರೆ ಎರಡನೆಯ ಭಾಗದಲ್ಲಿ ಹೇಳಲಾದ ಅಂಶಗಳು, ಅಂದರೆ ಯಾರೆಲ್ಲ ಅಂತಹ ಸ್ವತ್ವಕ್ಕಾಗಿ ಸಂಘರ್ಷ ನಡೆಸಿದರು ಎನ್ನುವುದನ್ನು ಗುರುತಿಸುವುದು ಸುಲಭ. ಈ ಪುಸ್ತಕದ ಓದಿನ ಹಿನ್ನೆಲೆಯಲ್ಲಿ ರೂಪುಗೊಂಡ ನನ್ನ ಚಿಂತನೆಯನ್ನು ಇಲ್ಲಿ ದಾಖಲಿಸುತ್ತಿದ್ದೇನೆ.

'ಸ್ವಾತಂತ್ರ್ಯ ಹೋರಾಟಗಾರ' ಎನ್ನುವುದು ಅಕರ್ಷಕ ಪದಪುಂಜ. ಬ್ರಿಟಿಷರ ಆಳ್ವಿಕೆಯ ವಿರುದ್ಧ ಭಾರತವ್ಯಾಪಿ ಜಾಗೃತಿ ಉಂಟಾದ ಬಳಿಕ ಅಂದರೆ ನಿಜವಾದ ಅರ್ಥದಲ್ಲಿ ದೇಶವ್ಯಾಪಿಯಾದ 'ರಾಜಕೀಯ ರಾಷ್ಟ್ರೀಯ ಭಾವನೆ'ಯು ಹುಟ್ಟಿದ ನಂತರದ ಹೋರಾಟಗಾರರನ್ನು ಸ್ವಾತಂತ್ರ್ಯ ಹೋರಾಟಗಾರರು ಎಂದು ಕರೆಯುವುದರ ಬಗ್ಗೆ ಯಾವ ಗೊಂದಲವೂ ಈ ವರ್ತಮಾನ ಕಾಲದಲ್ಲಿ ಇಲ್ಲ.

ರಾಜಕೀಯ ಅಥವಾ ಆಡಳಿತಕ್ಕೆ ಸಂಬಂಧಿಸಿದ 'ರಾಷ್ಟ್ರೀಯ ಭಾವನೆ' ಎಂದೆ. ಅದಕ್ಕೆ ಕಾರಣವಿದೆ. ಭಾರತದಲ್ಲಿ 'ಭಾರತಸಾಮಾನ್ಯ'ವಾದ 'ರಾಷ್ಟ್ರ'ದ ಕಲ್ಪನೆ ಪ್ರಾಚೀನ ಕಾಲದಿಂದಲೇ ಇತ್ತು. ಅದು ಪಶ್ಚಿಮದ ಸಂಕುಚಿತ ಅರ್ಥದ 'ನೇಶನ್' ಎಂಬ ಕಲ್ಪನೆ ಅಲ್ಲ. ಇಂದಿಗೂ ಬಾರತದಲ್ಲಿ 'ರಾಷ್ಟ್ರೀಯವಾದ' ಎಂಬುದನ್ನು 'ನೇಶನಲಿಸಂ' ಎಂದು ಕರೆಯುವುದು ಸರಿಯಲ್ಲ. ಯಾಕೆಂದರೆ ಭಾರತದ ರಾಷ್ಟ್ರ ಕಲ್ಪನೆಯು ಏಕಸಂಸ್ಕೃತಿಯ ಕಲ್ಪನೆಯದಲ್ಲ. ಅದು ಬಹುಸಂಸ್ಕೃತಿಗಳುಳ್ಳ ಸಾಂಸ್ಕೃತಿಕ ರಾಷ್ಟ್ರದ ಕಲ್ಪನೆ. ಅದು ಬೇರೆಯದೇ ಚರ್ಚೆ. ಇಲ್ಲೀಗ ಮುಂದುವರಿಸುವುದು ಬೇಡ.

ಭಾರತಸಾಮಾನ್ಯವಾದ ರಾಜಕೀಯಪ್ರಜ್ಞೆ ಅಥವಾ ಆಳುವವರ ನೀತಿಗಳು ಸಮುದಾಯಗಳ ಸ್ವತ್ವ ಅಥವಾ ಸ್ವಾತಂತ್ರ್ಯದ ಮೇಲೆ ಉಂಟುಮಾಡಿದ ಪರಿಣಾಮದ ಬಗೆಗಿನ ಜಾಗೃತಿ ಮತ್ತು ಅದರ ವಿರುದ್ಧ ಹೋರಾಡಬೇಕು ಎನ್ನುವ ಮನೋಭಾವ ಉಂಟಾದ ನಂತರದ್ದನ್ನು ನಾವು ಭಾರತವ್ಯಾಪ್ತಿಯ 'ರಾಜಕೀಯ ರಾಷ್ಟ್ರೀಯ ಭಾವನೆ' ಎನ್ನಬಹುದು.

ಈ ಬಾರತಸಾಮಾನ್ಯವಾದ 'ರಾಜಕೀಯ ರಾಷ್ಟ್ರೀಯ ಭಾವನೆ' ಹುಟ್ಟಬೇಕಾದರೆ ಅದರ ಮೂಲದಲ್ಲಿ ಇದ್ದುದು ಭಾರತಸಾಮಾನ್ಯವಾದ ಒಂದು 'ಸಾಂಸ್ಕೃತಿಕ ರಾಷ್ಟ್ರೀಯ ಭಾವನೆ'ಯೇ.

ಒಟ್ಟಿನಲ್ಲಿ, 'ಆಳುವವರ ಕಾರಣದಿಂದಾಗಿ ನಾವು ನಮ್ಮ ಸ್ವತ್ವವನ್ನು ಕಳೆದುಕೊಂಡಿದ್ದೇವೆ; ರಾಜ್ಯವನ್ನು ಆಳುವವರ ನೀತಿಗಳ ಕಾರಣದಿಂದಾಗಿ ನಮ್ಮ ಜೀವನಪದ್ಧತಿಗಳನ್ನು, ನಮ್ಮ ಸಂಸ್ಕೃತಿಯನ್ನು ಉಳಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ' ಎಂಬ ಅರಿವಿನೊಂದಿಗೆ ನಮ್ಮತನವನ್ನು ಉಳಿಸಿಕೊಳ್ಳಬೇಕು ಎನ್ನುವ ನಿಟ್ಟಿನಲ್ಲಿ ನಡೆದ ಹೋರಾಟದ ಹಿಂದೆ 'ರಾಜಕೀಯ– ಸಾಂಸ್ಕೃತಿಕ ರಾಷ್ಟ್ರೀಯ ಭಾವನೆ' ಇತ್ತು.

ಸ್ವಾತಂತ್ರ್ಯವನ್ನು ಹೀಗೆ ಅರ್ಥೈಸಿದಾಗ ಬ್ರಿಟಿಷರ ವಿರುದ್ಧ ನಡೆದ ಹೋರಾಟವನ್ನು ಸ್ಥೂಲವಾಗಿ ನಾಲ್ಕು ನೆಲೆಗಳಲ್ಲಿ ಗುರುತಿಸಲು ಸಾಧ್ಯವಿದೆ. ಒಂದು: ರಾಜ ರಾಣಿಯರು ತಮ್ಮ ರಾಜ್ಯಗಳನ್ನು ಅಥವಾ ಆಡಳಿತವನ್ನು ಉಳಿಸಿಕೊಳ್ಳಲು ಅಥವಾ ವಿಸ್ತರಿಸಿಕೊಳ್ಳಲು ಬ್ರಿಟಿಷರ ವಿರುದ್ಧ ತಮ್ಮ ಸೈನ್ಯದೊಂದಿಗೆ ನಡೆಸಿದ ಹೋರಾಟ. ಇದು ಅಖಿಲಭಾರತ ವ್ಯಾಪ್ತಿಯದಲ್ಲ. ಸ್ಥಳೀಯವಾದುದು. ಸಾಮಾನ್ಯ ಜನರ ಪಾಲುಗೊಳ್ಳುವಿಕೆ ಇಲ್ಲ. ಎರಡು: ಬ್ರಿಟಿಷರ ನೀತಿಯು ತಮ್ಮ ಸಂಸ್ಕೃತಿಗೆ ಧಕ್ಕೆ ತರುತ್ತದೆ ಎಂದುಕೊಂಡು 1857ರಲ್ಲಿ ಸೈನಿಕರು ನಡೆಸಿದಂತಹ ಹೋರಾಟ. ಇದೂ ಕೂಡ ಇಡೀ ಭಾರತಕ್ಕೆ ಸಂಬಂಧಿಸಿದ್ದಲ್ಲ. ಸಾಮಾನ್ಯ ಜನರದ್ದೂ ಅಲ್ಲ. ಮೂರು: 1837ರ ಸುಳ್ಯದ ಹೋರಾಟದಂತಹದು. ಇದು ಬ್ರಿಟಿಷರ ನೀತಿಯ ವಿರುದ್ಧ ಸಾಮಾನ್ಯ ಜನರನ್ನು ಒಳಗೊಂಡ ಹೋರಾಟವೇ ಆದರೂ ಸ್ಥಳೀಯವಾದುದು. (ಸ್ವಸಂಸ್ಕೃತಿ ಅಥವಾ ಸ್ವತ್ವದ ಕಲ್ಪನೆಗಿಂತಲೂ ಭೂಕಂದಾಯ ಇತ್ಯಾದಿ ಆಡಳಿತ ಸಂಬಂಧಿ ವಿಚಾರಗಳು ಇದರಲ್ಲಿ ಮುಖ್ಯ ಪಾತ್ರ ವಹಿಸಿರಬೇಕು). ನಾಲ್ಕು: ಜೀವನದ ಎಲ್ಲ ಅಂಶಗಳ ಮೇಲೂ ಆಳುವವರ ನೀತಿಗಳ ಪರಿಣಾಮ ಉಂಟಾಗುವುದು; ಹೊಸ ಕಂದಾಯನೀತಿ ಇತ್ಯಾದಿ ಆಡಳಿತಸಂಬಂಧೀ ಸಂಗತಿಗಳು ಮಾತ್ರ ಅಲ್ಲದೆ ಆಳಿಸಿಕೊಳ್ಳುವವರ ಸಂಸ್ಕೃತಿಯ ಸ್ವತ್ವದ ನಾಶವನ್ನೂ ಆಳುವವರು ಪ್ರಜ್ಞಾಪೂರ್ವಕವಾಗಿ ಮಾಡುವುದು; ಈ ಬಗ್ಗೆ ಉಂಟಾದ ಜಾಗೃತಿಯ ಕಾರಣದಿಂದಾಗಿ ಆಗುವ ಹೋರಾಟ.

ಮೇಲೆ ಹೇಳಿದಂತಹ ಭಾರತವ್ಯಾಪಿ 'ರಾಜಕೀಯ ರಾಷ್ಟ್ರೀಯ ಬಾವನೆ'ಯು ಹುಟ್ಟುವ ಮೊದಲು ಯುರೋಪಿಯನ್ನರ ವಿರುದ್ಧ ಹೋರಾಡಿದ ರಾಜ–ರಾಣಿಯರನ್ನು ಕೂಡ ದೇಶದ 'ಸ್ವಾತಂತ್ರ್ಯಕ್ಕಾಗಿ ಹೋರಾಡಿದವರು' ಎಂದು ಕರೆಯುವುದು ಕೂಡ ಇದೆ. ಇದರಲ್ಲಿ ನಮ್ಮ ನಮ್ಮ ಇಷ್ಟಾನಿಷ್ಟದ ಪ್ರಶ್ನೆಯೂ ಇರುತ್ತದೆಯೆನ್ನಿ.

ದೇಶೀಯ ರಾಜ/ ರಾಣಿಯರು ತಮ್ಮ ಆಡಳಿತವನ್ನು ಉಳಿಸಿಕೊಳ್ಳಲು ಬ್ರಿಟಿಷರ ವಿರುದ್ಧ ಹೋರಾಡಿದುದನ್ನೂ ಸ್ವಾತಂತ್ರ್ಯ ಹೋರಾಟ ಎಂದು ಕರೆಯುವುದು ತಾಂತ್ರಿಕವಾಗಿ ತಪ್ಪಲ್ಲ. ಗಣತಂತ್ರ ಮೊದಲಾದ ಪದಗಳಲ್ಲಿ ಇರುವಂತೆ, ತಂತ್ರ ಎಂದರೆ ಆಡಳಿತ, ರೂಲ್ ಎಂಬರ್ಥ ಸಂಸ್ಕೃತದಲ್ಲಿದೆ. ಈ ಅರ್ಥದಲ್ಲಿ ಅಂದಿನ ರಾಜರೆಲ್ಲ ತಮ್ಮ 'ಸ್ವಂತ' 'ತಂತ್ರ'ವನ್ನು ಉಳಿಸಿಕೊಳ್ಳಲು ಹೋರಾಡಿದ್ದು ನಿಜ. ಆದರೆ ಮೇಲೆ ಹೇಳಿದ ನಾಲ್ಕನೇ ನಮೂನೆಯ ಹೋರಾಟದ ಹಿಂದೆ ಒಂದು ವಿಶೇಷವಾದ 'ಸ್ವ' ಪ್ರಜ್ಞೆ ಇದೆ. ಅದು ಸಂಸ್ಕೃತಿಯ ಕುರಿತಾದ ಪ್ರಜ್ಞೆ ಕೂಡ ಹೌದು.

1857ರ ಸಂಗ್ರಾಮವನ್ನು ಸ್ವಾತಂತ್ರ್ಯ ಸಂಗ್ರಾಮವೆಂದು ಮೊದಲ ಬಾರಿಗೆ ಸಾವರ್ಕರರು ಕರೆದುದು ಸರಿಯೇ ಇದೆ. ಆ ಸಂಗ್ರಾಮಕ್ಕೆ ಕಾರಣ ಸೀಮಿತವಾದುದಾದರೂ ಆ ಹೋರಾಟದ ಒಟ್ಟಾರೆ ಪರಿಣಾಮ ಮಹತ್ತ್ವದ್ದೇ. ಅದರ ನಂತರವಷ್ಟೇ ಮೇಲೆ

ಹೇಳಿದ ನಾಲ್ಕನೇ ನಮೂನೆಯ, ಬಹುಮಟ್ಟಿಗೆ ಭಾರತವ್ಯಾಪಿಯಾದ ಹೋರಾಟವನ್ನು ನಾವು ಕಾಣುತ್ತೇವೆ. ಭಾರತೀಯರ ಸ್ವತ್ವದ ಅರಿವು ಮೂಡಿಸಿದ ತಿಲಕ್, ವಿವೇಕಾನಂದರಂಥವರ ಕೊಡುಗೆಯೂ ಇಲ್ಲಿ ಗಮನಾರ್ಹ.

ಭಾರತೀಯ ಪರಂಪರೆಯ ಬಗ್ಗೆ ಅಭಿಮಾನದಿಂದ ಮಾತನಾಡುವವರು "ಭಾರತೀಯರು ಬೇರೆಯವರ ಮೇಲೆ ಆಕ್ರಮಣ ಮಾಡಿದುದಿಲ್ಲ" ಎಂದು ಹೇಳುವುದಿದೆ. ಅದೇ ಹೊತ್ತಿಗೆ, ಹೀಗೆ ಅಭಿಮಾನ ಪಡುವುದನ್ನು ಆಕ್ಷೇಪಿಸುವವರು ಭಾರತದ ರಾಜರುಗಳು ಒಬ್ಬರ ಮೇಲೆ ಒಬ್ಬರು ಯುದ್ಧ ಸಾರಿದ್ದಿಲ್ಲವೇ? ದಿಗ್ವಿಜಯದ ಕಲ್ಪನೆ ಇಲ್ಲವೆ?" ಎಂದೆಲ್ಲ ಪ್ರಶ್ನಿಸುವುದೂ ಇದೆ. ಆಕ್ರಮಣ ಮಾಡಿಲ್ಲ ಎನ್ನುವಾಗ ಇಲ್ಲಿ ಮುಖ್ಯವಾಗಿ ಗಮನಿಸಬೇಕಾದುದು ಏನು? ರಾಜ್ಯಗಳನ್ನು ಸ್ವಾಧೀನ ಮಾಡಿಕೊಂಡು ಅಲ್ಲಿಯ ಸ್ಥಳೀಯ ಅರಸರಿಂದಲೋ ಸಾಮಂತರಿಂದಲೋ ಕಪ್ಪಕಾಣಿಕೆ ಪಡೆಯುವುದು ಬೇರೆ; ಅಲ್ಲಿಯ ಪ್ರಜೆಗಳ ಸಂಸ್ಕೃತಿಯ ಸ್ವತ್ವವನ್ನು ನಾಶ ಮಾಡುವುದು ಬೇರೆ. ಭಾರತೀಯ ಪುರಾಣಗಳಲ್ಲಾಗಲೀ ಇತಿಹಾಸದಲ್ಲಾಗಲೀ ಯಾವ ಗೆದ್ದ ರಾಜರೂ ಆ ಬಗೆಯಲ್ಲಿ ಸ್ಥಳೀಯರ ಸ್ವತ್ವವನ್ನು ನಾಶ ಮಾಡುವುದನ್ನು ಆಡಳಿತ ನೀತಿಯ ಭಾಗವಾಗಿ ಮಾಡಿಕೊಂಡದ್ದು ಇಲ್ಲ.

ಹಿಂದಿನ ಶಕ, ಹೂಣ, ಗ್ರೀಕ್ ಮೊದಲಾದವರ ದಾಳಿಗಿಂತ ಭಿನ್ನವಾಗಿದ್ದ ಇಸ್ಲಾಮಿಕ್ ದಾಳಿ ಮತ್ತು ಐರೋಪ್ಯರ ದಾಳಿಯು ಕೇವಲ ರಾಜ್ಯಾಧಿಕಾರ ಹಿಡಿಯುವ ರಾಜಕೀಯ ಉದ್ದೇಶದಲ್ಲಿ ಮುಕ್ತಾಯವಾಗಲಿಲ್ಲ. ಇಲ್ಲಿಯ ಸಂಸ್ಕೃತಿಯನ್ನು, ಶ್ರದ್ಧೆಯನ್ನು, ಸ್ವತ್ವವನ್ನು ಧ್ವಂಸ ಮಾಡುವುದು ಕೂಡ ಕ್ರಮೇಣ ಆಡಳಿತ ನೀತಿಯ ಭಾಗವಾಯಿತು. ಶೇವಿರೆಯವರು ಸರಿಯಾಗಿಯೇ ಗುರುತಿಸುವಂತೆ, ಅವರ ಕೈಯಲ್ಲಿ ಕುರಾನ್, ಬೈಬಲ್‌ಗಳೂ ಇದ್ದವು. ತಮ್ಮ ರಿಲಿಜನ್ನಿಗೆ ಸೇರದವರನ್ನು (ಸತ್ಯವಿಶ್ವಾಸಿಗಳಲ್ಲದವರನ್ನು) ಉದ್ಧಾರ ಮಾಡುವ ಸ್ವಪ್ರೇರಿತ ಹೊರೆಯೂ ಅವರ ಹೆಗಲ ಮೇಲೆ ಇತ್ತು.

ಟಿಪ್ಪು ಸುಲ್ತಾನ ಸ್ವಾತಂತ್ರ್ಯ ಹೋರಾಟಗಾರನೇ ಅಲ್ಲವೇ ಎಂಬ ವ್ಯರ್ಥ ಚರ್ಚೆಯನ್ನು ಕೆಲವರು ಮಾಡುವುದಿದೆ. ಆತ ಬ್ರಿಟಿಷರ ವಿರುದ್ಧ ಹೋರಾಡಿದ್ದಂತೂ ಸತ್ಯ. ಈಗಾಗಲೇ ನೀಡಿದ ವಿವರಗಳ ಹಿನ್ನೆಲೆಯಲ್ಲಿ ಆ ಹೋರಾಟವನ್ನು ಹೇಗೆ ಬೇಕಾದರೂ ವ್ಯಾಖ್ಯಾನಿಸಬಹುದು. ಆದರೆ ಮುಖ್ಯ ಪ್ರಶ್ನೆ ಅದಲ್ಲ. ಬ್ರಿಟಿಷರ ವಿರುದ್ಧ ಹೋರಾಡಿದ ಇತರ ದೇಶೀಯ ರಾಜ/ರಾಣಿಯರಿಗೂ ಟಿಪ್ಪುವಿಗೂ ಇರುವ ವ್ಯತ್ಯಾಸ ಏನು ಎನ್ನುವುದು. ತನ್ನ ಪ್ರಜೆಗಳ ಸಂಸ್ಕೃತಿಯನ್ನು ಅಥವಾ ಸ್ವತ್ವವನ್ನು ನಾಶ ಮಾಡುವುದನ್ನು, ಬಲಾತ್ಕಾರವಾಗಿ ಮತಾಂತರ ಮಾಡುವುದನ್ನು ಆಡಳಿತ ನೀತಿಯ ಭಾಗವಾಗಿ ಮಾಡಿಕೊಂಡವನು ಟಿಪ್ಪು. ಇದಕ್ಕೆ ಬೇಕಾದಷ್ಟು ನಂಬಲರ್ಹ ದಾಖಲೆಗಳಿವೆ. ಇದುವೇ ಇತರ ರಾಜರಿಗೂ ಟಿಪ್ಪುವಿಗೂ ಇರುವ ವ್ಯತ್ಯಾಸ. ಅವನು ದೇವಾಲಯಗಳಿಗೆ ಮತ್ತು ಮಠಗಳಿಗೆ ನೀಡಿದ ದತ್ತಿ ಇತ್ಯಾದಿ ಯಾವುದೂ ಈ ಸತ್ಯವನ್ನು ತೊಡೆದು ಹಾಕಲಾರದು. ಯಾಕೆಂದರೆ ಟಿಪ್ಪುವಿನ ಹೆಗಲ ಮೇಲೆಯೂ ಇತರರನ್ನು ಉದ್ಧರಿಸುವ ಆ ಸ್ವಪ್ರೇರಿತ ಹೊರೆ ಇತ್ತು.

ಮತಾಂತರ ಮಾಡುವುದನ್ನು ಆಡಳಿತ ನೀತಿಯ ಭಾಗವಾಗಿ ಮಾಡಿಕೊಂಡ ನಂತರ, ಆಡಳಿತದಲ್ಲಿ ಕೆಲವು ಹಿಂದೂ ನೌಕರರನ್ನು ಇಟ್ಟುಕೊಂಡು, ದೇವಾಲಯಗಳಿಗೆ ಉಂಬಳಿ, ದತ್ತಿ ಕೊಟ್ಟ ಕೂಡಲೇ ಟಿಪ್ಪು ಸುಲ್ತಾನ ನಮ್ಮ ಎಡಪಂಥೀಯ ಇತಿಹಾಸಕಾರರಿಗೆ ಕೋಮುಸೌಹಾರ್ದದ ಆದರ್ಶಪುರುಷನಂತೆ ಕಾಣುತ್ತಾನೆ. ಆದರೆ,

ಅದೇ ಎಡಪಂಥೀಯರಿಗೆ ಸ್ವಾತಂತ್ರ್ಯೋತ್ತರ ಭಾರತದಲ್ಲಿ ಮುಸ್ಲಿಮರ ಅಥವಾ ಅಲ್ಪಸಂಖ್ಯಾತರ ಮೇಲಿನ ದೌರ್ಜನ್ಯವನ್ನು ಆಡಳಿತ ನೀತಿಯ ಭಾಗವಾಗಿ ಯಾವ ರೀತಿಯಲ್ಲೂ ಮಾಡಿಕೊಳ್ಳದ ಮತ್ತು ಅಲ್ಪಸಂಖ್ಯಾತರ ಖಾತೆ, ವಕ್ಫ್ ಖಾತೆ, ಹಜ್ ಸಬ್ಸಿಡಿ ಇತ್ಯಾದಿ ಮೂಲಕ ಅಲ್ಪಸಂಖ್ಯಾತರಿಗೆ ಅನುಕೂಲ ಮಾಡಿಕೊಡುವಂತೆ ಆಡಳಿತ ನಡೆಸುವ ರಾಜಕೀಯ ನಾಯಕರು ಕೂಡ ಕೋಮುವಾದಿಗಳಾಗಿ ಮತ್ತು ಫ್ಯಾಸಿಸ್ಟುಗಳಾಗಿಯೇ ಕಾಣುತ್ತಾರೆ!

❖❖❖

* ಚಿಂತನ ಬಯಲು ತ್ರೈಮಾಸಿಕ ಪತ್ರಿಕೆಯನ್ನು ವೃತ್ತಿಪರವಾಗಿ ನಡೆಸಿಕೊಂಡು ಹೋಗ ಬೇಕೆಂಬುದು ನಮ್ಮ ಅಪೇಕ್ಷೆ.
* ಈ ಪತ್ರಿಕೆ ISSN ಮಾನ್ಯತೆ ಪಡೆದಿರುತ್ತದೆ. ISSN 2278-2192
* ಯುಜಿಸಿ ಕೇರ್ ಲಿಸ್ಟ್‌ನಲ್ಲಿ ಇದೆ.
* ಗಂಭೀರ ಚಿಂತನೆಯನ್ನೊಳಗೊಂಡ ಲೇಖನಗಳು, ವಿಮರ್ಶಾ ಲೇಖನಗಳು ಹಾಗೂ ಸಂಶೋಧನಾತ್ಮಕ ಲೇಖನಗಳನ್ನು ಪ್ರಕಟಣೆಗಾಗಿ ಆಹ್ವಾನಿಸುತ್ತಿದ್ದೇವೆ.
* ಇಲ್ಲಿ ಪ್ರಕಟವಾಗುವ ಲೇಖನಗಳ ಗುಣಮಟ್ಟವನ್ನು ಉಳಿಸಿ ಬೆಳೆಸುವುದಕ್ಕಾಗಿ, ಲೇಖನಗಳನ್ನು ಆಯಾ ಕ್ಷೇತ್ರಗಳಲ್ಲಿ ಪರಿಣತರಾದವರಿಂದ ಸಮೀಕ್ಷೆ ಮಾಡಿಸಿ, ಅಂದರೆ, ಅನಾಮಿಕ ಸಂಪಾದಕರಿಂದ ಅಭಿಪ್ರಾಯ ಪಡೆದು ಪ್ರಕಟಿಸಲಾಗುವುದು. ತಜ್ಞರ ಸೂಚನೆಗಳನ್ನು ಅನುಸರಿಸಿ, ಅವಶ್ಯವೆನಿಸಿದರೆ, ಸೂಕ್ತ ಪರಿಷ್ಕರಣೆಗಳನ್ನು ಮಾಡುವಂತೆ ಲೇಖಕರನ್ನು ಕೋರಲಾಗುವುದು.
* ಲೇಖನಗಳಿಗೆ ಬಹಳ ಕಟ್ಟುನಿಟ್ಟಾದ ಪದಗಳ ಮಿತಿ ಇಲ್ಲ.
* ಯಾವುದೇ ಆಧಾರಗಳಿಲ್ಲದೆ, ಕೇವಲ ಹೇಳಿಕೆ, ಅಭಿಪ್ರಾಯ ರೂಪದ ಬರಹಗಳನ್ನು ದಯವಿಟ್ಟು ಕಳುಹಿಸುವುದು ಬೇಡ. ಅಗತ್ಯವಿರುವ ಕಡೆಗಳಲ್ಲಿ ಟಿಪ್ಪಣಿ, ಪರಾಮರ್ಶನ ಗ್ರಂಥಗಳು ಇತ್ಯಾದಿ ಮಾಹಿತಿಗಳನ್ನು ಲೇಖನಗಳು ಹೊಂದಿರಲಿ.
* ಲೇಖನಗಳು ಬೇರೆ ಕಡೆ ಪ್ರಕಟವಾಗಿರಬಾರದು. ಜಾಲಲೇಖ (ಬ್ಲಾಗ್)ಗಳಲ್ಲಿ ಪ್ರಕಟವಾಗಿದ್ದರೆ ವಿವರಗಳನ್ನು ನೀಡಬೇಕು. ಅನುವಾದಿತ ಲೇಖನಗಳಾದರೆ ಮೂಲದ ಬಗ್ಗೆ ಪೂರ್ಣವಿವರ ಹಾಗೂ ಮೂಲಲೇಖಕರ ಅನುಮತಿ ಇತ್ಯಾದಿ ತಾಂತ್ರಿಕ ಆವಶ್ಯಕತೆಗಳನ್ನು ಪೂರೈಸಿರಬೇಕು.
* ಲೇಖನಗಳನ್ನು ನುಡಿ ತಂತ್ರಾಂಶದಲ್ಲಿ ವರ್ಡ್‌ಫೈಲ್‌ನಲ್ಲಿ ಕಳುಹಿಸಬೇಕು.
* ಲೇಖಕರು ತಮ್ಮ ಪೂರ್ಣ ಅಂಚೆ ವಿಳಾಸ, ಮಿಂಚಂಚೆ ವಿಳಾಸ ಹಾಗೂ ದೂರವಾಣಿ ಸಂಖ್ಯೆಗಳನ್ನು ಕಡ್ಡಾಯವಾಗಿ ನಮೂದಿಸಿರಬೇಕು.
* ಓದುಗರ ಪ್ರತಿಕ್ರಿಯೆಗಳನ್ನು ಸ್ವಾಗತಿಸುತ್ತೇವೆ.
* ಚಂದಾದಾರರಿಗೆ ವಂಚನೆಯಾಗುವಂತೆ ಪತ್ರಿಕೆಯನ್ನು ಅರ್ಧದಲ್ಲಿ ನಿಲ್ಲಿಸುವುದಿಲ್ಲ.
* ಸಂಪರ್ಕ ವಿಳಾಸ : ಸಂಪಾದಕರು, ಚಿಂತನ ಬಯಲು, ನಂ. 15–109
  ಮೊಡಂಕಾಪು ಅಂಚೆ, ಬಂಟ್ವಾಳ ತಾಲೂಕು, ದಕ್ಷಿಣ ಕನ್ನಡ–574219
  ಮಿಂಚಂಚೆ : chinthanabayalu@gmail.com

RNI Reg No. : KARKAN /2012/49251

CHINTHANA BAYALU **A Peer Reviewed Journal** **ISSN 2278-2192**
Kannada Quarterly, Volume 12, Issue 1, July - September 2023
Included in UGC - CARE List
Edited, Published, Printed & Owned by
Reshma G. Bhat
Door No. 15-109, Modankapu Post
Bantwal Taluk, Dakshina Kannada - 574 219
Printed at
Aakrithi Prints
Light House Hill Road, Mangaluru - 575 001

Pages : 64

ವಾರ್ಷಿಕ ಚಂದಾ : ರೂಪಾಯಿ ಇನ್ನೂರು
(ಅಂಚೆ ವೆಚ್ಚ ಸೇರಿ)
ಮೂರು ವರ್ಷಗಳಿಗೆ : ರೂಪಾಯಿ ಆರುನೂರು
ಐದು ವರ್ಷಗಳಿಗೆ : ರೂಪಾಯಿ ಒಂದು ಸಾವಿರ
ಆಜೀವ (ಪೋಷಕ) ಚಂದಾ : ರೂಪಾಯಿ ಐದು ಸಾವಿರ
ಮಹಾಪೋಷಕ ಚಂದಾ : ರೂಪಾಯಿ ಹತ್ತು ಸಾವಿರ
ಬಿಡಿ ಪ್ರತಿ : ರೂಪಾಯಿ ಐವತ್ತು

ದಯವಿಟ್ಟು ಡಿ.ಡಿ./ ಎಂ.ಓ.ಗಳನ್ನು 'ಚಿಂತನ ಬಯಲು' ಹೆಸರಿನಲ್ಲಿ ಪತ್ರಿಕೆಯ ವಿಳಾಸಕ್ಕೆ ಕಳುಹಿಸಿ. ಚೆಕ್/ಡಿ.ಡಿ. ಮಂಗಳೂರಿನಲ್ಲಿ ಸಂದಾಯವಾಗುವಂತಿರಲಿ. ದಯವಿಟ್ಟು ಹೊರ ಊರಿನ ಚೆಕ್ ಕಳುಹಿಸಬೇಡಿ. ಎಲ್ಲಕ್ಕಿಂತ ಸುಲಭವಾಗಿ ಈ ಕೆಳಗಿನ ಖಾತೆಗೆ ನೇರವಾಗಿ ಸಂದಾಯ ಮಾಡಿ ಪೂರ್ಣವಿಳಾಸ ಹಾಗೂ ದೂರವಾಣಿ ಇತ್ಯಾದಿ ವಿವರಗಳೊಂದಿಗೆ ಸಂದಾಯದ ವಿವರಗಳನ್ನು ಬರೆಯಬಹುದು ಅಥವಾ ಮಿಂಚಂಚೆ ಮೂಲಕ ತಿಳಿಸಬಹುದು. ಬ್ಯಾಂಕ್ ಚಾರ್ಜನ್ನು ಚಂದಾದಾರರೇ ದಯವಿಟ್ಟು ಭರಿಸಬೇಕು.

ಕರ್ಣಾಟಕ ಬ್ಯಾಂಕ್
ಬಂಟ್ವಾಳ ಮೂಡ ಶಾಖೆಯಲ್ಲಿ
ಚಿಂತನ ಬಯಲು ಹೆಸರಿನಲ್ಲಿರುವ

ಕರೆಂಟ್ ಅಕೌಂಟ್ ಸಂಖ್ಯೆ : 0712000100041401

IFSC : KARB0000071

ಸುಲಭ ಬ್ಯಾಂಕಿಂಗ್ ಸೇವೆಗಾಗಿ ನಿಮ್ಮ ಹತ್ತಿರದ ಶಾಖೆಯನ್ನು ಸಂಪರ್ಕಿಸಿ ಅಥವಾ 1800 425 1444 ಗೆ ಕರೆ ಮಾಡಿರಿ.

ಕರ್ಣಾಟಕ ಬ್ಯಾಂಕ್ ಲಿ.
ನಿಮ್ಮ ಕುಟುಂಬದ ಬ್ಯಾಂಕ್. ಭಾರತದಾದ್ಯಂತ.
ನೋಂದಾಯಿತ ಹಾಗೂ ಪ್ರಧಾನ ಕಚೇರಿ: ಮಂಗಳೂರು - 575 002
ಇಮೇಲ್: info@ktkbank.com ವೆಬ್‌ಸೈಟ್: www.karnatakabank.com